ಶ್ರೀ ವೇಂಕಟೇಶಭಕ್ತಾಗ್ರಣಿ

# ಶ್ರೀಮದನಂತಾರ್ಯ ಚರಿತ್ರೆ.



ಅನುವಾದಕರು :

ಶ್ರೀ॥ ಎಸ್. ಜಿ. ಗೋವಿಂದರಾಜಅಯ್ಯಂಗಾರ್ಯರು.

ಪ್ರಕಾಶಕ :

ಎಂ. ರಾಜಗೋಪಾಲ್ ನಾಯ್ಡು.



ಶ್ರೀ ಮಧುರಕವಿ ಆಳ್ವಾರ್‌ರವರ ಬಲಗಡೆ, ಕಥಾನಾಯಕರಾದ
ಶ್ರೀಮದನಂತಾರ್ಯರು ನಿಂತಿರುವರು.

(41 ನೇ ಪುಟ ನೋಡಿರಿ.)

ಶ್ರೀವೇಂಕಟೇಶಭಕ್ತಾಗ್ರೇಸರ

# ಶ್ರೀಮದನಂತಾರ್ಯಚರಿತ್ರೆ.

ಶ್ರೀಮದಿತ್ಯಾದಿ ಎಸ್. ಜಿ. ಗೋವಿಂದರಾಜಯ್ಯಂಗಾರ್ಯರಿಂದ

ಬರೆಯಲ್ಪಟ್ಟು

ಮ॥ ರಾ॥ ಎಂ. ರಾಜಗೋಪಾಲ್ ನಾಯುಡು

ರವರಿಂದ ತಮ್ಮ

ರಾಜಗೋಪಾಲ್ ಫೋಟೋ-ಜಿಂಕೊ ಅಂಡ್ ಪವರ್ ಪ್ರಿಂಟಿಂಗ್ ವರ್ಕ್ಸ್,
ಬೆಂಗಳೂರು ಸಿಟಿ ಇಲ್ಲಿ ಅಚ್ಚಾಗಿ ಪ್ರಕಟಿಸಲ್ಪಟ್ಟಿರುತ್ತೆ.

ಬೆಂಗಳೂರು ಸಿಟಿ.

1942.

All rights reserved. ಬೆಲೆ ಎಂಟು ಆಣೆ.

# ಧನ್ಯವಾದಗಳು.

ಈ ಚರಿತ್ರೆಯನ್ನು, ಇತರ ಭಾಷೆಗಳ ಪರಿಚಯವು ಸಾಲದ ಕನ್ನಡ ನಾಡಿನವರೂ ಓದಿ, ಆನಂದಪಡಲಿ, ಎಂಬ ಉದಾರಭಾವನೆಯಿಂದ, ಬೆಂಗಳೂರಿನಲ್ಲಿರುವ ಶ್ರೀ ಎಸ್. ಜಿ. ಗೋವಿಂದರಾಜಯ್ಯಂಗಾರ್ಯರವರು ಬರೆದು ನಮ್ಮೆಲ್ಲರಿಗೂ ಮಹೋಪಕಾರಮಾಡಿರುತ್ತಾರೆ. ಈ ಗ್ರಂಥವನ್ನು ಪ್ರಕಟಿಸಲು ಪ್ರೋತ್ಸಾಹಕರುಗಳಾದ, ಮೇಲುಕೋಟೆಯ ಮಂಡಯಂ ಆನಂದಾಳ್‌ಪಿಳ್ಳೈ ರಂಗಯ್ಯರ್ (ದಾಮೋದರ) ಅಳಸಿಂಗರಾಚಾರ್ಯರವರಿಗೂ, ಮೈಸೂರಿನಲ್ಲಿರುವ ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ರಾಮಾನುಜಪುರಂ ಆನಂದಾಳ್‌ಪಿಳ್ಳೈ ತಿರುನಾರಾಯಣಯ್ಯಂಗಾರ್ ಸ್ವಾಮಿಗಳವರಿಗೂ, ಬೆಂಗಳೂರಿನಲ್ಲಿರುವ ಮಂಡಯಂ ತೊಂಡನೂರು ರಾಮಸ್ವಾಮಿ ಅಯ್ಯಂಗಾರ್ಯರವರಿಗೂ, ಮೈಸೂರಿನಲ್ಲಿರುವ ರಿಟೈರ್ಡ್ ಸಬ್‌ರಿಜಿಸ್ಟ್ರಾರ್, ಎಂ.ಎ. ನಾರಾಯಣಯ್ಯಂಗಾರ್ಯರವರಿಗೂ ಪ್ರಕಾಶಕರು ಕೃತಜ್ಞರಾಗಿರುತ್ತಾರೆ.

ಈಗಿನ ಯುದ್ಧಕಾಲದಲ್ಲಿ, ಕಾಗದದ ಬೆಲೆ ತುಂಬ ಹೆಚ್ಚಿದ್ದರೂ, ಈ ಪುಸ್ತಕವನ್ನು ಅಚ್ಚುಹಾಕಲು ಬೇಕಾದ ಕಾಗದವನ್ನೆಲ್ಲಾ ಉಚಿತವಾಗಿ ಒದಗಿಸಿಕೊಟ್ಟು, ಹಿಂದೆ ಮೆ॥ ಎಂ.ಎ. ನಾರಾಯಣಯ್ಯಂಗಾರ್ಯರೆಂದು ಇಲ್ಲಿಯೇ ಎಕ್ಸೈಜ್ ಕಮಿಷನರಾಗಿದ್ದು, ಸರ್ಕಾರದ ಕೆಲಸದಿಂದ ವಿಶ್ರಾಂತಿಯನ್ನು ಪಡೆದ ಮೇಲೆ, ಶ್ರೀರಾಮಕೃಷ್ಣ ಪರಮಹಂಸರ ಪಂಥದ ಸನ್ಯಾಸಿಗಳಾಗಿ ಬಿಜಯಮಾಡಿಸಿರುವ ಶ್ರೀ ಶ್ರೀವಾಸಾನಂದ ಸ್ವಾಮಿಗಳವರಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು.

ಶ್ರೀಃ

# ಗ್ರಂಥವಿಮರ್ಶೆ

ಇದು ಮುಖ್ಯವಾಗಿ "ಅನಂತಾರ್ಯಮಹಿಮಕಥಾಸಂಗ್ರಹಂ" ಎಂಬ ಸಂಸ್ಕೃತ ಗದ್ಯಗ್ರಂಥದ ಅನುವಾದವಾಗಿರುತ್ತದೆ. ಕೆಲವು ಅಂಶಗಳನ್ನು, ತಿರುಪತಿ ದೇವಸ್ಥಾನದ ಕಮಿಟಿಯುವರು ಪ್ರಕಟಿಸಿರುವ "ಶ್ರೀ ವೇಂಕಟೇಶ ಇತಿಹಾಸಮಾಲಾ" ಎಂಬ ಸಂಸ್ಕೃತಗ್ರಂಥದಿಂದಲೂ, "ವಾರ್ತಾಮಾಲಾ" ಎಂಬ ದ್ರಾವಿಡಗ್ರಂಥದಿಂದಲೂ ಸಂಗ್ರಹಿಸಲಾಗಿದೆ. ಈ ಚರಿತ್ರನಾಯಕರನ್ನು ತಮಿಳು ಭಾಷೆಯಲ್ಲಿ 'ಅನಂತಾಳ್ವಾರ್' ಎಂದು ಹೇಳುತ್ತಾರೆ. ಇವರ ವಿಷಯವಾಗಿ ಪ್ರಾಚೀನರು ಬರೆದಿಟ್ಟ ಅನೇಕ ವಿಷಯಗಳನ್ನು ಕ್ರೋಡೀಕರಿಸಿ, ಇವರ ವಂಶೀಕರಾದ ಶ್ರೀರಂಗಾಚಾರ್ಯರೆಂಬವರು, ಶ್ರೀ ವೇಂಕಟಾದ್ರಿ ಶ್ರೀಮದನಂತಾರ್ಯಮಹಿಮಕಥಾಸಂಗ್ರಹವನ್ನು ಆರು ಪ್ರಕರಣಗಳಾಗಿ ಬರೆದಿಟ್ಟಿರುತ್ತಾರೆ. ಈ ಶ್ರೀರಂಗಾಚಾರ್ಯರು ಕಾಂಚೀನಗರಕ್ಕೆ ಸಮೀಪದಲ್ಲಿರುವ 'ಪುರಿಶೈ' ಎಂಬ ಗ್ರಾಮದಲ್ಲಿ ಹುಟ್ಟಿ, ತಾವೂ ತಮ್ಮ ಹಿಂದಣವರಂತೆ ಶ್ರೀ ವೇಂಕಟಾದ್ರಿಯಲ್ಲಿ ಇದ್ದುಕೊಂಡು ಶ್ರೀನಿವಾಸದೇವರ ಕೈಂಕರ್ಯವನ್ನು ಮಾಡುತ್ತಿದ್ದರು. ಇವರನ್ನು ಕುರಿತು ಹಿಂದಣವರು ಹೀಗೆ ಶ್ಲೋಕವನ್ನು ಬರೆದಿಟ್ಟಿರುತ್ತಾರೆ:

> ಶ್ರೀ ವೇಂಕಟೇಶಕರುಣಾಕಲಿತಾಭಿಷೇಕಂ
> ಶ್ರೀ ಮತ್ಫಣೀಂದ್ರ ಕುಲವಾರಿಧಿಪೂರ್ಣಚಂದ್ರಂ ।
> ಶ್ರೀ ಕೃಷ್ಣಸೂರಿಸುತಶಿಷ್ಯಮನರ್ಘಶೀಲಂ
> ಶ್ರೀರಂಗಸೂರಿಮನಘಂ ಶರಣಂ ಪ್ರಪದ್ಯೇ ॥

ಶ್ರೀರಂಗಾಚಾರ್ಯರು ಈ ಗ್ರಂಥವಲ್ಲದೆ 'ಶ್ರೀ ವೆಂಕಟೇಶಗದ್ಯ,' 'ಶ್ರೀ ರಾಮಾನುಜಾಚಾರ್ಯಗೀತೆ,' 'ವರವರಮುನಿಗೀತೆ,' 'ಅನಂತಾರ್ಯಗೀತೆ,' 'ಶ್ರೀ ಶುಕಪುರೀಪದ್ಮಾವತೀಗೀತೆ' ಎಂಬುವನ್ನೂ ರಚಿಸಿರುತ್ತಾರೆ. ಇವರು ಸುಮಾರು 150 ವರ್ಷಗಳ ಹಿಂದೆ ಇದ್ದಿರಬೇಕು.

# ಬಿನ್ನಹ.

ಈ ಚರಿತ್ರನಾಯಕರಾದ ಶ್ರೀಮದನಂತಾರ್ಯರು, ಶ್ರೀರಂಗಪಟ್ಟಣಕ್ಕೆ 2 ಮೈಲಿಗಳ ದೂರದಲ್ಲಿ ಕಾವೇರೀನದಿಯ ಬಡಗ ದಂಡೆಯಲ್ಲಿ ತಮಿಳಿನಲ್ಲಿ 'ಶಿರುಪುತ್ತೂರ್' ಎಂತಲೂ, ಸಂಸ್ಕೃತದಲ್ಲಿ 'ಲಘುಮೂತನಪುರಿ' ಎಂತಲೂ ಹೇಳಲ್ಪಡು

ತ್ತಿದ್ದು, ಈಗ 'ಹಳೆಯ ಕಿರಂಗೂರು' ಎಂದು ಕರೆಯಲ್ಪಡುತ್ತಿರುವ ಗ್ರಾಮದಲ್ಲಿ ಹುಟ್ಟಿ ಬಳೆದರು. ಶ್ರೀಮದನಂತಾರ್ಯರು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಕೆಲವು ಕಾಲ ಶಿರುಪುತ್ತೂರಿನಲ್ಲಿಯೇ ಇದ್ದರು. ಆ ವೇಳೆಗೆ, ಇವರಿಗೆ ಕನಿಷ್ಠಪಕ್ಷ 30-32 ವಯಸ್ಸಿದ್ದಿರಬೇಕು ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸ್ಥಾಪನೆಮಾಡಿ, ಶ್ರೀರಂಗದಲ್ಲಿ ಶಿಷ್ಯವರ್ಗಕ್ಕೆ ತತ್ವಹಿತಪುರುಷಾರ್ಥಗಳನ್ನು ಉಪದೇಶಿಸುತ್ತ ಬಿಜಯಮಾಡಿದ್ದಾರೆ. ಎಂಬ ಸುದ್ದಿಯನ್ನು ಕೇಳಿ, ಕುಟುಂಬಸಮೇತರಾಗಿ ಶ್ರೀರಂಗಕ್ಕೆ ಪಯಣಮಾಡಿ ಅವರ ಶಿಷ್ಯರಾಗಿದ್ದು, ವೇಂಕಟಾಚಲಕ್ಕೆ ಹೋಗಿ, ಅಲ್ಲಿ ಬಾವಿ, ಕೆರೆ, ತೋಟಗಳನ್ನು* ನಿರ್ಮಿಸಿ ಶ್ರೀನಿವಾಸನಿಗೆ ಪುಷ್ಪಕೈಂಕರ್ಯವನ್ನು ಮಾಡಿಕೊಂಡಿದ್ದರು. ಇವರು ಕಟ್ಟಿಸಿದ ತಟಾಕಕ್ಕೆ ರಾಮಾನುಜ ತಟಾಕವೆಂದು ಹೆಸರು ಕೊಟ್ಟಿದ್ದರು; ಆದರೆ ಈಗ ಅದನ್ನು ಕಟ್ಟಿದವರ ಹೆಸರಿನಲ್ಲಿಯೇ "ಆಳ್ವಾರ್ ಚೆರುವು" ಎಂದು ಜನರು ಕರೆಯುತ್ತಾರೆ. ಈ ಕೆರೆಯಿಂದಲೇ ಈಗ ವೇಂಕಟಾದ್ರಿಯಲ್ಲಿ ಕೊಳಾಯಿಗಳ ಮೂಲಕ ಕುಡಿಯುವ ನೀರು ಬರುತ್ತಿದೆ. ಕೆರೆಯನ್ನು ಕಟ್ಟುತ್ತಿರುವಾಗ ಪೂರ್ಣ ಗರ್ಭಿಣಿಯಾಗಿದ್ದ ಇವರ ಹೆಂಡತಿಯು ಮಣ್ಣು ಹೊರುತ್ತಾ ಕಷ್ಟಪಡುತ್ತಿದ್ದುದನ್ನು ನೋಡಿ, ವಟುವೇಷಧಾರಿಯಾಗಿ ಬಂದಿದ್ದ ಶ್ರೀ ವೇಂಕಟೇಶನು ಇವರಿಗೆ ತಿಳಿಯದಂತೆ ಅವಳಿಗೆ ಬದಲಾಗಿ ತಾನೇ ಮಣ್ಣನ್ನು ಸಾಗಿಸುತ್ತಿದ್ದನು; ಇದನ್ನು ತಿಳಿದು ಕೋಪಗೊಂಡು ತಾನು ಮಾಡುತ್ತಿದ್ದ ದೇವರ ಊಳಿಗಕ್ಕೆ ಕೈಯ್ಯಿ ಹಾಕಿದನಲ್ಲಾ ಎಂದು ತಮ್ಮ ಕಯ್ಯಲ್ಲಿದ್ದ ಸನಿಕೆಯಿಂದ ಅವನ ಗಡ್ಡವನ್ನು ಹೊಡೆದು ಗಾಯಗೊಳಿಸಿದರು ಆದರೂ ಶ್ರೀನಿವಾಸನು ಅವರ ಮೇಲೆ ಕೋಪಗೊಳ್ಳದೆ ಅದರಿಂದಲೇ ಸುಪ್ರೀತನಾಗಿ, ಆ ಗಾಯವು ತನ್ನ ಮುಖಶೋಭೆಗೆ ಅಲಂಕಾರವಾಯಿತೆಂದು, ಹೊಡೆದ ಖನಿತ್ರವನ್ನು ತನ್ನ ಮಂದಿರದ ಮಹಾದ್ವಾರದಲ್ಲಿ ಎತ್ತರವಾದೆಡೆಯಲ್ಲಿ ಇರಿಸಬೇಕೆಂತಲೂ ತನ್ನ ಗಡ್ಡಕ್ಕೆ ಸುವಾಸನೆಯಾದ ಪಚ್ಚಕರ್ಪೂರದ ಪುಡಿಯನ್ನು ಸರ್ವದಾ ಸಮರ್ಪಿಸಬೇಕು, ಎಂತಲೂ ತಾನೇ ವ್ಯವಸ್ಥೆಮಾಡಿದನು.

ಆಚಾರ್ಯರ ನಿಯಮನದಂತೆ ಕೈಂಕರ್ಯಮಾಡುತ್ತಿರುವಾಗ, ಭಗವಂತನೇ ಬಂದು ಅಡ್ಡಿಮಾಡಿದರೂ ಲೆಕ್ಕಿಸದೆ, ಭಕ್ತರು ಅವನನ್ನು ದಂಡಿಸಿದರೂ, ಅವನು ಸುಪ್ರೀತನಾಗುತ್ತಾನೆ ಎಂಬುದನ್ನು ಇದರಿಂದ ಅನಂತಾರ್ಯರು ಪ್ರಮಾಣಿಸಿಕೊಟ್ಟಿರುತ್ತಾರೆ. ಆಚಾರ್ಯನಿಯಮನದಂತೆ ಭಗವತ್ ಕೈಂಕರ್ಯವನ್ನು ನೆರವೇರಿಸುತ್ತಿ

---

*ಇವರಂತೆಯೇ, ಇವರ ಕುಮಾರರೂ ಇವರ ಹೆಸರಿನಲ್ಲಿ ದೇವಾಲಯದ ಈಶಾನ್ಯ ದಿಕ್ಕಿನಲ್ಲಿ ಕೆರೆ, ಬಾವಿ, ತೋಟಗಳನ್ನು ನಿರ್ಮಿಸಿದರು. ಕೆರೆಗೆ "ಅನಂತಾರ್ಯ ತಟಾಕ" ವೆಂದು ಹೆಸರಿದ್ದಿತು. ಅದನ್ನು ಈಗ "ನಾಯುಡುಚೆರುವು" ಎಂದು ಕರೆಯುವುದಾಗಿ ತಿಳಿಯಬರುತ್ತದೆ.

ರುವಾಗ, ನಡುವೆ ದೇವರೇ ಕರೆಸಿದರೂ, ಅವನ ಆಜ್ಞೆಯನ್ನು ನೆರವೇರಿಸಬೇಕಾದುದಿಲ್ಲ, ಅದರಿಂದ ಅವನು ಅಪ್ರೀತನಾಗನು, ಎಂಬುದು ಇವರ ಚರಿತೆಯಿಂದ ತಿಳಿಯುತ್ತದೆ. ಇವರು ಶ್ರೀಮಧುರಕವಿಗಳಂತೆ ಆಚಾರ್ಯನಿಷ್ಠೆಯುಳ್ಳವರು; ಶ್ರೀವೇಂಕಟಾದ್ರಿಯಲ್ಲಿ, ದೇವರ ವಾಮಭಾಗದ ಒಂದು ಮಂಟಪದಲ್ಲಿ, ಶ್ರೀರಾಮಾನುಜಾಚಾರ್ಯರ ವಿಗ್ರಹವನ್ನು ಪ್ರತಿಷ್ಠಿಸಿ, ಪೂಜಾದಿಗಳನ್ನು ಏರ್ಪಡಿಸಿ, ತದ್ವಿಷಯಕವಾಗಿ ದ್ರಾವಿಡ ಭಾಷೆಯಲ್ಲಿ ರಚಿತವಾದ ಶ್ರೀರಾಮಾನುಜಾರ್ಯಶತಕವನ್ನು ಪ್ರತಿವರ್ಷವೂ ಅಧ್ಯಯನೋತ್ಸವ ಕಾಲದಲ್ಲಿ ಪಾರಾಯಣಮಾಡುವಂತೆ ವ್ಯವಸ್ಥೆಮಾಡಿದರು. ಶ್ರೀ ರಾಮಾನುಜಾಚಾರ್ಯರು ಏರ್ಪಡಿಸಿದ 74 ಪೀಠಾಧಿಪತಿಗಳಲ್ಲಿ ಇವರೂ ಒಬ್ಬರು. ಇವರ ನಿಷ್ಕಾಮಕೈಂಕರ್ಯದಿಂದ ಪ್ರೀತನಾದ ಶ್ರೀನಿವಾಸನು, ಇವರಿಗೆ ಶಿಷ್ಯನಾಗಿ, ಇವರ ಸ್ಮಾರಕಪದ್ಯವನ್ನು ಹಾಡಿದ್ದಾನೆ. ಇವರ ಭಕ್ತಿಯಿಂದ ಪ್ರಸನ್ನೆಯಾದ ಶ್ರೀಪದ್ಮಾವತಿಯು, ತಾನು ಇವರ ಮಗಳೆಂದು ಹೇಳಿಕೊಂಡಳು. ಅವಳನ್ನು ಸ್ವಾಮಿಗೆ ಸಮರ್ಪಿಸಿ, ಇವರು ವೇಂಕಟನಾಥನ ಮಾವನೆನಿಸಿಕೊಂಡರು. ಪ್ರತಿವರ್ಷವೂ, ಕನ್ಯಾಮಾಸದ ಕಲ್ಯಾಣೋತ್ಸವದ ಏಳನೆಯದಿನ ಸಾಯಂಕಾಲ, ಉದ್ಯಾನವಿಹಾರೋತ್ಸವದಲ್ಲಿ, ಹಿಂದೆ ಭಗವಂತನು ಈ ಸಂದರ್ಭದಲ್ಲಿ ಅಂಜಿ ಅಪ್ರದಕ್ಷಿಣವಾಗಿ ಪಲಾಯನಮಾಡಿದುದರ ನೆನಪಿಗಾಗಿ, ಭಗವದ್ಯಾತ್ರೆಯು ಈಗಲೂ ಅಪ್ರದಕ್ಷಿಣವಾಗಿಯೇ ನಡೆಯತಕ್ಕದ್ದು, ಅನಂತಾರ್ಯರಿಗೆ ಈ ಯಾತ್ರೆಯಲ್ಲಿ ಭಗವಂತನಿಂದ ಮಾಲೆಯು ಅರ್ಪಿಸಲ್ಪಡತಕ್ಕದ್ದು, ಎಂಟನೆಯ ದಿನ ರಥೋತ್ಸವಯಾತ್ರೆಯಲ್ಲಿ ಜಾಮಾತೃಭಾವದಿಂದ ಭಗವಂತನಿಗೆ ಅನಂತಾರ್ಯರು ನವೀನವಸ್ತ್ರವನ್ನು ಸಮರ್ಪಿಸತಕ್ಕದ್ದು, ಎಂದು ಶ್ರೀ ರಾಮಾನುಜಾಚಾರ್ಯರು ಆಗಲೇ ವ್ಯವಸ್ಥೆಮಾಡಿದರು. ಅಂದಿನಿಂದ, ಪ್ರತಿ ವರ್ಷವೂ, ಶ್ರೀಮದನಂತಾರ್ಯರ ವಂಶೀಕರ ವಿಚಾರದಲ್ಲಿ ಸಹ ಹೀಗೆಯೇ ಕಾರ್ಯವು ನಡೆದು ಬರುತ್ತಿದೆ ಎಂದು ತಿಳಿಯಬರುತ್ತದೆ.

ತಮ್ಮ ಆಚಾರ್ಯರ ಶಾಸನವನ್ನು ಅನುಷ್ಠಿಸಿ ತೋರುವುದೇ ಅನಂತಾರ್ಯರ ಅವತಾರೋದ್ದೇಶವಾದುದರಿಂದ, ಇವರು ಮತಪ್ರಚಾರ ಕಾರ್ಯಕ್ಕೆ ಕಯ್ಯಿಕ್ಕಲಿಲ್ಲ. ಆದರೆ, ಇವರು ಉಪದೇಶವನ್ನೇ ಮಾಡಲಿಲ್ಲವೆಂದಲ್ಲ; ಇವರಿಗೂ ಮೇಲುನಾಡು ಕೀಳುನಾಡುಗಳಲ್ಲಿ ಹಲವರು ಶಿಷ್ಯರಿದ್ದರು. ಇವರು ಸಕಲವಿದ್ಯಾವಿಶಾರದರಾಗಿದ್ದರೂ, ಗ್ರಂಥರಚನಾಕಾರ್ಯಕ್ಕೆ ಹೆಚ್ಚಾಗಿ ಮನಗೊಟ್ಟಂತೆ ಕಾಣುವುದಿಲ್ಲ. ಇದಕ್ಕೂ ಇವರ ಕೈಂಕರ್ಯ ನಿಷ್ಠೆಯೇ ಕಾರಣವಾಗಿರಬೇಕು. ಆದರೂ, ಇವರ ಅತಿಶಯವಾದ ಆಚಾರ್ಯಭಕ್ತಿಯು ಒಳಗಡಗದೆ, ಅವರ ವಾದಿವಿಜಯಪ್ರಖ್ಯಾತಿಯನ್ನು ಸೂಚಿಸುವ "ಧಾಟೀಪಂಚಕ" ವೆಂಬ ಪಂಚಪದ್ಯರೂಪವಾಗಿಯೂ, ಅವರ ಮಂಗಳಾಶಾಸನವನ್ನು ಮಾಡುವ "ರಾಮಾನುಚಾರ್ಯಮಂಗಳ" ವೆಂಬ ದಶಶ್ಲೋಕರೂಪವಾಗಿಯೂ ಹೊರಹೊಮ್ಮಿದೆ. ಶ್ರೀಪರಾಂಕುಶಮುನಿಗಳ ಸಹಸ್ರಗಾಥಾಪಾರಾಯ

ಣಕ್ಕೆ ಪೂರ್ವಭಾವಿಯಾಗಿ, ಸ್ವಾಚಾರ್ಯಸ್ತೋತ್ರರೂಪವಾದ ಒಂದೆರಡು ದ್ರಾವಿಡ ಪದ್ಯಗಳೂ ಇವರಿಂದ ರಚಿತವಾಗಿವೆ. ಇವರು ಬೇರೆ ಯಾವ ಪ್ರಬಂಧಗಳನ್ನು ರಚಿಸಿದ್ದಾರೆಯೋ ತಿಳಿಯದು.

ಇವರು, ತಮ್ಮ ಅವತಾರಸ್ಥಳವಾದ ಶಿರುಪುತ್ತೂ (ಕಿರಂಗೂ) ರಿಗೆ ಆಗಾಗ ಬಿಜಯಮಾಡಿಸುತ್ತಿದ್ದರೆಂದು ವ್ಯಕ್ತಪಡುತ್ತದೆ. ಮೇಲೆ ವಿವರಿಸಿರುವಂತೆ ಕಣ್ಣಿಗೆ ಸ್ಪಷ್ಟವಾಗಿ ಈಗಲೂ ನಡೆದುಬರುತ್ತಿರುವ, ಭಕ್ತರ ಕಾರ್ಯಕಲಾಪಗಳು ಪೂರ್ವಕಾಲದ ಮಿಕ್ಕ ಯಾವ ದೇವಾಲಯದಲ್ಲಿಯೂ ಕಂಡುಬರುವದಿಲ್ಲ. ಆಸೇತು ಹಿಮಾಚಲದ ವರೆಗೂ ಪ್ರಖ್ಯಾತವಾಗಿರುವ ಶ್ರೀವೇಂಕಟನಾಥನ ದೇವಸ್ಥಾನದಲ್ಲಿಯೇ ಈಗಲೂ ನಡೆಯಲು ಕಾರಣಭೂತರಾಗಿರುವ ಭಕ್ತರು ಹುಟ್ಟಿ ಬಳೆದ ನಮ್ಮ ಕರ್ನಾಟಕ ದೇಶವು ಎಲ್ಲರಿಗೂ ಹೆಮ್ಮೆಗೆ ಕಾರಣವಾಗಿರುತ್ತದೆ. ದಕ್ಷಿಣದೇಶದ ಅನೇಕ ಕಡೆಗಳಲ್ಲಿ ಈ ಮಹನೀಯರಿಗಾಗಿ ಪ್ರತ್ಯೇಕದೇವಸ್ಥಾನಗಳು ಸ್ಥಾಪಿತವಾಗಿರುತ್ತವೆ. ಇವರ ಅದ್ಭುತಚರಿತೆಯ ಜ್ಞಾಪಕಾರ್ಥವಾಗಿ ಇವರು ಹುಟ್ಟಿ ಬಳೆದ ಪ್ರದೇಶದಲ್ಲಿ ಒಂದು ಮಂಟಪವನ್ನಾದರೂ ಕಟ್ಟಿಸಿ, ವರ್ಷಂಪ್ರತಿ ಇವರ ಜನ್ಮ ದಿನದಲ್ಲಿಯಾದರೂ ಅಲ್ಲಿ ತಕ್ಕ ಸೇವೆಗಳು ನಡೆಯುವಂತೆ ಏರ್ಪಡಿಸುವುದು ಕನ್ನಡ ನಾಡಿನ ಎಲ್ಲ ಆಸ್ತಿಕರಿಗೂ ಕರ್ತವ್ಯ.

ಇಂತಹ ಸತ್ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಭಗವಂತನಿಂದ ಪ್ರೇರಿತರಾಗುವ ಮಹನೀಯರು ತಮ್ಮ ಕಿಂಚಿತ್ಕಾರವನ್ನು ಮೈಸೂರಿನಲ್ಲಿ, ವಾಣೀವಿಲಾಸ ಮೊಹಲ್ಲಾದಲ್ಲಿರುವ ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ಶ್ರೀ॥ ಉ॥ ಆರ್. ತಿರುನಾರಾಯಣ ಅಯ್ಯಂಗಾರ್ಯರಿಗಾಗಲಿ ಗೀತಾರೋಡಿನಲ್ಲಿರುವ ರಿಟೈರ್ಡ್ ಸಬ್ ರಿಜಿಸ್ಟ್ರಾರ್ ಶ್ರೀ॥ ಉ॥ ಎಂ. ಎ. ನಾರಾಯಣಯ್ಯಂಗಾರ್ಯರಿಗಾಗಲಿ ಕಳುಹಿಸಬೇಕೆಂದು ಕೋರುತ್ತೇವೆ.

ಈ ಪುಸ್ತಕದ ವಿಕ್ರಯದಿಂದ ಬರಬಹುದಾದ ಧನವನ್ನೆಲ್ಲಾ ಮುದ್ರಣದ ವೆಚ್ಚವನ್ನೂ ಗಣಿಸದೆ ಈ ಚರಿತ್ರೆ ನಾಯಕರ ಜ್ಞಾಪಕಾರ್ಥಕ ಸೇವೆಗಾಗಿ ಮುಡುಪಿಡಲಾಗುತ್ತದೆ.

ಇಂತು ಬುಧಜನ ಸೇವಕರಾದ,
**ಎಂ. ರಾಜಗೋಪಾಲ ನಾಯ್ಡು,**
**ಮಂ. ಆ. ಶ್ರೀನಿವಾಸದಾಸ.**

ಶ್ರೀ

# ಶ್ರೀಮದನಂತಾರ್ಯಚರಿತ್ರೆ.

ಶ್ರೀವೇಂಕಟಗಿರಿವರಶ್ಯಂ । ಗಾವಾಸಂ ನಿಖಿಲವಿಷ್ಟಪಾಂತಸ್ತಿಮಿರ ॥
ಪ್ರಾವರಣಹರಂ ನೀಲಮ । ಣೀವಿಲಸಜ್ಜ್ಯೋತಿ ಜಯಿಸುತಿರ್ಕನವರತಂ ॥

ಶ್ರೀಮಲ್ಲಕ್ಷ್ಮಣಯೋಗಿಪುಂಗವಪದಸ್ಥಾನಾಭಿಷಿಕ್ತಂ ಗುಣೋ ।
ದ್ದಾಮಂ ವೇಂಕಟಶೈಲನಾಯಕಕೃಪಾವಾರಾಶಿವಾರ್ಮಾನುಷಂ ॥
ಶ್ರೀಮದ್ವೈದಿಕಮಾರ್ಗಕಂಟಕಸಮುದ್ಧಾರೈಕದೀಕ್ಷಾಧರಂ ।
ಸ್ವಾಮಿ ಶ್ರೀಮದನಂತಪೂರುಷಗುರೂತ್ತಂಸಂ ಜಯಿಕ್ಕಾವಗಂ ॥

ಶ್ರೀಮನ್ನಾರಾಯಣನು ಎಲ್ಲಕ್ಕೂ ಒಡೆಯನಾಗಿ, ನಿತ್ಯರೂ ಮುಕ್ತರೂ ತನ್ನನ್ನು ಸದಾ ಧ್ಯಾನಿಸುತ್ತಿರಲು, ನಿರತಿಶಯಾನಂದದಿಂದ ಶ್ರೀವೈಕುಂಠದಲ್ಲಿ ಬಿಜಯಮಾಡಿಸಿದ್ದನು. ತನಗೆ ನಿತ್ಯಕೈಂಕರ್ಯವನ್ನು ಮಾಡಿ, ನಿತ್ಯಸೂರಿಗಳ ಹಾಗೆ ಆನಂದವನ್ನು ಅನುಭವಿಸುವ ಯೋಗ್ಯತೆಯು ಇದ್ದರೂ, ಸಂಸಾರಿಚೇತನರು, ಬಹುಕಾಲದ ಅಜ್ಞಾನದಿಂದ ಮುಂದುಗಾಣದೆ, ಜಡವಸ್ತುಗಳೋಪಾದಿ ಇರುವುದನ್ನು ಕಂಡು, ಮರುಗಿ, ಭಗವಂತನು, ಅಯ್ಯೋ! ಇವರು ಎರಕೆಗಳಿಲ್ಲದ ಹಕ್ಕಿಗಳಂತೆ ಇದ್ದಾರೆಯಲ್ಲಾ! ಇವರು ಹೇಗಾದರೂ ನನ್ನ ಅಡಿದಾವರೆಗಳನ್ನು ಹೊದ್ದಿ ಬದುಕಲಿ, ಎಂದು ಅವರಿಗೆ ಕರಣಕಳೇಬರಗಳನ್ನು ದಯೆಪಾಲಿಸಿದನು. ಇದು ಒಳ್ಳೆಯದು, ಇದು ಕೆಟ್ಟುದು, ಎಂಬುದನ್ನು ತಿಳಿಸುವುದಕ್ಕಾಗಿ, ಅಪೌರುಷೇಯವೂ ನಿತ್ಯನಿರ್ದೋಷವೂ ಎನಿಸಿದ ವೇದಗಳನ್ನೂ, ಅವುಗಳ ಅರ್ಥವನ್ನು ಚೆನ್ನಾಗಿ ತಿಳಿಸುವ ಸ್ಮೃತೀತಿಹಾಸಪುರಾಣಗಳನ್ನೂ, ಪ್ರಮಾಣಗಳನ್ನಾಗಿ ಏರ್ಪಡಿಸಿಕೊಟ್ಟನು. ಇಷ್ಟಾದರೂ, ಅವರು ಅವುಗಳನ್ನು ಓದಿ, ಅಲ್ಲಿ ನಿರೂಪಿಸಿರುವಂತೆ ಆಚರಿಸಲು ಕೊಂಚವೂ ಪ್ರಯತ್ನಿಸದೆ ಹೋದರು. ಅದನ್ನು ಕಂಡು ಭಗವಂತನು, ಇವರಿಗೆ ನಾನೇ ಅನುಷ್ಠಿಸಿ ತೋರಬೇಕೆಂದು ಬಗೆದು, ಹುಟ್ಟು ಸಾವುಗಳಿಲ್ಲದವನಾದರೂ, ಕರ್ಮದ ಕಟ್ಟಿಗೆ ಸಿಲುಕಿದವನಂತೆ ಎಷ್ಟೋ ಸಲ ಮನುಷ್ಯಾದಿರೂಪಗಳಿಂದ ಅವತರಿಸಿ, ಎಲ್ಲ ಬಗೆಯಿಂದಲೂ ಸದಾ ಚೇತನರನ್ನು ಉಜ್ಜೀವಿಸುವುದರಲ್ಲಿಯೇ ಬದ್ಧಾದರನಾಗಿದ್ದನು. ಹೀಗಿರುವಲ್ಲಿ, ಮಹಾದಯಾಳುವಾದ ಅವನು ಒಮ್ಮೆ, ತನಗೆ ಅಂತರಂಗ ಕಿಂಕರನೂ ಹಾಸುಗೆಯೂ ಆಗಿರುವ ಅನಂತನನ್ನು ಕುರಿತು, ಅಯ್ಯಾ, ನೀನು ಭೂಮಿಯಲ್ಲಿ ಹುಟ್ಟಿ, ಎಲ್ಲರನ್ನೂ ಉದ್ಧರಿಸುವನಾಗು, ಎಂದು ಅಪ್ಪಣೆಯನ್ನು ಮಾಡಿದನು.

ಇತ್ತ ಅನಂತನು, ಭಗವದಾಜ್ಞೆಯ ಮೇರೆಗೆ, ವರ್ಣಾಶ್ರಮಧರ್ಮಗಳು ಸರಿಯಾಗಿ ನಡೆಯುತ್ತಿರುವ, ದ್ರಾವಿಡದೇಶದ ತುಂಡೀರಮಂಡಲದ ಪಯಸ್ವಿನೀ ಪ್ರಾಂತದಲ್ಲಿ ಒಪ್ಪುವ ಶ್ರೀ ಭೂತಪುರಿಯೊಳಗೆ, ಮಹಾಕೀರ್ತಿಮಂತರೂ, ಹರಿತಕುಲ

ತಿಲಕರೂ ಆದ, ಶ್ರೀ ಕೇಶವಸೋಮಯಾಜಿಗಳಿಗೆ, ಕಲಿವರ್ಷ ೪೧೧೮ಕ್ಕೆ ಸರಿಯಾಗಿ ಸಲ್ಲುವ ಶಾಲಿವಾಹನ ಶಕ ೯೩೯ನೆಯ ಪಿಂಗಳ ವರ್ಷದಲ್ಲಿ, ಸೂರ್ಯನು ಮೇಷ ರಾಶಿಯಲ್ಲಿರಲು, ಆರ್ದ್ರಾನಕ್ಷತ್ರದಲ್ಲಿ ಕುಮಾರನಾಗಿ ಅವತರಿಸಿದನು.

ಈ ವಿಚಾರವು ಸಂಸ್ಕೃತದಲ್ಲಿ ಹೀಗೆ ನಿರೂಪಿಸಲ್ಪಟ್ಟಿರುತ್ತದೆ:—

ಕಲ್ಯಬ್ದೇಷು ಪ್ರಯಾತೇಷ್ವಹಹ ವಸುನಿಶಾನಾಥ ಚಂದ್ರಾಬ್ಧಿಸಂಖ್ಯೇ ।
ಷ್ವಾಯಾತೇ ಪಿಂಗಳಾಬ್ದೇ ಸವಿತರೀಚ ಗತೇ ಮೇಷರಾಶಿಂ ಮೃಗಾಂಕೇ ॥
ಆರ್ದ್ರಾ ತಾರಾಧಿರೂಢೇ ಹರಿತಕುಲಮಣೇಃ ಕೇಶವಾಖ್ಯದ್ವಿಜಾಗ್ರ್ಯಾತ್ ।
ಶ್ರೀಮತ್ಯಾಂ ಭೂತಪುರ್ಯಾಂ ಅಧಿಧರಣಿತಲಂ ಶೇಷ ಆವಿರ್ಬಭೂವ ॥

ಈರೀತಿಯಾಗಿ, ಜನರನ್ನು ಉದ್ಧರಿಸುವ ಕಾರ್ಯದಲ್ಲಿ ಸದಾ ನಿರತನಾಗಿದ್ದರೂ, ಅನಂತನ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಉಪದೇಶದಿಂದ ಹೇಗೆಯೋ, ಹಾಗೆಯೇ ಅನುಷ್ಠಾನದಿಂದಲೂ ಲೋಕವನ್ನು ಉದ್ಧರಿಸಬೇಕೆಂದು ಅವನು ಬಗೆದನು. ಈ ಎರಡು ಕೆಲಸಗಳನ್ನೂ, ಒಬ್ಬನೇ, ಒಂದೇ ಕಾಲದಲ್ಲಿ ನಡೆಸುವುದು ಕಷ್ಟವೆಂದು ಅವನಿಗೆ ತೋರಿತು. ಶ್ರೀಮನ್ನಾರಾಯಣನು ನರನಾರಾಯಣರೆಂಬ ಎರಡು ರೂಪಗಳಾಗಿ ಅವತರಿಸಿ, ಶಿಷ್ಯಾಚಾರ್ಯಭಾವಗಳನ್ನು ತೋರಿದ ರೀತಿಯಿಂದ, ತಾನೂ ಮಾಡ ಲೆಳಸಿ, ಪಶ್ಚಿಮದೇಶದ ಕಾವೇರಿಯ ದಡದಲ್ಲಿ ಕಂಗೊಳಿಸುವ ಶಿರುಪುತ್ತೂರು (ಕಿರಂಗೂರು) ಎಂಬ ಗ್ರಾಮದಲ್ಲಿ, ಭರದ್ವಾಜಕುಲತಿಲಕರೂ, ವೈಷ್ಣವಶಿಖಾಮಣಿಗಳೂ, ಎಂದು ಪ್ರಖ್ಯಾತರಾದ ಕೇಶವಾಚಾರ್ಯರಿಗೆ, ಕಲಿವರ್ಷ ೪೧೧೮ಕ್ಕೆ ಸರಿಯಾದ ಶಾಲಿವಾಹನ ಶಕ ೯೩೯ನೆಯ ವಿಜಯಸಂವತ್ಸರದಲ್ಲಿ, ಸೂರ್ಯನು ಮೇಷರಾಶಿಯಲ್ಲಿರಲು ಚಂದ್ರನು ಚಿತ್ರಾ ನಕ್ಷತ್ರದೊಡನಿರಲು, ಅನಂತನು ತನ್ನ ಅಂಶದಿಂದ ಮಗನಾಗಿ* ಹುಟ್ಟಿದನು.

ಭಗವದ್ರಾಮಾನುಜರೂಪಿಯಾದ ಫಣಿರಾಜನ ದ್ವಿತೀಯಾವತಾರವಿಷಯವನ್ನು ಈ ಶ್ಲೋಕದಿಂದ ಆರ್ಯರು ಅನುಸಂಧಿಸುತ್ತಾರೆ:—

ಕಲ್ಯಬ್ದೇಷು ಪ್ರಯಾತೇಷ್ವಥ ಜಲಧಿಶರೇಂದ್ವಬ್ಧಿ ಸಂಖ್ಯೇಷು ಚಂದ್ರೇ ।
ಚಿತ್ರಾರೂಢೇಚ ಮೇಷಂಸವಿತರಿ ವಿಜಯಾಭಿಖ್ಯವರ್ಷೇ ಪ್ರವಿಷ್ಟೇ ॥
ಭಾರದ್ವಾಜಾನ್ವಯೇಂದೋಃ ಲಘುನವನಗರೀ ಕೇಶವಾಚಾರ್ಯವರ್ಯಾತ್ ।
ಶೇಷಃ ಸ್ವಾಂಶೇನ ಭೂಯೋಪ್ಯಹಹ ವಸುಮತೀ ಭಾಗಧೇಯಾದ್ಬಭೂವ ॥

---

*ಕೇಶವಾಚಾರ್ಯರ ಸ್ವಪ್ನದಲ್ಲಿ ಫಣಿರಾಜನು ಅವರ ಮಗನಾಗಿ ಹುಟ್ಟುವೆನೆಂಬ ತನ್ನ ಅವತಾರ ರಹಸ್ಯವನ್ನು ತಿಳುಹಿಸಿರಲು, ಹುಟ್ಟಿದ ಮಗನಿಗೆ ಅವರು ಅನಂತನೆಂದು ಹೆಸರಿಟ್ಟರು. ಶ್ರೀ ವೇಂ. ಇ. ಮಾ. ಸ್ತಬಕ, ೬ ಪು ೧೪೦

ಹೀಗೆ ಹುಟ್ಟಿ ಬಳೆಯುತ್ತಿದ್ದ ಅನಂತಾರ್ಯರು ಸಕಲವಿದ್ಯೆಗಳನ್ನೂ ಕಲಿತು, ಶಿರುಪುತ್ತೂರಿನಲ್ಲಿಯೇ ಇರುತ್ತಿರಲು, ಇವರಿಗೆ, ಸಕಲಶಾಸ್ತ್ರಾರ್ಥತತ್ವಜ್ಞರೆನಿಸಿ, ವಿದ್ವದ್ಗೋಷ್ಠೀಪರಿವೃತರಾಗಿ, ಸಂಸಾರಿಚೇತನೋಜ್ಜೀವನಪರಾಯಣರಾಗಿ, ಸಕಲವೈಷ್ಣವಕುಲಾಚಾರ್ಯಸಮಾಶ್ರಿತರೆನಿಸಿ, ವಿಖ್ಯಾತರಾದ ಶ್ರೀರಾಮಾನುಜಾಚಾರ್ಯರು, ಶ್ರೀರಂಗದಲ್ಲಿ ಬಿಜಯಮಾಡಿಸಿದ್ದಾರೆಂದು ತಿಳಿಯಬಂದಿತು. ಆಗ ಸಕಲ ವೈಷ್ಣವಪರಂಪರೆಯೆಂಬ ನದಿಗಳು ಸೇರುವ ಸಾಗರವಾದ ಅವರನ್ನು, ಲಕ್ಷ್ಮಣನು ರಾಮನನ್ನೂ, ಶತ್ರುಘ್ನನು ಭರತನನ್ನೂ, ಸಮಾಶ್ರಯಿಸಿದಂತೆ, ಸಮಾಶ್ರಯಣಮಾಡಬೇಕೆಂದು ಆಶೆಪಟ್ಟು, ಇವರೂ ಯಜ್ಞೇಶಾದಿಗಳೊಡನೆ* ಶ್ರೀರಂಗಕ್ಕೆ ಹೋಗಿ ಸೇರಿದರು.

ಶ್ರೀರಾಮಾನುಜಾಚಾರ್ಯರು, ಭಗವತ್ಸಮಾಶ್ರಯಣಕ್ಕೋಸುಗ ತಮ್ಮೆಡೆಗೆ ಬಂದ ಅನಂತಾರ್ಯರಿಗೂ, ಅವರ ಅನುಯಾಯಿಗಳಾದ ಯಜ್ಞೇಶಾದಿಗಳಿಗೂ, ತಮ್ಮನ್ನು ಸಮಾಶ್ರಯಿಸಿ ಹುರುಳನ್ನು ಪಡೆದಿದ್ದ ದಯಾಪಾಲಮುನಿಗಳಿಂದ†

---

* ಈ ಯಜ್ಞೇಶರು ಶ್ರೀಮದ್ರಾಮಾನುಜಾಚಾರ್ಯರಿಂದ ಏರ್ಪಡಿಸಲ್ಪಟ್ಟ ೭೪ ಪೀಠಾಧಿಪತಿಗಳಲ್ಲಿ ಒಬ್ಬರಾದ ಚೊಟ್ಟನಂಬಿಯವರ ಮಕ್ಕಳೆಂದೂ, ಇವರ ಕೂಡ ಹಾಗೆಯೇ ಪೀಠಾಧಿಪತಿಗಳಾದ, ತೊಂಡನೂರನಂಬಿ, ಮರುದೂರನಂಬಿ, ಎಂಬವರೂ ಸೇರಿ ಹೊರಟರೆಂದೂ, ತಿಳಿಯಬರುತ್ತದೆ.

† ಇವರು, ಕಾಶಿಯಲ್ಲಿ ಪಂಡಿತರುಗಳನ್ನೆಲ್ಲಾ ವಾದದಲ್ಲಿ ಗೆದ್ದು ಯಜ್ಞಮೂರ್ತಿಯೆಂದು ಹೆಸರುಗೊಂಡ ಅದ್ವೈತಸನ್ಯಾಸಿಗಳು. ತಮ್ಮ ಹೆಮ್ಮೆಯಿಂದ, ಶ್ರೀರಾಮಾನುಜಾಚಾರ್ಯರನ್ನು ಗೆಲ್ಲಬೇಕೆಂದು ಅನೇಕ ಶಿಷ್ಯರೊಡನೆ ಶ್ರೀರಂಗಕ್ಕೆ ಬಂದು, ವಾದದಲ್ಲಿ ತಾವು ಪರಾಜಿತರಾದರೆ ವಿಶಿಷ್ಟಾದ್ವೈತಸಿದ್ಧಾಂತಕ್ಕೆ ಕಟ್ಟುಬಿದ್ದು ಶ್ರೀಮದಾಚಾರ್ಯರ ಹೆಸರನ್ನೇ ಇಟ್ಟುಕೊಳ್ಳುವುದಾಗಿ ಒಪ್ಪಿದ್ದರು. ಹಾಗೆಯೇ ೧೮ ದಿನಗಳ ವರೆಗೂ ವಾದ ನಡೆದು, ಕೊನೆಗೆ ಶ್ರೀ ಆಚಾರ್ಯರವರ ಆರಾಧ್ಯದೈವವಾದ ಶ್ರೀ ವರದರಾಜಸ್ವಾಮಿಯವರು ಅವರಿಗೆ ಮಾಡಿದ ಅನುಗ್ರಹದಿಂದ, ಹತಾಶರಾಗಿ ಸೋತೆನೆಂದು ಒಪ್ಪಿಕೊಂಡು, ಅವರ ಪಾದಗಳ ಮೇಲೆ ಬಿದ್ದು ಶಿಷ್ಯರಾದರು. ಶ್ರೀಮದಾಚಾರ್ಯರು ಅನುಗ್ರಹಿಸಿ ಇವರಿಗೆ ಸನ್ಯಾಸವನ್ನು ದಯಪಾಲಿಸಿ, ತಮಗೆ ವಾದದಲ್ಲಿ ಜಯವನ್ನುಂಟುಮಾಡಿದ ಶ್ರೀ ವರದರಾಜಸ್ವಾಮಿಯವರ (ತಮಿಳಿನಲ್ಲಿ ಅರುಳಾಳಪ್ಪೆರುಮಾಳ್ ಎಂಬ) ಹೆಸರನ್ನೂ, ತಮ್ಮ ಎಂಬೆರುಮಾನಾರ್ ಎಂಬ ಹೆಸರನ್ನೂ, ಒಟ್ಟುಗೂಡಿಸಿ ಕೊಟ್ಟುದರಿಂದ ಇವರನ್ನು ಅರುಳಾಳಪ್ಪೆರುಮಾಳೆಂಬೆರುಮಾನಾರ್ ಎಂದು ಕರೆಯುತ್ತಿದ್ದರೆಂದು ತಿಳಿಯ ಬರುತ್ತದೆ. ಈ ಹೆಸರಿಗೆ ಸಂಸ್ಕೃತದಲ್ಲಿ ದಯಾಪಾಲಮುನಿ, ದೇವರಾಜಮುನಿ, ದೇವರಾಟ್–ದೇವಮನ್ನಾಥ ಎಂದೂ ಹೇಳುತ್ತಾರೆ. ಇವರೂ ಆಚಾರ್ಯರು ಏರ್ಪಡಿಸಿದ ಪೀಠಾಧಿಪತಿಗಳ

ಸಮಾಶ್ರಯಣಮಾಡಿಸಿದರು. **ಆಚಾರ್ಯರ ಅನುಜ್ಞೆಯಂತೆ,** ದಯಾಪಾಲರು ಇವರೆಲ್ಲರಿಗೂ ಸಮಾಶ್ರಯಣಮಾಡಿದರೂ, ತಾವು ಆಚಾರ್ಯಪದವಿಯನ್ನು ವಹಿಸುವುದಕ್ಕೆ ಅಂಜಿದವರಾಗಿ, ಅವರುಗಳನ್ನು ನೋಡಿ, ಎಲೈ ಆರ್ಯರಿರಾ ಗುಬ್ಬಿಯ ಕೊರಲಿಗೆ ತಾಳಿಯ ಹಣ್ಣನ್ನು ಕಟ್ಟಿದ ರೀತಿಯಲ್ಲಿ ಶ್ರೀರಾಮಾನುಜಾಚಾರ್ಯರು ನನ್ನ ಕೊರಲಿಗೆ ಆಚಾರ್ಯಪದವಿಯನ್ನು ತಗುಲಗಟ್ಟಿದ್ದಾರೆ; ಆ ಭಾರವನ್ನು ನಾನು ಹೊರಲಾರೆನು. ನೀವೆಲ್ಲರೂ ಅವರ ಅಡಿದಾವರೆಗಳನ್ನೇ ಶರಣುಹೊಗಿರಿ, ಎಂದು ಹೇಳಿ, ಅವರೆಲ್ಲರನ್ನೂ ಶ್ರೀಮದಾಚಾರ್ಯರವರ ಶ್ರೀಪಾದಂಗಳಲ್ಲಿ ಒಪ್ಪಿಸಿಬಿಟ್ಟರು.

ಭಗವಂತನು ಹೇಗೆ ನರನಾರಾಯಣರೂಪಗಳಿಂದ ಅವತರಿಸಿ, ಶಿಷ್ಯಾಚಾರ್ಯಭಾವಗಳನ್ನು ತೋರಿದನೋ ಹಾಗೆಯೇ, ಅನಂತನೂ ಅನಂತಾರ್ಯರಾಮಾನುಜಾಚಾರ್ಯರೂಪಗಳಿಂದ ಹುಟ್ಟಿ, ಸಕಲಶಾಸ್ತ್ರಾರ್ಥಗಳನ್ನೂ ಅನುಷ್ಠಿಸಿ, ಉಪದೇಶಿಸುವ ಕೆಲಸಗಳನ್ನು ಮಾಡಿ ಕೃತಕಾರ್ಯನಾದನು. ಹೀಗೆ, ಸಕಲಶಾಸ್ತ್ರಾರ್ಥಗಳನ್ನೂ ತಿಳಿದು, ಅದರಂತೆ ನಡೆದು ತೋರುವುದೇ ಸ್ವಭಾವವಾದ ಅನಂತಾರ್ಯರ ಬಳಿಯಲ್ಲಿಯೂ ಹಲವರು ಸಮಾಶ್ರಯಣಮಾಡಿಸಿಕೊಂಡರು. ಹೀಗಿರಲು, ಒಂದು ದಿವಸ ಶ್ರೀರಾಮಾನುಜಾಚಾರ್ಯರು, ಶ್ರೀಪರಾಂಕುಶಮುನಿಗಳ ಸಹಸ್ರಗಾಥಾತ್ಮಕವಾದ ದ್ರಮಿಡೋಪನಿಷತ್ತಿನ ೩ನೆಯ ಶತಕದ ೨ನೆಯ ಗಾಥೆಯನ್ನು* ಶಿಷ್ಯರಿಗೆ ವಿವರಿಸುತ್ತಾ, ಗೋಷ್ಠಿಯನ್ನು ನೋಡಿ, ಎಲೈ ಪೂಜ್ಯರಿರಾ, ಪುಷ್ಪಮಂಟಪವೆಂದು ಹೆಸರಾದ ವೇಂಕಟಾದ್ರಿಯಲ್ಲಿ, ಒಂದು ಹೂದೋಟವನ್ನು ಮಾಡಿ, ಸುವಾಸನೆಯಾದ ಹೂಗಳಿಂದಲೂ, ತುಲಸಿಯಿಂದಲೂ ಅಂದವಾಗಿ ಮಾಲೆಗಟ್ಟಿ, ಅದನ್ನು ನಿತ್ಯವೂ ವೇಂಕಟನಾಥನಿಗೆ ಸಮರ್ಪಿಸುವ ಕೈಂಕರ್ಯಕಾರಿಗಳು ಯಾರಾದರೂ ಈ ಗೋಷ್ಠಿ

---

ಲ್ಲೊಬ್ಬರು. ಇವರು ತಮಿಳಿನಲ್ಲಿ ಜ್ಞಾನಸಾರ, ಪ್ರಮೇಯಸಾರ ಎಂಬ ಗ್ರಂಥಗಳನ್ನು ರಚಿಸಿರುತ್ತಾರೆ.

* ಎಂದೈ ತಂದೈ ತಂದೈ ತಂದೈ ತಂದೈಕ್ಕುಂ ।
ಮುಂದೈ ವಾನವರ್ ವಾನವರ್‌ಕೋನೊಡುಂ॥
ಶಿಂದು ಪೂಮಕಿಳುಂ ತಿರುವೇಂಗಡತ್ತು ।
ಅಂದಮಿಲ್ ಪುಕಳ್ ಕಾರೆಳಿಲಣ್ಣಲೇ ॥

ನಮ್ಮ ತಂದೆಯ ತಂದೆಯ ತಂದೆಯ ತಂದೆಗೂ ಮೊದಲನೆಯ ತಂದೆಯಾದ ಶ್ರೀನಿವಾಸನು, ದೇವರಿಂದಲೂ ದೇವಾಧಿಪರಿಂದಲೂ ಎರಚಲ್ಪಡುತ್ತಿರುವ ಪುಷ್ಪಗಳಿಂದ ಉಲ್ಲಾಸಕರವಾಗಿರುವ ಶ್ರೀ ವೇಂಕಟದಲ್ಲಿ, ಅನಂತಗುಣನಿಧಿಯಾಗಿಯೂ, ಶ್ಯಾಮಲನಾಗಿಯೂ ಇದ್ದಾನೆ.

(ಶ್ರೀ ಕಲ್ಕಿಸಿಂಹರಚಿತ ಸಹಸ್ರಗಾಥಾರತ್ನಾವಳಿ, ಪುಟ ೨೫೯.)

ಯಲ್ಲಿ ಉಂಟೋ ? ಎಂದು ಕೇಳಿದರು. ವೇಂಕಟಾದ್ರಿಯಲ್ಲಿ ಚಳಿಯು ಹೆಚ್ಚಾಗಿದ್ದ ಕಾರಣದಿಂದ, ಅಲ್ಲಿಗೆ ಹೋಗುವುದಕ್ಕೆ ಅಂಜಿ, ಯಾರೂ ಆಚಾರ್ಯರ ಪ್ರಶ್ನೆಗೆ ಮರುಮಾತಾಡದೆ ಹೋದರು. ಆಗ ಆ ಗೋಷ್ಠಿಯಲ್ಲಿದ್ದ ಅನಂತಾರ್ಯರು, ಶ್ರೀಮದಾಚಾರ್ಯರ ಆಶಯಕ್ಕೆ ಭಂಗವುಂಟಾದೀತು ಎಂದು ಹೆದರಿ, ಧಿಗ್ಗನೆ ಎದ್ದು, ಎಲೈ ಸ್ವಾಮಿಯೇ, ನನಗೆ ಬೆಸಸೋಣವಾಗಲಿ, ತಮ್ಮ ಅಪ್ಪಣೆಯ ಮೇರೆಗೆ ನಾನು ಶ್ರೀವೇಂಕಟನಾಥನ ಪುಷ್ಪಕೈಂಕರ್ಯವನ್ನು ಮಾಡುವುದಕ್ಕೆ ಸಿದ್ಧನಾಗಿದ್ದೇನೆ, ಎಂದು ಬಿನ್ನವಿಸಿದರು. ಹೀಗೆ ಬಿನ್ನವಿಸಿಕೊಂಡ ಅನಂತಾರ್ಯರನ್ನು ನೋಡಿ, ಶ್ರೀರಾಮಾನುಜಾಚಾರ್ಯರು, ಕರೆಗಾಣದ ಸಂತಸಗಡಲಲ್ಲಿ ಓಲಾಡಿ, ಗೋಷ್ಠಿಯೊಡನೆ ಎದ್ದು ನಿಂತು, ಎಲೈ ಅನಂತಾರ್ಯರೇ, ಶ್ರೀ ವೇಂಕಟಾದ್ರಿಯ ಬಲು ಚಳಿಗೂ ಅಂಜದೆ, ನಮ್ಮ ಆಜ್ಞೆಯು ಭಂಗವಾಗುವುದಲ್ಲ, ಎಂದು ತುಂಬ ಹೆದರಿದ್ದೀರಿ. ನಮ್ಮ ಈ ಗೋಷ್ಠಿಯಲ್ಲಿ ನೀವೇ ಗಂಡು (ಆಣ್ಪಿಳ್ಳೈ) ಎಂದು ಕೊಂಡಾಡಿ, ಅವರನ್ನು ಸಂಭ್ರಮದಿಂದ ಅಪ್ಪಿಕೊಂಡರು. ಆಚಾರ್ಯರಿಂದ ಆಣ್ಪಿಳ್ಳೈ ಎಂದು ಹೊಗಳಿಸಿಕೊಂಡ ಅನಂತಾರ್ಯರು ಸಂತುಷ್ಟರಾಗಿ ಆಚಾರ್ಯರನ್ನು ಬೀಳುಕೊಂಡು ಶ್ರೀವೇಂಕಟಾಚಲಕ್ಕೆ ಪಯಣಮಾಡಿದರು.

ಇಲ್ಲಿಗೆ ಶ್ರೀ ವೇಂಕಟೇಶಭಕ್ತಾಗ್ರೇಸರ ಶ್ರೀಮದನಂತಾರ್ಯಚರಿತ್ರೆಯಲ್ಲಿ ಮೊದಲನೆಯ ಪ್ರಕರಣಂ.

## ಎರಡನೆಯ ಪ್ರಕರಣಂ.

ಅನಂತರದಲ್ಲಿ ಆಣ್ಪಿಳ್ಳೈ ಎಂದು ವಿಖ್ಯಾತರಾದ ಅನಂತಾರ್ಯರು ಶ್ರೀವೇಂಕಟಾಚಲವನ್ನು ಸೇರಿ, ನಿತ್ಯವೂ ದೇವರ ದರ್ಶನವನ್ನು ಮಾಡುತ್ತ, ಬೆಟ್ಟದ ಮೇಲೆ ದೊಡ್ಡದಾದ ಹೂದೋಟವನ್ನೂ, ಅದಕ್ಕೆ ಆಧಾರವಾಗಿ ಒಂದು ಕೆರೆಯನ್ನೂ, ಹೂದೋಟದೊಳಗೆ ಒಂದು ಬಾವಿಯನ್ನೂ ಮಾಡಿ, ಅವೆಲ್ಲಕ್ಕೂ ರಾಮಾನುಜವೆಂಬ ಹೆಸರಿಟ್ಟು, ಆಚಾರ್ಯರ ನಿಯಮನದಂತೆ ಶ್ರೀವೇಂಕಟನಾಥನಿಗೆ ನಿತ್ಯವೂ ಪುಷ್ಪಕೈಂಕರ್ಯವನ್ನು ಮಾಡಿಕೊಂಡು ಇದ್ದರು. ಕೆರೆಯನ್ನು ಅಗೆಯುವ ಕಾಲದಲ್ಲಿ, ಈ ಊಳಿಗವು ನಮ್ಮ ಆಚಾರ್ಯರಿಗೆ ಒಪ್ಪಿಗೆಯಾದುದೆಂದು ತಿಳಿದು, ಶ್ರೀಮದನಂತಾರ್ಯರು, ಬಲು ಅಕ್ಕರೆಯಿಂದ, ತಾವೇ ಸನಿಕೆಯನ್ನು ಹಿಡಿದು, ಮಣ್ಣನ್ನು ತೋಡಿ, ಪೂರ್ಣಗರ್ಭಿಣಿಯಾಗಿದ್ದ ತಮ್ಮ ಭಾರ್ಯೆಯ ಕಯ್ಯಿಂದಲೇ ಮಣ್ಣುತುಂಬಿದ ಗೂಡೆಯನ್ನು ಹೊರಿಸಿ ಕಳುಹುತ್ತಿದ್ದರು. ಒಂದು ದಿನ ತುಂಬಿದ ಬಸಿರಿಯಾದ ಆ

ಸಾಧ್ವಿಯು, ಮಣ್ಣಿನ ಗೂಡೆಯನ್ನು ಹೊತ್ತು, ಅಡಿಯಿಡಲಾರದೆ ಬಳಲಿ ಹೋಗಿದ್ದಳು. ಭಕ್ತವತ್ಸಲನೂ, ಕರುಣಾಸಮುದ್ರನೂ ಆದ ಶ್ರೀವೇಂಕಟನಾಥನು, ಆ ಹೊರೆಯನ್ನು ತಾನೇ ಹೊರಬೇಕೆಂದು ಬಯಸಿ, ಸುಂದರನಾದ ವಟುವಾಗಿ, ಅನಂತಾರ್ಯರ ಬಳಿಗೆ ಬಂದು, ಸ್ವಾಮೀ ಅನಂತಾರ್ಯರೇ, ನೀವು ಮುದುಕರಾಗಿದ್ದೀರಿ, ನಿಮ್ಮಿಂದ ಮಣ್ಣನ್ನು ಅಗೆಯುವುದಕ್ಕೆ ಆಗುವುದಿಲ್ಲ, ನಿಮ್ಮ ಭಾರ್ಯೆಯು ತುಂಬಿದ ಬಸಿರಿ, ಆಕೆಯು ಮಣ್ಣನ್ನು ಹೊರಲಾರಳು. ಎಲ್ಲಿ! ಆ ಸನಿಕೆಯನ್ನು ಇತ್ತ ಕೊಡಿರಿ, ಈಕೆಯು ಗೂಡೆಯನ್ನು ಇರಿಸಲಿ, ನಾನು ಮಣ್ಣನ್ನು ಅಗೆದು, ಮಕ್ಕರಿಗೆ ತುಂಬಿ, ಅದನ್ನು ಹೊತ್ತುಕೊಂಡು ಹೋಗಿ, ನೀವು ಹೇಳಿದ ಕಡೆಯಲ್ಲಿ ಸುರಿದು, ಬೇಗ ಬರುತ್ತೇನೆ. ಮುದುಕರಾದ ನೀವಿಬ್ಬರೂ, ಕೊಂಚ ಹೊತ್ತು ಸುಮ್ಮನೆ ಕುಳಿತು ನನ್ನ ಸಾಮರ್ಥ್ಯವನ್ನಾದರೂ ನೋಡಿರಿ, ಎಂದು ಹೇಳಿದನು.

ಆ ಮಾತ ಕೇಳಿ, ಅನಂತಾರ್ಯರು, ಅವನನ್ನು ನೋಡಿ, ಎಲೋ ವಟುವೇ, ನೀನು ಚೆಲುವನು, ಮೆಯ್ಯ ಮೇಲಣ ನಗಗಳೇ ನಿನಗೆ ಹೊರೆಯಾಗಿದೆ. ಹೀಗೆ ಸುಕುಮಾರನಾದ ನೀನು, ಮಣ್ಣನ್ನು ಅಗೆದು, ಗೂಡೆಗೆ ತುಂಬಿ, ಹೊತ್ತುಕೊಂಡು ಹೋಗಿ ಸುರಿದು ಬರುವುದು, ಎಂದರೇನು! ಈ ಕೆಲಸಕ್ಕೆ ಕಯ್ಯಿಕ್ಕಿದರೆ, ನೀನು ಬೇಗನೆ ದಣಿದು ಹೋಗುತ್ತೀಯೆ. ಈ ಕೆಲಸವನ್ನು ನಾನು ಮುಹೂರ್ತವಾದರೂ ಮಾಡದಿದ್ದರೆ, ಬಸವಳಿದು ಹೋಗುತ್ತೇನೆ. ಆದುದರಿಂದ ನೀನು ಈ ಕೆಲಸದ ಗೋಜಿಗೆ ಬರಬೇಡ. ಹಾಗೆ ದೇವರ ಊಳಿಗವನ್ನು ಮಾಡಬೇಕೆಂಬ ಬಯಕೆಯು ನಿನಗೆ ಇದ್ದರೆ, ನೀನು ಬೇರೆ ಯಾವುದಾದರೂ ಕೆಲಸವನ್ನು ನೋಡು ; ನನ್ನ ಕೆಲಸಕ್ಕೆ ತಡೆಯಾಗಬೇಡ, ಜೋಕೆ; ನಾನು, ನಿನಗೆ ಇಷ್ಟು ಹೇಳಿದರೂ, ನೀನೇನಾದರೂ ನನ್ನ ಕೆಲಸಕ್ಕೆ ಅಡ್ಡಮಾಡಿದರೆ, ಇಗೋ ಈ ಭಾರವಾಗಿರುವ ಸನಿಕೆಯಿಂದ ನಿನ್ನನ್ನು ಹೊಡೆದುಬಿಡುತ್ತೇನೆ, ಎಂದು ಅಬ್ಬರಿಸಿದರು.

ಅನಂತಾರ್ಯರ ಮುಳಿಸಿನ ಮಾತ ಕೇಳಿ, ವಟುವು, ಅವರ ಬಳಿಯಲ್ಲಿ ನಿಲ್ಲದೆ ಹೊರಟು, ಮಣ್ಣ ಗೂಡೆಯನ್ನು ಹೊತ್ತು ಮೆಲ್ಲಮೆಲ್ಲನೆ ಬರುತ್ತಿದ್ದ ಅವರ ಭಾರ್ಯೆಯ ಬಳಿಗೆ ಬಂದು, ಜಾಣತನದ ಸವಿನುಡಿಗಳಿಂದ ಆಕೆಯನ್ನು ಮರುಳುಗೊಳಿಸಿ, ಆಕೆಯ ಗೂಡೆಯನ್ನು ತಾನು ಹೊತ್ತು, ಮಣ್ಣನ್ನು ಸುರಿದು ಬರುತ್ತಿದ್ದನು.

ವಟುವು, ಈ ರೀತಿಯಾಗಿ, ಮಣ್ಣನ್ನು ಸುರಿದು, ಗೂಡೆಯನ್ನು ಬೇಗ ಬೇಗನೆ ತಂದು, ಆ ಸಾಧ್ವಿಗೆ ಕೊಡುತ್ತಿದ್ದನು. ಆಕೆಯು ಅದನ್ನು ಪತಿಯ ಬಳಿಗೆ ಬೇಗನೆ ತರುತ್ತಿದ್ದಳು. ಅದನ್ನು ಕಂಡು ಅನಂತಾರ್ಯರಿಗೆ ಅಚ್ಚರಿಯಾಯಿತು. ಅವರು ಹೆಂಡತಿಯನ್ನು ನೋಡಿ, ಎಲೇ, ನೀನೇನಾದರೂ ಗೂಡೆಯ ಮಣ್ಣನ್ನು ಹತ್ತಿರದಲ್ಲಿ ಎಲ್ಲಿಯಾದರೂ ಸುರಿದು ಬರುತ್ತೀಯಾ ? ಮೊದಲು ಮೆಲ್ಲಮೆಲ್ಲನೆ ಗೂಡೆಯನ್ನು

ತರುತ್ತಿದ್ದವಳು, ಈಗ ಬೇಗಬೇಗನೆ ತರುತ್ತಿರುವೆಯಲ್ಲ, ಇದಕ್ಕೆ ಕಾರಣವೇನು, ಎಂದು ಕೇಳಿದರು. ಅದಕ್ಕೆ ಆ ಪತಿವ್ರತೆಯು ಪತಿಯನ್ನು ನೋಡಿ, ಎಲೈ ಸ್ವಾಮಿಯೇ ಚಿತ್ತಯಿಸಬೇಕು. ನಾನು ಮಣ್ಣುಗೂಡೆಯನ್ನು ಹೊತ್ತುಕೊಂಡು ಹೋಗುವಾಗ, ತಮ್ಮಬಳಿ ಬಂದಿದ್ದ ವಟುವು ನನ್ನನ್ನು ನಡು ಹಾದಿಯಲ್ಲಿ ತಡೆದು, ಅದನ್ನು ಹೊತ್ತುಕೊಂಡುಹೋಗಿ ಗೊತ್ತಾದ ತಾವಿನಲ್ಲಿ ಮಣ್ಣನ್ನು ಸುರಿದು, ಬೇಗಬೇಗನೆ ಗೂಡೆಯನ್ನು ತಂದು ಕೊಡುತ್ತಿದ್ದಾನೆ. ಅದರಿಂದ ನಾನು ಬೇಗನೆ ಬರುತ್ತಿದ್ದೇನೆ, ಎಂದು ಬಿನ್ನಹಮಾಡಿದಳು.

ಆ ಮಾತ ಕೇಳಿದ ಕೂಡಲೇ, ಅನಂತಾರ್ಯರಿಗೆ ಕೋಪವು ಬಂದಿತು. ಅವರ ಕಣ್ಣುಗಳು ಕೆಂಡದಂತಾದುವು; ತುಟಿಗಳು ಅದುರಿದುವು, ಅವರು ಸನಿಕೆಯನ್ನು ಹಿಡಿದು ಕೊಂಡು ಅವನಿದ್ದ ತಾವಿಗೆ ಬಂದು, ಅವನನ್ನು ನೋಡಿ, ಏನೆಲಾ, ನಮ್ಮ ಕೆಲಸಕ್ಕೆ ಏಕೆ ಅಡ್ಡವಾಗಿ ಬರುತ್ತಿದ್ದೀಯೆ ? ಬೇಡವೆಂದು ಎಷ್ಟು ಹೇಳಿದರೂ, ನಿನ್ನ ಚಾಳಿ ಯನ್ನು ಬಿಡುವುದಿಲ್ಲವೇ, ಎಂದು ಹೇಳುತ್ತ, ಅವನನ್ನು ಅಟ್ಟಿಸಿಕೊಂಡು ಹೋದರು. ಕಯ್ಯಲ್ಲಿ ಭಾರವಾದ ಸನಿಕೆಯನ್ನು ಹಿಡಿದು ತನ್ನನ್ನು ತರುಮಿಕೊಂಡು ಬರುವ ಅನಂತಾರ್ಯರನ್ನು ಕಂಡು, ಆ ವಟುವು ಬೇಗನೆ ಓಡಿಹೋಗಿ, ತುಂಬ ಕೊಂಬೆಗಳೂ ಎಲೆಗಳೂ ಇದ್ದ ಒಂದು ಹೊಂಗೆಯ ಮರವನ್ನು ಏರಿ, ಎಲೆಗಳ ನಡುವೆ ಮರೆಸಿ ಕೊಂಡನು.

ಅವನ ಹಿಂದೆಯೇ ಅನಂತಾರ್ಯರೂ ಓಡಿಬಂದರು. ಅವರಿಗೆ ಮರವನ್ನು ಏರುವುದಕ್ಕೆ ಆಗಲಿಲ್ಲ. ಅವರು ಬುಡದಲ್ಲಿಯೇ ನಿಂತುಕೊಂಡು, ಕೆಳಗೆ ಇಳಿ, ಕೆಳಗೆ ಇಳಿ, ಎಂದು ಕೂಗುತ್ತಿದ್ದರು. ಮರದ ಮೇಲೆ, ಎಲೆಗಳ ನಡುವೆ ಮೆಯ್ಯನ್ನು ಮರೆ ಯಿಸಿಕೊಂಡಿದ್ದ ಆ ವಟುವು, ಎಲೈ ಅನಂತಾರ್ಯರೇ, ನನ್ನನ್ನು ನೀವು ಹೊಡೆಯದೆ ಬಿಟ್ಟು ಬಿಡಿರಿ ; ನಾನು ಹೊದೆದಿರುವ ಚಿನ್ನದ ಬೊಟ್ಟುಗಳುಳ್ಳ ವಸ್ತ್ರವನ್ನೂ, ಕಿವಿಗ ಳಲ್ಲಿರುವ ಮುರುಗಳನ್ನೂ, ಕಯ್ಯ ಬೆರಲಲ್ಲಿ ಇರುವ ಪವಿತ್ರದ ಉಂಗುರವನ್ನೂ, ನಿಮಗೆ ಕೊಟ್ಟುಬಿಡುತ್ತೇನೆ ಎಂದನು. ಆಗ ಅನಂತಾರ್ಯರು, ಮರದ ಮೇಲಿರುವ ಇವನು ಎಲ್ಲಿಗೆ ಹೋದಾನು, ಕೆಳಗೆ ಇಳಿಯಲಿ, ಹಿಡಿದು ಕೊಳ್ಳುತ್ತೇನೆ, ಎಂದು ಆಲೋಚಿಸಿ, ಹುಡುಗನಿಗೆ ನಂಬುಗೆಯುಂಟಾಗಲೆಂದು, ಕೊಂಚ ಹಿಂಜರಿದು ಅವನನ್ನು ಕುರಿತು, ಎಲಾ, ನೀನು ಹೇಳಿದಂತೆಯೇ ಆಗಲಿ ; ಕೆಳಗೆ ಇಳಿದು ಬಾ, ಎಂದರು. ಆಗ, ಆ ವಟುವು, ಮರದಿಂದ ಕೆಳಗೆ ದುಮ್ಮಿಕ್ಕಿ, ಭಯದಿಂದ ಹಿಂದೆ ಹಿಂದೆ ನೋಡುತ್ತ ಬಿರ್ರನೆ ಓಡಿಹೋದನು. ಅನಂತಾರ್ಯರಿಗೆ ಅವನು ಸಿಕ್ಕಲಿಲ್ಲ. ಅದರಿಂದ ಅವರ ಮುಳಿಸು ಹೆಚ್ಚಿತು ಕಯ್ಯಲ್ಲಿದ್ದ ಸನಿಕೆಯನ್ನು, ಅವರು ವಟುವಿನ ಮೇಲೆ ತೂಗಿ ಎಸೆದರು. ಅದು ಅವನ ಗಡ್ಡಕ್ಕೆ ಚೆನ್ನಾಗಿ ಬಡಿಯಿತು. ವಟುವು ದೇವಾಲಯವನ್ನು ಹೊಕ್ಕು,

ಬಾಗಿಲನ್ನು ಮುಚ್ಚಿಕೊಂಡನು. ಅನಂತಾರ್ಯರೂ ಅವನ ಹಿಂದೆಯೇ ಓಡಿದರು. ಬಾಗಿಲು ಮುಚ್ಚಿರುವುದನ್ನು ಕಂಡು, ಅವನು ಹೊರಗೆ ಬರಲಿ, ಹಿಡಿಯುತ್ತೇನೆ, ಎಂದುಕೊಂಡು ಬಾಗಿಲಲ್ಲಿಯೇ ಕುಳಿತಿದ್ದರು.

ಆ ವೇಳೆಗೆ ಹೊತ್ತು ಮುಳುಗುತ್ತ ಬಂದಿತು. ಭಗವದಾರಾಧನೆಗೋಸ್ಕರ ಅರ್ಚಕರೂ ಪರಿಚಾರಕರೂ ಅಧಿಕಾರಿಗಳೂ ದೇವಾಲಯಕ್ಕೆ ಬಂದರು. ಬಾಗಿಲು ಹಾಕಿದ್ದಿತು. ಒಬ್ಬ ವಟುವು ಒಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡಿದ್ದಾನೆ, ಎಂದು ಹೊರಗೆ ಕುಳಿತಿದ್ದ ಅನಂತಾರ್ಯರು ಅವರಿಗೆ ತಿಳಿಸಿದರು. ಅವರೆಲ್ಲರೂ ಬಾಗಿಲ ಬಳಿಗೆ ಬಂದು, ಎಲೋ ವಟುವೇ, ಬಾಗಿಲನ್ನು ತೆರೆ ; ದೇವರ ಪೂಜೆಗೆ ಹೊತ್ತಾಗುತ್ತ ಬಂದಿತು, ಎಂದು ಕೂಗಿಕೊಂಡರು. ಆಗ, ಶ್ರೀವೇಂಕಟನಾಥನು ವಟುವಾಗಿ ಬಂದು ಬಾಗಿಲನ್ನು ತೆರೆದು, ಕಣ್ಮರೆಯಾದನು. ತರುವಾಯ ಪರಿಜನರೆಲ್ಲರೂ, ಅನಂತಾರ್ಯರನ್ನು ಮುಂದಿಟ್ಟುಕೊಂಡು ದೇವಾಲಯವನ್ನು ಹೊಕ್ಕು, ಎಲ್ಲೆಡೆಯನ್ನೂ ಚೆನ್ನಾಗಿ ಹುಡುಕಿನೋಡಿದರು. ವಟುವು ಕಣ್ಣಿಗೆ ಬೀಳಲಿಲ್ಲ. ಎಲ್ಲರಿಗೂ ಆಶ್ಚರ್ಯವಾಯಿತು. ಇದು ಶ್ರೀವೇಂಕಟನಾಥನ ಕೆಲಸವೇ ಸರಿ, ಎಂದು ಎಲ್ಲರೂ ನಿಶ್ಚಯಿಸಿಕೊಂಡು ಭಗವಂತನ ದರ್ಶನಕ್ಕೆ ಹೋದರು. ಶ್ರೀವೇಂಕಟನಾಥನ ಮೊಗಸಸಿಯಿಂದ ನಸುನಗೆಯ ಬೆಳುದಿಂಗಳು ಪ್ರಸರಿಸುತ್ತಿದ್ದಿತು. ಆದರೆ ಗಡ್ಡದಿಂದ ರಕ್ತವು ಸೋರುತ್ತಿದ್ದಿತು.

ಎಲ್ಲರೂ ಅದನ್ನು ಕಂಡು ಬೆಚ್ಚಿದರು. ಅನಂತಾರ್ಯರು ದೇವರನ್ನು ನೋಡಿ, ಎಲೈ ಸ್ವಾಮಿಯೇ ನಿನ್ನ ಮುಖದಲ್ಲಿ ಮಂದಹಾಸವು ಮೂಡಿದೆ, ಆದರೆ ಗಡ್ಡದಿಂದ ನೆತ್ತರು ಜಿನುಗುತ್ತಿದೆಯಲ್ಲ ; ಇದೇನು ಆಶ್ಚರ್ಯ, ಎಂದು ಕೇಳಿದರು. ಆಗ ಭಗವಂತನು ಅವರನ್ನು ನೋಡಿ, ಅನಂತಾರ್ಯರೇ, ನಿಮ್ಮ ಊಳಿಗವನ್ನು ನಾನೂ ಮಾಡೋಣವೆಂದು ಆಸೆಪಟ್ಟು ಬಂದುದಕ್ಕೆ ನನಗೆ ಈ ಪಾಡು ಆಯಿತು. ನಿಮಗೆ ಅಂಜಿ ಓಡಿಹೋಗುತ್ತಿದ್ದ ನನ್ನನ್ನು ನೀವು ಬೆನ್ನಟ್ಟಿ ಬಂದು, ಭಾರವಾದ ಸನಿಕೆಯನ್ನು ನನ್ನ ಮೇಲೆ ತೂಗಿ ಎಸೆಯಲಿಲ್ಲವೇ? ಅದು ಆಗಲೇ ಮರೆತುಹೋಯಿತೇ? ಎಂದು ಕೇಳಿದನು. ಆ ನುಡಿಯನ್ನು ಕೇಳಿ, ಅನಂತಾರ್ಯರು ಹೆದರಿದರು. ಅವರು ದೇವರನ್ನು ನೋಡಿ, ಎಲೈ ವೇಂಕಟನಾಥನೇ, ನಿನ್ನಲ್ಲಿ ನಾನು ಮಹಾಪರಾಧವನ್ನು ಮಾಡಿಬಿಟ್ಟಿದ್ದೇನೆ, ನನ್ನನ್ನು ಮನ್ನಿಸು, ಎಂದು ಭಗವಂತನ ಸಿರಿಯಡಿಗಳಲ್ಲಿ ಕೆಡೆದರು. ಅವನ ಗಡ್ಡದ ಗಾಯಕ್ಕೆ ಪಚ್ಚಗಪ್ಪುರದ ಪುಡಿಯನ್ನು ಮೆತ್ತಿ ಸೋರುತ್ತಿದ್ದ ರಕ್ತವನ್ನು ನಿಲ್ಲಿಸಿದರು.

ಭಗವಂತನು ಸುಪ್ರೀತನಾದನು. ಅವನು ಅನಂತಾರ್ಯರನ್ನು ನೋಡಿ, ಎಲೈ ಅನಂತಾರ್ಯರೇ, ನನ್ನ ಊಳಿಗದಲ್ಲಿ ನೀವು ತೋರುವ ಅಕ್ಕರೆಯನ್ನು ಕಂಡು, ನಾನು

ಸಂತಸಗಡಲಲ್ಲಿ ಮುಳುಗಿಹೋಗಿದ್ದೇನೆ. ಗಡ್ಡದಲ್ಲಿ ಸೋರುವ ಕೆನ್ನೀರು, ನನ್ನ ಮುಖಕ್ಕೆ ಆನಂದದ ಕಣ್ಣೀರಂತೆ ಒಪ್ಪುತ್ತಿದೆ, ಎಂದು ಹೇಳಿ, ಅವರನ್ನು ತನ್ನ ಕಡೆಗಣ್ಣ ಕುಳಿರುನೋಟದಿಂದ ಮೀಯಿಸಿ, ಇಗೋ ನನ್ನ ಪೀತಾಂಬರವನ್ನೂ, ಕುಂಡಲಗಳನ್ನೂ, ಪವಿತ್ರದ ಉಂಗುರವನ್ನೂ ಕೊಳ್ಳಿರಿ, ಎಂದು ಅವರಿಗಿತ್ತು ಸಂತಸಪಡಿಸಿದನು. *

ಇತ್ತ, ಶ್ರೀರಂಗದಲ್ಲಿ ಬಿಜಯಮಾಡಿದ್ದ ಶ್ರೀರಾಮಾನುಜಾಚಾರ್ಯರವರು, ತಮ್ಮ ಅಪ್ಪಣೆಯಂತೆ ವೇಂಕಟಾಚಲಕ್ಕೆ ಹೋಗಿ, ಅಲ್ಲಿ ಹೂದೋಟವನ್ನೂ ಕೆರೆಯನ್ನೂ ಏರ್ಪಡಿಸಿ ನಿತ್ಯವೂ ಹೂಗಳಿಂದ ಅಂದವಾಗಿ ಮಾಲೆಗಳನ್ನು ಕಟ್ಟಿ, ಸಮರ್ಪಿಸಿ ಭಗವಂತನಿಗೆ ಮುಖೋಲ್ಲಾಸವುಂಟುಮಾಡಿ, ಅನಂತಾರ್ಯರು ಶ್ರೀ ವೇಂಕಟನಾಥನ ಕರುಣಾರಸವೆಂಬ ನದಿಯಲ್ಲಿ ಮುಳುಗಿಹೋಗಿದ್ದಾರೆ, ಎಂಬ ಸಂತಸದ ಸುದ್ದಿಯನ್ನು ಕೇಳಿದರು. ಅವರ ಆನಂದವು ಮೇರೆ ಮೀರಿತು. ಅನಂತಾರ್ಯರಿಗೆ ತಮ್ಮ ಮೆಚ್ಚುಗೆಯನ್ನು ತಿಳಿಸಬೇಕೆಂದೂ, ಶ್ರೀವೇಂಕಟನಾಥನ ಸೇವೆ ಮಾಡಬೇಕೆಂದೂ ಅವರಿಗೆ ಆತುರವುಂಟಾಯಿತು. ತಾವು ಮೊದಲು ಮಾಡಿದ್ದ ಶ್ರೀಪರಾಂಕುಶರ ದ್ರಮಿಡೋಪನಿಷತ್ತಿನ ಕಾಲಕ್ಷೇಪವನ್ನು ಬೇಗನೆ ಮುಗಿಸಿಕೊಂಡು, ಶ್ರೀ ರಾಮಾನುಜಾಚಾರ್ಯರು, ಪರಿಜನರ ಸಂಗಡ, ಶ್ರೀರಂಗದಿಂದ ವೇಂಕಟಾಚಲಕ್ಕೆ ಪಯಣಮಾಡಿದರು. ಹಾದಿಯಲ್ಲಿ ಸಿಕ್ಕಿದ ದಿವ್ಯದೇಶಗಳಲ್ಲಿ ಕಂಗೊಳಿಸುವ ಭಗವದರ್ಚಾವಿಗ್ರಹಗಳಿಗೆಲ್ಲ ಪ್ರಣಾಮಾದಿಕೈಂಕರ್ಯಗಳನ್ನು ಮಾಡಿ, ಶ್ರೀವೇಂಕಟಗಿರಿಯ ತಪ್ಪಲಲ್ಲಿರುವ ತಿರುಪತಿಯನ್ನು ಸೇರಿದರು. ಬಳಿಕ ಅವರು, ಆ ಊರಲ್ಲಿ ಬಿಜಯಮಾಡಿರುವ ಪರಾಂಕುಶಪರಕಾಲಾದಿದಿವ್ಯಸೂರಿಗಳಿಗೆ ವಂದಿಸಿ, ಬೆಟ್ಟವನ್ನು ಕಾಲಿನಿಂದ ಮೆಟ್ಟಿ ಏರುವುದಕ್ಕೆ ಅಂಜಿ, ಕೆಲವುಕಾಲ ಅಲ್ಲಿಯೇ ನಿಂತು, ವಿಟ್ಠಲದೇವನೆಂಬ ಅಲ್ಲಿಯ ಅರಸನನ್ನು ತಮ್ಮ ಅಂತರಂಗ ಶಿಷ್ಯನನ್ನಾಗಿ ಮಾಡಿಕೊಂಡರು. ಬಳಿಕ ಅವನ ಮೂಲಕ, ತಮ್ಮ ಶಿಷ್ಯರಾದ ಶ್ರೀ

---

* ಕೈಂಕರ್ಯದಲ್ಲಿ ಬಹುಶ್ರದ್ಧೆಯುಳ್ಳ ನೀವು, ಸನಿಕೆಯಿಂದ ಹೊಡೆದು, ಮಾಡಿರುವ ನನ್ನ ಗಡ್ಡದ ಗಾಯವು ದಡ್ಡುಗಟ್ಟಿ, ನನ್ನ ಎದೆಯಲ್ಲಿ ಶ್ರೀವತ್ಸವು ಒಪ್ಪುವಂತೆ, ನನ್ನ ವದನಮಂಡಲಕ್ಕೆ ಶುಭತಮವಾದ ಲಾಂಛನವಾಗಿ ಒಪ್ಪುತ್ತದೆ. ಆದುದರಿಂದ, ಇಂದಿನಿಂದ ಇದರ ನೆನಪಿಗಾಗಿ ನನ್ನ ಗಡ್ಡದಲ್ಲಿ ಸುವಾಸನೆಯಾದ ಪಚ್ಚೆಗಪ್ಪುರದ ಪುಡಿಯನ್ನು ಸರ್ವದಾ ಸಮರ್ಪಿಸತಕ್ಕುದು; ಯಾವ ಸನಿಕೆಯಿಂದ ನನಗೆ ಈ ಗಾಯವಾಯಿತೋ, ಅದನ್ನು, ಎಲ್ಲರಿಗೂ ಕಾಣುವಂತೆ, ನನ್ನ ಮಂದಿರದ ಗೋಪುರದಲ್ಲಿ ಒಂದು ಎತ್ತರವಾದೆಡೆಯಲ್ಲಿ ಇರಿಸತಕ್ಕುದು, ಎಂದು ತಾನೇ ವ್ಯವಸ್ಥೆಮಾಡಿದನು. (ಶ್ರೀ. ವೇಂ. ಇ. ಮಾ. ಸ್ತಬಕ 5 ಪು. 123)

(ಇದರಂತೆಯೇ ಈಗಲೂ ನಡೆಯುತ್ತಿದೆ.)

ವೈಷ್ಣವರಲ್ಲಿ ಮೂವತ್ತುಮಂದಿಯನ್ನು ಆ ಊರಲ್ಲಿ ನೆಲೆಗೊಳಿಸಿ, ಅವರೆಲ್ಲರ ಜೀವನಕ್ಕಾಗಿ ಅವನಿಂದ ಇಳಿಯ ಮಂಡಯುವೆಂಬ ಗ್ರಾಮವನ್ನು ಕೊಡಿಸಿಕೊಟ್ಟು, ಅವರೆಲ್ಲರಿಗೂ, ತತ್ವಾರ್ಥಗಳನ್ನು ಉಪದೇಶಮಾಡುತ್ತ ಇದ್ದರು.

ತಮ್ಮ ಆಚಾರ್ಯರು ತಿರುಪತಿಗೆ ಬಿಜಯಮಾಡಿರುವ ಸುದ್ದಿಯನ್ನು ಕೇಳಿ, ಅನಂತಾರ್ಯರು, ಬಹುಜನ ಶ್ರೀವೈಷ್ಣವರೊಡಗೂಡಿ, ಬೆಟ್ಟದಿಂದ ಇಳಿದು, ಶ್ರೀರಾಮಾನುಜಾಚಾರ್ಯರ ಬಳಿಗೆ ಬಂದು, ಸಾಷ್ಟಾಂಗವಾಗಿ ಅವರಿಗೆ ನಮಸ್ಕರಿಸಿದರು; ಮತ್ತು ಅವರನ್ನು ಕುರಿತು, ಎಲೈ ಸ್ವಾಮಿಯೇ, ಸಕಲ ವೈಷ್ಣವಕುಲಧುರಂಧರರೇ, ತಾವು ಸಪರಿವಾರವಾಗಿ ಬೆಟ್ಟಕ್ಕೆ ಬಿಜಯಮಾಡಿಸಿ, ಶ್ರೀವೇಂಕಟನಾಥನನ್ನು ದರ್ಶನಮಾಡಬೇಕು, ಎಂದು ವಿಜ್ಞಾಪಿಸಿಕೊಂಡರು. ಆ ನುಡಿಗೆ, ರಾಮಾನುಜಾಚಾರ್ಯರು, ಎಲೈ ಅನಂತಾರ್ಯರೇ, ಶ್ರೀವೇಂಕಟಗಿರಿಗೆ ಪಾದವು ಸೋಂಕುವುದೆಂದು ಅಂಜಿ, ಶ್ರೀಪರಾಂಕುಶಾದಿ ದಿವ್ಯಸೂರಿಗಳೇ ಬೆಟ್ಟವನ್ನು ಏರದೆ ಹೋದರು; ಹೀಗಿರುವಾಗ ನಾವು ಹೇಗೆತಾನೇ ಬೆಟ್ಟವನ್ನು ಏರಲಾದೀತು ? ಇಲ್ಲಿ ಬಿಜಯುಮಾಡಿರುವ ದಿವ್ಯಸೂರಿಗಳ ಸೇವೆಗೆಯ್ಯುತ್ತ, ನಾವು ಇಲ್ಲಿಯೇ ಇರುತ್ತೇವೆ, ಎಂದು ಹೇಳಿಬಿಟ್ಟರು. ಆ ಮಾತ ಕೇಳಿ ಅನಂತಾರ್ಯರು, ಎಲೈ ಸ್ವಾಮಿಯೇ, ಲಾಲಿಸಬೇಕು, ತಾವು ಬೆಟ್ಟವನ್ನು ಏರದಿದ್ದರೆ, ತಮ್ಮ ದಾಸಭೂತರಾದ ನಾವೂ ಏರುವುದಿಲ್ಲ. ಹಾದಿಯಲ್ಲಿ ನಡೆಯುವ ಬೇರೆ ಯಾರೂ ಏರುವುದಿಲ್ಲ. ಇದರಿಂದ, ಬೆಟ್ಟದ ಮೇಲೆ ಇರುವ ಸ್ವಾಮಿಗೆ ನಾವು ನಡೆಸುತ್ತಿರುವ ಊಳಿಗಗಳೆಲ್ಲವೂ ನಿಂತುಹೋಗುತ್ತವೆ. ಆದುದರಿಂದ, ಜೀಯಾ! ತಾವು ಬೆಟ್ಟದ ಮೇಲಕ್ಕೆ ಬಿಜಯಮಾಡಿಸಲೇಬೇಕು, ಎಂದು ಮತ್ತೆ ಬೇಡಿಕೊಂಡರು; ಆ ನುಡಿಗೇಳಿ, ರಾಮಾನುಜಾಚಾರ್ಯರು, ಎಲೈ ಪೂಜ್ಯರಿರಾ, ಬೆಟ್ಟಕ್ಕೆ ಬರಬೇಕೆಂದು, ನೀವೆಲ್ಲರೂ ನನಗೆ, ಮತ್ತೆ ಮತ್ತೆ, ಅನುಜ್ಞೆಯೀಯುತ್ತಿರುವುದರಿಂದ, ನಾನು ಬೆಟ್ಟವನ್ನು ಏರುತ್ತೇನೆ, ಎಂದು ಒಪ್ಪಿಕೊಂಡರು. ಬೆಟ್ಟವನ್ನು ಏರುವಾಗ, ಜಲಮಲಾದಿ ದೇಹಬಾಧೆಯು ಉಂಟಾಗದ ರೀತಿಯಲ್ಲಿ, ಶ್ರೀಮದಾಚಾರ್ಯರು, ಮರುದಿನ ಚೆನ್ನಾಗಿ ಶಾರೀರ ಧರ್ಮವನ್ನು ತೀರಿಸಿಕೊಂಡು, ಮಿಂದು, ಬೆಟ್ಟದ ಬುಡಕ್ಕೆ ಬಂದು, ಗಿರಿಗೆ ಕುಂಬಿಟ್ಟು, ಎಲೈ ಬೆಟ್ಟವೇ, ಶ್ರೀವೈಕುಂಠನಾಥನ ನಿಯೋಗದಿಂದ, ಮುಕ್ತಚೇತನನು, ಅಪನ ಕಾಲುಮಣೆ, ಹಾಸುಗೆಗಳನ್ನು ತನ್ನ ಪಾದದಿಂದ ಮೆಟ್ಟಿ ನಡೆವಂತೆ, ಭಾಗವತರ ನಿಯೋಗದಿಂದ, ನಾನು ನಿನ್ನನ್ನು ಪಾದಗಳಿಂದ ಮೆಟ್ಟಿ ಏರುತ್ತೇನೆ, ನನ್ನನ್ನುಮನ್ನಿಸು, ಎಂದು ಬೇಡಿಕೊಂಡು, ಗಿರಿಯನ್ನು ಏರತೊಡಗಿದರು. ಶ್ರೀರಾಮಾನುಜಾಚಾರ್ಯರು, ಬೆಟ್ಟವೇರಿ ಬರುತ್ತಿದ್ದಾರೆಂದು ಕೇಳಿ ಶ್ರೀ ಶೈಲಪೂರ್ಣರೆಂಬ ತಿರುಮಲೆನಂಬಿಗಳು,* ಭಗವಂತನ ತೀರ್ಥಪ್ರಸಾದಗಳನ್ನು ತೆಗೆದುಕೊಂಡು ಆಚಾರ್ಯರ ಬಳಿಗೆ ಬಂದರು.

*ಈ ತಿರುಮಲೆನಂಬಿಗಳು ಶ್ರೀರಾಮಾನುಜಾಚಾರ್ಯರವರ ಸೋದರ ಮಾವಂದಿರು.

ತಮಗಿದಿರಾಗಿ ಬಂದ ತಿರುಮಲೆನಂಬಿಗಳಿಗೆ, ಶ್ರೀಮದಾಚಾರ್ಯರು, ಸಾಷ್ಟಾಂಗ ಪ್ರಣತರಾಗಿ, ಅವರು ತಂದಿದ್ದ ತೀರ್ಥಪ್ರಸಾದಗಳನ್ನು ಸ್ವೀಕರಿಸಿ, ಅವರನ್ನು ಕುರಿತು, ಎಲೈ ಸ್ವಾಮಿಯೇ, ತಾವೇ ತೀರ್ಥಪ್ರಸಾದಗಳನ್ನು ತೆಗೆದುಕೊಂಡು ಬರಬೇಕೇ? ಆರಾದರೂ ಕಿರಿಯರ ಕಯ್ಯಿಂದ ಕಳುಹಬಾರದಾಗಿದ್ದಿತೇ? ಎಂದು ಕೇಳಿದರು. ಅದಕ್ಕೆ ನಂಬಿಗಳು, ಎಲೈ ರಾಮಾನುಜಮುನಿಯೇ, ಆರಾದರೂ ಕಿರಿಯರುಂಟೋ, ಎಂದು ಬೆಟ್ಟದ ಮೇಲಣ ನಾಲ್ಕು ಬೀದಿಗಳಲ್ಲಿಯೂ ಚೆನ್ನಾಗಿ ಹುಡುಕಿ ನೋಡಿದೆನು; ನನಗಿಂತ ಕಿರಿಯರಾದವರಾರೂ ದೊರೆಯಲಿಲ್ಲ; ಆದುದರಿಂದ ನಾನೇ ಬಂದೆನು, ಎಂದು ಉತ್ತರವಿತ್ತರು. ನಂಬಿಗಳ ನುಡಿಗೇಳಿ, ಅವರ ಹೆಚ್ಚಾದ ಪ್ರತಿಪತ್ತಿಗೆ ಆಚಾರ್ಯರು ಅಚ್ಚರಿಗೊಂಡು ತಲೆದೂಗಿದರು.

ಬಳಿಕ ಆಚಾರ್ಯರು, ತಿರುಮಲೆನಂಬಿಗಳನ್ನು ಮುಂದಿಟ್ಟುಕೊಂಡು, ಪರಿಜನರ ಸಂಗಡ ಊರ ಸುತ್ತಣ ಕಲ್ಲ ಗೋಡೆಯ ವರೆಗೆ ಬಿಜಯಮಾಡಿಸಿದರು. ಆಗ, ಯತಿಗಳೂ, ಏಕಾಂಗಿಗಳೂ, ದೇವಾಲಯದ ಅಧಿಕಾರಿಗಳೂ, ಅಲ್ಲಿಯ ಪರಿಜನಗಳೂ ಶ್ರೀಮದಾಚಾರ್ಯರಿಗೆ ಇದಿರುಬಂದು, ಅವರನ್ನು ಕಾಲೋಚಿತವಾಗಿ ಸತ್ಕರಿಸಿದರು.

ತರುವಾಯ, ಆಚಾರ್ಯರು, ಪರಿಜನರೊಡನೆ, ದೇವಾಲಯದ ಹೆಬ್ಬಾಗಿಲ ಬಳಿಗೆ ಬಂದು, ನಮಸ್ಕಾರಮಾಡಿ, ಸ್ವಾಮಿಪುಷ್ಕರಿಣಿಗೆ ಬಿಜಯಮಾಡಿದರು. ಅಲ್ಲಿ ಸ್ನಾನಮಾಡಿ, ಊರ್ಧ್ವಪುಂಡ್ರಗಳನ್ನು ಧರಿಸಿ, ಪ್ರದಕ್ಷಿಣವಾಗಿ ನಾಲ್ಕು ಬೀದಿಗಳಲ್ಲಿಯೂ ಬಂದು, ಪ್ರಾಕಾರ, ಗೋಪುರ, ಮಂಟಪ, ಸೌಧಗಳನ್ನು ನೋಡುತ್ತ, ದೇವಾಲಯದ ದಕ್ಷಿಣಪಶ್ಚಿಮದಲ್ಲಿ, ತಮ್ಮ ಅನುಜ್ಞೆಯಂತೆ ಅನಂತಾರ್ಯರಿಂದ ನಿರ್ಮಿತವಾದ ರಾಮಾನುಜವೆಂಬ ಹೂದೋಟವನ್ನು ಹೊಕ್ಕರು. ಅನಂತಾರ್ಯರು ಪಕ್ಕದಲ್ಲಿಯೇ ಬರುತ್ತ, ಶ್ರೀಮದಾಚಾರ್ಯರಿಗೆ ತೋಟವನ್ನೆಲ್ಲ ತೋರಿದರು. ಇಂದ್ರನ ನಂದನವನ್ನು ಹಳಿಯುವಂತಿದ್ದ ಆ ತೋಟದ ಸೊಬಗನ್ನೂ, ಬಾವಿಕೆರೆಗಳ ಅಂದವನ್ನೂ ಕಂಡು ಶ್ರೀರಾಮಾನುಜಾಚಾರ್ಯರು ಸುಪ್ರೀತರಾಗಿ ಕಣ್ಣುಗಳಿಂದ ಸಂತಸದ ನೀರು ಉಕ್ಕುತ್ತಿರಲು, ಅನಂತಾರ್ಯರನ್ನು ಗಟ್ಟಿಯಾಗಿ ಅಪ್ಪಿಕೊಂಡು, ಎಲೈ ಅನಂದಾಣ್ಪಿಳ್ಳೆಯೇ, ಮಗನೇ, ನಾವು ಜ್ಞಾನಪುತ್ರರನ್ನಾಗಿ ಬಳೆಯಿಸಿದ ಇನಿಬರು ಶ್ರೀವೈಷ್ಣವರೊಳಗೆ, ನಿನ್ನಿಂದಲೇ ಸತ್ಫಲವನ್ನು ಪಡೆದವರಾದೆವು, ಎಂದು ಹೇಳಿ, ತಮ್ಮ ಶೀತಳಕಟಾಕ್ಷದಿಂದ ಚೆನ್ನಾಗಿ ನೋಡಿ ಬಹುವಾಗಿ ಅಭಿನಂದಿಸಿದರು.

ಅನಂತರದಲ್ಲಿ, ಆಚಾರ್ಯರು ದೇವಾಲಯವನ್ನು ಹೊಕ್ಕು, ಕ್ರಮವಾಗಿ ಬಲಿಪೀಠ, ಯಾಮುನಪುಷ್ಪಮಂಟಪಗಳಿಗೆರಗಿ, ಆನಂದನಿಲಯವೆಂಬ ವಿಮಾನಕ್ಕೆ ನಮಸ್ಕರಿಸಿ, ಗರ್ಭಗೃಹವನ್ನು ಪ್ರವೇಶಿಸಿ, ಅರಳಿದ ಹೂಗೊಂಚಲುಳ್ಳ ಇಂದ್ರನೀಲ

ಮಣಿಮಯವಾದ ಅವುದೋ ಕಲ್ಪವೃಕ್ಷವು ಈ ಬೆಟ್ಟದ ತಲೆಯ ಮೇಲೆ ಚೆನ್ನಾಗಿ ಬೇರೂರಿ ಇದೆಯೆಂದು ಉತ್ಪ್ರೇಕ್ಷಿಸುತ್ತ, ನೂಪುರದಿಂದ ಕಿರೀಟದ ವರೆಗಿನ ಎಲ್ಲ ಆಭರಣಗಳನ್ನೂ, ಹೊಳೆಹೊಳೆಯುವ ವಸ್ತ್ರಗಳನ್ನೂ, ಸೊಗಸಾದ ಮಾಲಿಕೆ ಗಳನ್ನೂ, ಅನುಲೇಪನಗಳನ್ನೂ ಧರಿಸಿ ಒಪ್ಪುತ್ತಿರುವ ಶ್ರೀಪದ್ಮಾವತೀವಲ್ಲಭನಾದ ವೇಂಕಟನಾಥನಿಗೆ ವಂದಿಸಿ, ಶ್ರೀಪರಾಂಕುಶಸೂರಿದೃಷ್ಟವಾದ ದ್ರಮಿಡೋಪನಿಷ ತ್ತಿನ, ಆರನೆಯ ಶತಕದ, ಆರನೆಯ ದಶಕದಲ್ಲಿರುವ ಗಾಥೆಗಳಿಂದ ಭಗವಂತನನ್ನು ಹಾಡಿ ಹೊಗಳಿದರು. ಬಳಿಕ ಶ್ರೀಮದಾಚಾರ್ಯರು ಭಗವದನುಗೃಹೀತವಾದ ತೀರ್ಥ ಶ್ರೀಶಠಕೋಪಗಳನ್ನು ಸ್ವೀಕರಿಸಿ, ದೇವಾಲಯದಿಂದ ಹೊರಗೆ ಬಂದು, ಆಗಲೇ ಬೆಟ್ಟವನ್ನು ಇಳಿಯಬೇಕೆಂದು ಬಯಸಿದರು. ಆಗ, ಶ್ರೀಶೈಲಪೂರ್ಣರೆಂಬ ತಿರುಮಲೆನಂಬಿಗಳು, ಅವರನ್ನು ನೋಡಿ, ಎಲೈ ರಾಮಾನುಜಮುನಿಯೇ, ದಿವ್ಯ ದೇಶಗಳಲ್ಲಿ ಮೂರು ದಿನಗಳು ನಿಲ್ಲಬೇಕೆಂಬ ಪದ್ಧತಿಯಿದೆ, ಎಂದರು. ಆ ನುಡಿಗೆ ಶ್ರೀಮದಾಚಾರ್ಯರು ಸಮ್ಮತಿಸಿ, ಶ್ರೀವೇಂಕಟನಾಥನನ್ನೇ ಅನುಭವಿಸಿಕೊಂಡು ಶರೀರಧಾರಣೆಯನ್ನುಮಾಡುತ್ತ, ಮೂರು ದಿನಗಳೂ ಆಹಾರವನ್ನು ಕೊಳ್ಳದೆ, ಬೆಟ್ಟದ ಮೇಲೆ ಇದ್ದರು.

ಮೂರನೆಯ ದಿವಸ ಶ್ರೀಮದಾಚಾರ್ಯರು, ತಿರುಮಲೆನಂಬಿಗಳೊಡನೆ ದೇವಾಲಯಕ್ಕೆ ಹೋಗಿ, ಶ್ರೀಭಟ್ಟನಾಥಸೂರಿಗಳ ಪ್ರಬಂಧದ ಪ್ರಥಮದಶಕದಿಂದ ಭಗವಂತನನ್ನು ಹೊಗಳಿ, ಪಯಣಹೊರಡುವುದಕ್ಕೆ ಅಪ್ಪಣೆಯನ್ನು ಬೇಡುತ್ತ, ಕಯ್ಗಳನ್ನು ಮುಗಿದುಕೊಂಡು ನಿಂತರು. ಭಗವಂತನಾದ ಶ್ರೀನಿವಾಸನು, ಬಹು ಸಂತೋಷದಿಂದ ಅವರಿಗೆ ತೀರ್ಥಪ್ರಸಾದಗಳನ್ನು ಕೊಟ್ಟು, ಅನವರತವೂ ಹೂಗಳ ಕಂಪನ್ನು ಬೀರುತ್ತಿರುವ ತನ್ನ ಸಿರಿಯಡಿಗಳನ್ನು ಅವರ ತಲೆಯ ಮೇಲೆ ಇರಿಸಿ, ಎಲೈ ರಾಮಾನುಜಮುನಿಯೇ, ನಿಮಗೂ ನಿಮ್ಮವರಿಗೂ, ತೆಂಕನಾಡಿನಲ್ಲಿ ಬಿಜಯ ಮಾಡಿರುವ ನಾವು, ಮೊದಲೇ ಉಭಯವಿಭೂತ್ಯೈಶ್ವರ್ಯಗಳನ್ನು ದಯೆಪಾಲಿಸಿ ಇದ್ದೇವೆ. ಈಗ ನಿಮಗೆ ಕೊಡತಕ್ಕುದಾವುದೂ ಉಳಿದಿಲ್ಲ, ಎಂದು ಘನಗಂಭೀರ ಧ್ವನಿಯಿಂದ ಬಾಯ್ದೆರೆದು ಅಪ್ಪಣೆಕೊಡಿಸಿ, ಆಚಾರ್ಯರನ್ನು ಅಭಿನಂದಿಸಿದನು. ಭಗವಂತನ ಮಾತನ್ನು, ಶ್ರೀರಾಮಾನುಜಾಚಾರ್ಯರು, ಮಹಾಪ್ರಸಾದವೆಂದು ಅಂಗೀ ಕರಿಸಿದರು. ತರುವಾಯ, ಅವರಿಗೆ, ಪಯಣಮಾಡಲಿಕ್ಕೆ, ಭಗವಂತನು ಅಪ್ಪಣೆ ಯನ್ನು ಕರುಣಿಸಿದನು.

ಆಮೇಲೆ ಶ್ರೀಮದಾಚಾರ್ಯರು, ತಿರುಮಲೆನಂಬಿಗಳೊಡನೆ ಬೆಟ್ಟವನ್ನಿಳಿದು, ನಂಬಿಗಳ ಮನೆಯಲ್ಲಿ ಪ್ರಸಾದಸ್ವೀಕಾರಮಾಡುತ್ತ, ಒಂದು ವರ್ಷಕಾಲ ಇದ್ದು ಕೊಂಡು, ಅವರಿಂದ ಇತಿಹಾಸಶ್ರೇಷ್ಠವಾದ ಶ್ರೀರಾಮಾಯಣದ ವಿಶೇಷಾರ್ಥಗ

ಳನ್ನು ಅಧಿಕರಿಸಿದರು. ಕಾಲಕ್ಷೇಪವು ಸಂಪೂರ್ಣವಾದ ಬಳಿಕ, ನಂಬಿಗಳು ಸುಪ್ರೀತರಾಗಿ, ಎಲೈ ರಾಮಾನುಜಮುನಿಗಳೇ, ಸಕಲವೈಷ್ಣವಕುಲಧುರಂಧರರೇ, ನೀವು ಬಹುದೂರದಿಂದ ಇಲ್ಲಿಗೆ ಬಿಜಯಮಾಡಿದ್ದೀರಿ; ನಾನು ನಿಮಗೆ ಏನನ್ನು ಸಮರ್ಪಿಸಲಿ, ಎಂದು ಕೇಳಿದರು. ಅದಕ್ಕೆ ಶ್ರೀಮದಾಚಾರ್ಯರು, ಎಲೈ ಸ್ವಾಮಿಯೇ, ನನಗೆ ಏನನ್ನಾದರೂ ಕೊಡಬೇಕೆಂಬ ಇಷ್ಟವು ತಮಗೆ ಇರುವುದಾದರೆ, ತಮ್ಮ ಅಂತರಂಗ ಕಿಂಕರರಾದ ಗೋವಿಂದಾರ್ಯರನ್ನು* ದಯೆಗೆಯ್ಯಬೇಕು, ಎಂದು ಕೇಳಿಕೊಂಡರು. ಸರಿ, ಎಂದು ನಂಬಿಗಳು ಗೋವಿಂದಾರ್ಯರನ್ನು ಶ್ರೀರಾಮಾನುಜರಿಗೆ ಒಪ್ಪಿಸಿಬಿಟ್ಟರು. ಬಳಿಕ ಶ್ರೀಮದಾಚಾರ್ಯರು, ಮತ್ತೊಮ್ಮೆ ಬೆಟ್ಟಕ್ಕೆ ಹೋಗಿ, ದೇವರ ದರ್ಶನವನ್ನು

---

*ಇವರು ಶ್ರೀರಾಮಾನುಜಾಚಾರ್ಯರ ತಾಯ ತಂಗೆಯ ಮಕ್ಕಳು. ಯಾದವಪ್ರಕಾಶರ ಹತ್ತಿರ ಶ್ರೀಮದಾಚಾರ್ಯರ ಸಹಾಧ್ಯಾಯಿಗಳಾಗಿದ್ದರು. ಯಾದವಪ್ರಕಾಶರಿಗೂ ಶ್ರೀಮದಾಚಾರ್ಯರಿಗೂ ಕೆಲವು ಉಪನಿಷದ್ವಾಕ್ಯಾರ್ಥವಿಷಯದಲ್ಲಿ ಭಿನ್ನಾಭಿಪ್ರಾಯ ಬರಲು, ಯಾದವಪ್ರಕಾಶರೊಂದಿಗೆ ಶ್ರೀಮದಾಚಾರ್ಯರೂ ಕಾಶಿಗೆ ಬಿಜಯಮಾಡಿಸಿದರೆ ಅವರ ಪ್ರಾಣಕ್ಕೇ ವಿಪತ್ತು ಬರಲಿರುವುದೆಂದು ಅರಿತು, ಸಕಾಲದಲ್ಲಿ ಇದನ್ನು ಶ್ರೀಮದಾಚಾರ್ಯರಿಗೆ ತಿಳುಹಿ ಅವರನ್ನು ಅಪಾಯದಿಂದ ತಪ್ಪಿಸಿದರು.

ಇವರು ಕಾಶಿಯಲ್ಲಿ ಗಂಗಾಸ್ನಾನ ಮಾಡುತ್ತಿದ್ದಾಗ ಅಂಗೈಯ್ಗೆ ಒಂದು ಲಿಂಗವು ಅಂಟಿಕೊಳ್ಳಲು, ಯಾದವಪ್ರಕಾಶರು ಗಂಗಾಧರನು ನಿಮಗೆ ಒಲಿದನೆಂದು ಕೊಂಡಾಡಿದುದರಿಂದ, ಶಿವದೀಕ್ಷೆಯನ್ನು ವಹಿಸಿ, ಶ್ರೀಕಾಳಹಸ್ತಿಯ ಶಿವಾಲಯದಲ್ಲಿ ಕೈಂಕರ್ಯವನ್ನು ಮಾಡಿಕೊಂಡಿದ್ದರು. ಶ್ರೀಮದಾಚಾರ್ಯರಿಗೂ, ಇವರಿಗೂ ಸೋದರಮಾವಂದಿರಾದ (ಶ್ರೀಶೈಲಪೂರ್ಣ) ತಿರುಮಲೆನಂಬಿಯವರು ಇದನ್ನರಿತು ತಮ್ಮವಾದದಿಂದಲೂ, ಜಾಣ್ಮೆಯಿಂದಲೂ ಇವರನ್ನು ತಿದ್ದಿ ಶಿಷ್ಯರನ್ನಾಗಿಸಿಕೊಂಡರು. ಶ್ರೀಮದಾಚಾರ್ಯರು ಸನ್ಯಾಸಿಗಳಾದ ಬಳಿಕ, ತಮ್ಮ ಮಹತ್ಕಾರ್ಯಗಳನ್ನು ಏಕಾಕಿಯಾಗಿ ನೆರವೇರಿಸುವದು ಕಷ್ಟವೆಂದೂ, ಯೋಗ್ಯರೂ, ಸಮರ್ಥರೂ, ಪರಮಾಪ್ತರೂ ಆದ ಮತ್ತೊಬ್ಬರ ನೆರವು ಬೇಕೆಂದೂ ಆಲೋಚಿಸಿ, ಇವರನ್ನು ತಿರುಮಲೆನಂಬಿಗಳಿಂದ ಧಾರಾಪೂರ್ವಕವಾಗಿ ಪಡೆದರು. ತದಾರಭ್ಯ ಇವರು ಶ್ರೀಮದಾಚಾರ್ಯರ ಶಿಷ್ಯರಾದರು. ಮದುವೆಯಾಗಿದ್ದರೂ ಇವರು ಭಗವಂತನನ್ನೇ ಎಲ್ಲೆಲ್ಲಿಯೂ ಕಾಣುತ್ತಿದ್ದುದರಿಂದ, ಪತ್ನೀಸಂಪರ್ಕಕ್ಕೆ ಸಹ ಅಂಜಿ, ಸಂಸಾರಸುಖಗಳನ್ನು ತ್ಯಜಿಸಿದುದರಿಂದ ಶ್ರೀಮದಾಚಾರ್ಯರು ಇವರಿಗೆ ಸನ್ಯಾಸವನ್ನಿತ್ತರು. ಇವರು ಎಂಬಾರ್ ಎಂಬ ಹೆಸರಿಂದ ಪ್ರಖ್ಯಾತರಾಗಿ ವಿಜ್ಞಾನಸ್ತುತಿ ಎಂಬ ಗ್ರಂಥವನ್ನು ರಚಿಸಿದ್ದಾರೆ. ಶ್ರೀಮದಾಚಾರ್ಯರವರ ಕಾಲಾನಂತರ ಅವರ ಪೀಠವನ್ನಲಂಕರಿಸಿದ ಶ್ರೀಪರಾಶರಭಟ್ಟರು ಇವರ ಶಿಷ್ಯರು. ಎಪ್ಪತ್ತುನಾಲ್ಕು ಪೀಠಾಧಿಪತಿಗಳಲ್ಲಿ ಇವರೂ ಸೇರಿದವರು.

ಮಾಡಿ, ಅವನ ಅಪ್ಪಣೆಯನ್ನು ಪಡೆದು, ಶಿಲ್ಪಿಶಾಸ್ತ್ರಕ್ಕೆ ತಕ್ಕಂತೆ, ತಮ್ಮ ವಿಗ್ರಹವೊಂದನ್ನು ಮಾಡಿಸಿ, ಅದನ್ನು ಚೆನ್ನಾಗಿ ಬಿಗಿಯಪ್ಪಿ, ಶಿಷ್ಯರಾದ ಅನಂತಾರ್ಯರಿಗೆ ಕೊಟ್ಟು, ಸಪರಿವಾರರಾಗಿ ಶ್ರೀರಂಗಕ್ಕೆ ಬಿಜಯಮಾಡಿಸಿದರು.

ಇಲ್ಲಿಗೆ ಶ್ರೀವೇಂಕಟೇಶಭಕ್ತಾಗ್ರೇಸರಶ್ರೀಮದನಂತಾರ್ಯ
ಚರಿತ್ರೆಯಲ್ಲಿ ಎರಡನೆಯ ಪ್ರಕರಣಂ.

# ಮೂರನೆಯ ಪ್ರಕರಣಂ.

ಒಮ್ಮೆ, ಅನಂತಾರ್ಯರ ಶಿಷ್ಯರಾದ ಕೆಲವರು ಶ್ರೀವೈಷ್ಣವರು, ಶ್ರೀಮದಾಚಾರ್ಯರ ಅಪ್ಪಣೆಯ ಮೇರೆಗೆ, ತಮ್ಮ ಗುರುಗಳು, ಶ್ರೀವೇಂಕಟಾದ್ರಿಯಲ್ಲಿ ವಾಸಮಾಡುತ್ತಿದ್ದಾರೆ ಎಂದು ಕೇಳಿ, ತಮ್ಮ ಗುರುಗಳಿಗೂ, ಶ್ರೀನಿವಾಸದೇವರಿಗೂ, ವಂದಿಸಿ ಬರಬೇಕೆಂದು ಆಸೆಪಟ್ಟು, ದಕ್ಷಿಣದೇಶದಿಂದ ವೇಂಕಟಾಚಲಕ್ಕೆ ಪಯಣಮಾಡಿದರು. ಹಾದಿಯಲ್ಲಿ ವರ್ಧಿತವನ್ಮಂಗಳ (ವಳತ್ತೂರ್ಮಂಗಳ) ವೆಂಬ ಊರು ಸಿಕ್ಕಿತು. ಅಲ್ಲಿ ವರ್ಧಿತವನ್ಮಂಗಳವಾರ್ (ವಳತ್ತೂರ್ಮಂಗಳಮುಡೆಯಾರ್) ಎಂಬ ಹೆಸರಿನ ಧರ್ಮಿಷ್ಠನೊಬ್ಬನಿದ್ದನು. ಅವನು ವೈಷ್ಣವನು ; ತನ್ನ ಊರಿಗೆ ಬಂದ ಈ ಯಾತ್ರಿಕರನ್ನೆಲ್ಲ ಚೆನ್ನಾಗಿ ಉಪಚರಿಸಿ, ಅವರ ಸಂಗಡ ತಾನೂ ಶ್ರೀವೇಂಕಟಾಚಲಕ್ಕೆ ಹೊರಟನು. ಹಾದಿಯಲ್ಲಿ, ಅವನು, ಈ ಶ್ರೀವೈಷ್ಣವರನ್ನು ಕುರಿತು, ಎಲೈ ಸ್ವಾಮಿಗಳಿರ, ನನ್ನನ್ನೂ ಶ್ರೀವೈಷ್ಣವನನ್ನಾಗಿಸಿರಿ, ಎಂದು ಹಲವು ಬಗೆಯಿಂದ ಬೇಡಿಕೊಳ್ಳುತ್ತಿದ್ದರೂ, ಅವನಿಗೆ ಈ ಯಾತ್ರಿಕರು ಯಾವ ಬದಲನ್ನೂ ಹೇಳಲಿಲ್ಲ. ಎಲ್ಲರೂ ವೇಂಕಟಾಚಲವನ್ನು ಸೇರಿದ ಮೇಲೆ ಅನಂತಾರ್ಯರನ್ನು ಕಂಡು, ಅವರ ಸಿರಿಯಡಿಗಳಿಗೆ ನಮಸ್ಕರಿಸಿದರು. ತಮಗೆ ವಂದಿಸಿದ ಶಿಷ್ಯರನ್ನು ಕಂಡು, ಅನಂತಾರ್ಯರು, ಎಲೈ ಪೂಜ್ಯರಿರಾ, ನೀವು ಕುಶಲಿಗಳೇ ? ನಿಮ್ಮ ಪ್ರಯಾಣವು ಸುಖವಾಗಿದ್ದಿತೇ, ಎಂದು ಕೇಳಿ, ಅವರೆಲ್ಲರ ಮನಸ್ಸಿಗೂ ಸಂತಸವುಂಟುಮಾಡಿದರು. ಇದೆಲ್ಲವನ್ನೂ ದೂರದಿಂದ ನೋಡುತ್ತಿದ್ದ ವರ್ಧಿತವನ್ಮಂಗಳವಂತನು ಈ ಶ್ರೀವೈಷ್ಣವರನ್ನು ಕುರಿತು, ಎಲೈ ಸ್ವಾಮಿಗಳಿರ, ಆ ಮಹನೀಯರ ಬಳಿಗೆ ನನ್ನನ್ನು ಕರೆದುಕೊಂಡುಹೋಗಿ ಕೃತಾರ್ಥನನ್ನಾಗಮಾಡಿರಿ, ಎಂದು ಬಿನ್ನವಿಸಿಕೊಂಡನು.

ಈ ರೀತಿ ಆ ಬ್ರಾಹ್ಮಣನು ತಮ್ಮ ಶಿಷ್ಯರೊಡನೆ ಮಾತನಾಡುತಿದ್ದುದನ್ನು ಅನಂತಾರ್ಯರು ಕಂಡರು. ಈತನು ಯಾರು? ಏನ ಹೇಳುತ್ತಿದ್ದಾನೆ? ಎಂದು ಶಿಷ್ಯರನ್ನು ಕೇಳಿದರು. ಅದಕ್ಕೆ ಆ ಶಿಷ್ಯರು, ಎಲೈ ಸ್ವಾಮಿಯೇ, ಲಾಲಿಸಬೇಕು, ಈತನು ಬ್ರಾಹ್ಮಣನು, ವರ್ಧಿತವನ್ಮಂಗಳವಂತನೆಂದು ಇವನ ಹೆಸರು. ಇವನು ಧಾರ್ಮಿಕನು, ನಮ್ಮನ್ನೆಲ್ಲ ತನ್ನ ಊರಲ್ಲಿ ಬಹುವಾಗಿ ಉಪಚರಿಸಿದ್ದಾನೆ. ನಮ್ಮ ಸಂಗಡಲೇ ಇಲ್ಲಿಗೂ ಬಂದಿದ್ದಾನೆ. ದೇವರ ಅಡಿದಾವರೆಗಳಲ್ಲಿ ಸಮಾಶ್ರಯಣವಾಗ ಬೇಕೆಂದು ಬಯಸುತ್ತಿದ್ದಾನೆ. ಇವನನ್ನು ಸ್ವಾಮಿಯು ಅನುಗ್ರಹಿಸಬೇಕು, ಎಂದು ವಿನಯದೊಡನೆ ವಿಜ್ಞಾಪಿಸಿಕೊಂಡರು. ಆಗ ಅನಂತಾರ್ಯರು, ಅವರನ್ನು ಕುರಿತು, ಅಯ್ಯ ಕೇಳಿರಿ; ಶಮ, ದಮ, ಮೊದಲಾದ ಗುಣಗಳುಳ್ಳವರಿಗೆ ತತ್ತ್ವೋಪದೇಶವನ್ನು ಮಾಡುವೆವೇ ಹೊರತು, ಇತರರಿಗಾರಿಗೂ ನಾವು ಮಾಡುವವರಲ್ಲ, ಎಂದು ಹೇಳಿ ಬಿಟ್ಟರು. ಆಗ ಶಿಷ್ಯರು, ಮತ್ತೆ ಅವರನ್ನು ನೋಡಿ, ಎಲೈ ಸ್ವಾಮಿಯೇ, ನಮ್ಮ ವಿಜ್ಞಾಪನೆಯನ್ನು ಲಾಲಿಸಬೇಕು. ಈತನು ನಮ್ಮನ್ನು ಹಾದಿಯುದ್ದಕ್ಕೂ ಬಹು ವಾಗಿ ಅನುಸರಿಸಿಕೊಂಡು ಬಂದಿದ್ದಾನೆ, ತಮ್ಮಿಂದ ತತ್ತ್ವೋಪದೇಶವನ್ನು ಪಡೆಯುವು ದಕ್ಕೆ ತಕ್ಕವನು. ಈತನಿಗೆ ತತ್ತ್ವೋಪದೇಶವನ್ನು ಮಾಡುವುದಕ್ಕೆ ತಾವೇ ಶಕ್ತರು, ಎಂದು ತಿಳಿದು, ಇವನ ಬೇಡಿಕೆಗೆ ನಾವು ಮರುಮಾತಾಡದೆ, ಇವನನ್ನು ಸಂಗಡ ಕರೆದು ತಂದೆವು. ಅವಸನ್ನಚೇತನನಾದ ಈತನಲ್ಲಿ ತಾವು ಅನುಗ್ರಹಮಾಡಬೇಕು, ಎಂದು ಬಲುಬಗೆಯಿಂದ ಬೇಡಿಕೊಂಡರು. ಆಗ ಅನಂತಾರ್ಯರು, ಇಷ್ಟುಮಟ್ಟಿಗೆ ಭಾಗವತಕಟಾಕ್ಷಕ್ಕೆ ಪಾತ್ರವಾಗಿರುವ ಈತನು, ನಮ್ಮಿಂದ ಹಿತೋಪದೇಶವನ್ನು ಪಡೆ ಯುವುದಕ್ಕೆ ತಕ್ಕವನೇ ಸರಿ, ಎಂದು ತಿಳಿದು, ಅವನನ್ನು ನೋಡಿ, ಅಯ್ಯ, ಬ್ರಾಹ್ಮಣ, ನನ್ನಿಂದ ಹಿತೋಪದೇಶವನ್ನು ಪಡೆಯಬೇಕೆಂಬ ಇಚ್ಛೆಯು ನಿನಗೆ ಉಂಟೋ? ಹಾಗಿದ್ದರೆ ನಿನ್ನ ಸಕಲಸಂಪತ್ತೂ ಭಗವದ್ಭಾಗವತಾಚಾರ್ಯರ ಕೈಂಕರ್ಯದಲ್ಲಿ ವಿನಿಯೋಗವಾಗುವುದಾದರೆ, ನನ್ನನ್ನೂ, ನನ್ನ ಪ್ರಾಪ್ಯವನ್ನೂ ಪಡೆಯುತ್ತೀಯೆ; ಇದು ನಿನಗೆ ಒಪ್ಪಿಗೆಯಾದರೆ, ಈಗಲೇ ಸ್ನಾನಮಾಡಿಕೊಂಡು ಬಾ, ಎಂದು ಹೇಳಿದರು. ಹೀಗೆ ಆಗುವುದಾದರೆ, ನಾನೇ ಪುಣ್ಯವಂತನು, ಎಂದುಕೊಂಡು, ಆ ಬ್ರಾಹ್ಮಣನು, ಬೇಗನೆ ಸ್ನಾನಮಾಡಿಕೊಂಡು ಬಂದನು. ಆಗ ಅವನಿಗೆ, ಅನಂತಾರ್ಯರು, ತಾಪ, ಪುಂಡ್ರ, ನಾಮ, ಯಾಗ, ಮಂತ್ರವೆಂಬ, ಐದು ಬಗೆಯ ಸಂಸ್ಕಾರಗಳನ್ನು ಮಾಡಿ, ಶ್ರೀವೈಷ್ಣವದೀಕ್ಷೆಯನ್ನು ಕೊಟ್ಟರು. ಅವನ ಹಳೆಯ ಹೆಸರು ಹೋಯಿತು. ಅವ ನಿಗೆ ಶ್ರೀವೈಷ್ಣವದಾಸನೆಂಬ ಹೊಸ ಹೆಸರು ಬಂದಿತು. ಅವನು ಅನಂತಾರ್ಯರಿಗೆ ಅಂತರಂಗಕಿಂಕರನಾದನು. ಅವನನ್ನು ಅನಂತಾರ್ಯರು ಕೆಲವು ದಿನಗಳ ವರೆಗೆ ತಮ್ಮ ಬಳಿಯಲ್ಲಿ ಇರಿಸಿಕೊಂಡು, ಸಕಲ ತತ್ತ್ವಾರ್ಥಗಳನ್ನೂ ಅವನಿಗೆ ಚೆನ್ನಾಗಿ ಬೋಧಿಸಿದರು. ಹಾಲು ಇಂಗಿದ ಹಾಗೆಲ್ಲಾ ಕಾಳು ಬಲಿತು ಬಾಗಿಹೋಗುವ ನೆಲ್ಲ

ತಿನೆಯೋಪಾದಿಯಲ್ಲಿ, ಅಹಂಕಾರವು ಕಮ್ಮಿಯಾದ ಹಾಗೆಲ್ಲ ಜ್ಞಾನವು ಹೆಚ್ಚುತ್ತ ಬಂದಿತು; ಜ್ಞಾನವು ವೃದ್ಧಿಯಾದಂತೆಲ್ಲ ಆ ಬ್ರಾಹ್ಮಣನಿಗೆ ನಮ್ರತೆಯೂ ಹೆಚ್ಚಿತು; ನಮ್ರತೆಯು ತಲೆದೋರಿದ ಹಾಗೆಲ್ಲ ಭಗವದ್ಭಾಗವತಕೈಂಕರ್ಯದಲ್ಲಿ ರುಚಿಯು ಏರುತ್ತ ಬಂದಿತು. ತಿರುಪತಿಗೆ ಬರುವಾಗ ತಂದಿದ್ದ ಹಣವನ್ನೆಲ್ಲ ಭಗವದ್ಭಾಗವತ ಕೈಂಕರ್ಯದಲ್ಲಿ ವೆಚ್ಚಮಾಡಿಬಿಟ್ಟರೂ, ಅವನ ಮನಸ್ಸಿಗೆ ತೃಪ್ತಿಯುಂಟಾಗಲಿಲ್ಲ. ಆದುದರಿಂದ, ಅನಂತಾರ್ಯರ ಅಪ್ಪಣೆಯನ್ನು ಪಡೆದು, ತನ್ನ ಊರಿಗೆ ಹೋಗಿ, ಮನವೊಪ್ಪುವಂತೆ ಶ್ರೀವೈಷ್ಣವರನ್ನು ಆರಾಧಿಸಿ, ತನ್ನ ಉಳಿದ ಹಣವನ್ನು ಮೂರು ಪಾಲುಗಳನ್ನಾಗಿ ವಿಂಗಡಿಸಿ, ಎರಡು ಪಾಲುಗಳನ್ನು ತಾಯಿತಂದೆಗಳಿಗೆ ಒಪ್ಪಿಸಿ, ತಾನು ಒಂದು ಪಾಲನ್ನು ತೆಗೆದುಕೊಂಡು, ಒಂದು ವರ್ಷವಾದ ಮೇಲೆ, ತಿರುಪತಿಯ ಬೆಟ್ಟಕ್ಕೆ ಬಂದು, ತಂದ ಹಣವನ್ನು, ಅನಂತಾರ್ಯರ ಅಡಿದಾವರೆಗಳಲ್ಲಿ ಸಮರ್ಪಿಸಿಬಿಟ್ಟನು. ಶ್ರೀಮದನಂತಾರ್ಯರು ಅವನನ್ನು ಕುರಿತು ಸುಖಪ್ರಶ್ನೆಗಳನ್ನು ಮಾಡಿ, ಅವನಿಗೆ ಸಂತಸವುಂಟುಮಾಡಿದರು. ಕೊಂಚ ಹೊತ್ತಾದ ಮೇಲೆ, ಅವರು ಆ ಬ್ರಾಹ್ಮಣನನ್ನು ಕುರಿತು, ಎಲೈ ಶ್ರೀವೈಷ್ಣವದಾಸ, ನೀನು ಭಗವತ್ಸಮಾಶ್ರಯಣಕ್ಕಾಗಿ ನನ್ನ ಬಳಿಗೆ ಬಂದಿದ್ದಾಗ, ನಾನು ಹೇಳಿದ ರೀತಿಯಲ್ಲಿ ನಿನ್ನ ಸಂಪತ್ತನ್ನೆಲ್ಲ ಭಗವದ್ಭಾಗವತಕೈಂಕರ್ಯದಲ್ಲಿ ವಿನಿಯೋಗಮಾಡಿದೆಯಾ? ಎಂದು ಕೇಳಿದರು. ಆ ಮಾತಿಗೆ ಆತನು, ಎಲೈ ಸ್ವಾಮಿಯೇ, ನಾನು ತಮ್ಮ ಸಿರಿಯಡಿಗಳನ್ನು ಆಶ್ರಯಿಸಿದ ಕಾಲದಲ್ಲಿ, ತಾವು ದಾಸನಿಗೆ ಎರಡು ಮಾತುಗಳನ್ನು ಅಪ್ಪಣೆಕೊಡಿಸಿದ್ದಿರಿ; ಅದರಲ್ಲಿ ನನ್ನ ಸಂಪತ್ತನ್ನು ವಿನಿಯೋಗಮಾಡುವುದೆಂಬ ಮೊದಲನೆಯ ಮಾತು ಫಲಕಾರಿಯಾಯಿತು. ತಮ್ಮ ಪ್ರಾಪ್ಯವನ್ನು ನಾನು ಪಡೆಯುವುದೆಂಬ ತಮ್ಮ ಎರಡನೆಯ ಮಾತು, ಬೇಗನೆ ಫಲಕಾರಿಯಾಗಬೇಕಾಗಿದೆ, ಎಂದು ಅರಿಕೆಮಾಡಿಕೊಂಡನು. ಆಗ ಅನಂತಾರ್ಯರು, ಅಯ್ಯ, ಈಗಳೇ ಬಾ, ಇಬ್ಬರೂ ದೇವರ ಬಳಿಗೆ ಹೋಗೋಣ, ಎಂದು ಹೇಳಿ, ಹಣದೊಡನೆ ಅವನನ್ನು ಕರೆದುಕೊಂಡುಹೋಗಿ, ಶ್ರೀನಿವಾಸನ ಪದಮೂಲದಲ್ಲಿ ಒಪ್ಪಿಸಿ, ಭಗವಂತನನ್ನು ನೋಡಿ, ಎಲೈ ವೇಂಕಟನಾಥನೇ, ಲಾಲಿಸಬೇಕು, ಈ ಶ್ರೀವೈಷ್ಣವದಾಸನು, ಭಗವತ್ಸಮಾಶ್ರಯಣಕ್ಕಾಗಿ, ನನ್ನ ಬಳಿಗೆ ಬಂದಿದ್ದಾಗ, ನಿನ್ನ ಪ್ರೇರಣೆಯಂತೆ, ನಾನು ಇವನಿಗೆ ಎರಡು ಮಾತುಗಳನ್ನು ಹೇಳಿದ್ದೆನು. ಇವೆರಡರೊಳಗೆ, ಮೊದಲನೆಯ ಮಾತು ಫಲಕಾರಿಯಾಯಿತು. ಎರಡನೆಯ ಮಾತೂ ಬೇಗನೆ ಫಲಕಾರಿಯಾಗುವಂತೆ ಮಾಡಬೇಕೆಂದು ಇವನು ಬೇಡಿಕೊಳ್ಳುತಿದ್ದಾನೆ. ಅಯ್ಯ, ನೀನು ದುಃಖಪಡಬೇಡ, ಎಂದು ನೀನೇ ಬಾಯ್ದೆರೆದು ಹೇಳಿ, ಅನುಗ್ರಹಿಸಬೇಕು, ಎಂದು ಪ್ರಾರ್ಥಿಸಿದರು. ಆಗ, ಭಗವಂತನು ಪ್ರಸನ್ನನಾಗಿ, ಅವನಿಗೆ ತೀರ್ಥ ಶ್ರೀಶಠಕೋಪಗಳನ್ನು ದಯಿಪಾಲಿಸಿ, ಅನಂತಾರ್ಯರೇ, ಈತನೂ ನಿಮ್ಮಂತೆಯೇ, ದೇಹಾವಸಾನದಲ್ಲಿ ನನ್ನನ್ನು ಹೊದ್ದಲುಳ್ಳವನು, ಎಂದು ಮೃದು

ಮಧುರಲಲಿತವಚನಗಳನ್ನು ಬಾಯ್ದೆರೆದು ಅಪ್ಪಣೆಕೊಡಿಸಿ, ಶ್ರೀವೈಷ್ಣವದಾಸನ ಕಿವಿಗಳಲ್ಲಿ ಅಮೃತರಸವನ್ನು ಹಿಂಡಿದುದಲ್ಲದೆ, ಹೂಗಳ ಕಂಪಿಂದ ಯಾವಾಗಲೂ ಮುಗಮುಗಿಸುತ್ತಿರುವ ತನ್ನ ಸಿರಿಯಡಿದಾವರೆಗಳನ್ನು ಇಬ್ಬರ ತಲೆಗಳ ಮೇಲೆಯೂ ಇರಿಸಿ, ಇಬ್ಬರನ್ನೂ ಮನೆಗೆ ಬೀಳುಕೊಟ್ಟನು.

ಅನಂತಾರ್ಯರು ಅವನ ಕೂಡ ಮನೆಗೆ ಬಂದರು. ತಮ್ಮನ್ನೇ ಗತಿಯೆಂದು ನಂಬಿ, ಸದಾ ಸಕಲಕೈಂಕರ್ಯಗಳನ್ನೂ ಮಾಡುತ್ತಿರುವ ಶ್ರೀವೈಷ್ಣವದಾಸನನ್ನು ಅನಂತಾರ್ಯರು ತಮ್ಮ ಶೀತಲವಾದ ಕಡೆಗಣ್ಣ ದಿಟ್ಟಿಯೆಂಬ ನೀರಿಂದ ಮಿಸಿಸಿ, ಅವನಿಗೆ ಸಕಲಾರ್ಥಗಳನ್ನೂ ಮತ್ತೂ ವಿಶದವಾಗಿ ಬೋಧಿಸುತ್ತ ಇರುತ್ತಿದ್ದರು. ಹೀಗೆ ಕೆಲವು ಕಾಲವು ಕಳೆದ ಮೇಲೆ ಅನಂತಾರ್ಯರನ್ನು ಶರಣುಹೊಕ್ಕು, ಅವರ ಕಡೆಗಣ್ಣ ಕುಡಿನೋಟವೆಂಬ ಶೀತಲಜಲದಲ್ಲಿ ಮಿಂದು, ಪುಷ್ಕಲಭಗವತ್ಪ್ರಾಪ್ತಿಗೆ ತಕ್ಕವನಾಗಿ, ಈಗಲೇ ಪರಮಪದವನ್ನು ಬಯಸುವ ಶ್ರೀವೈಷ್ಣವದಾಸನಿಗೆ, ಪರಮಪದವನ್ನು ಕರುಣಿಸುವೆನೆಂದು ಬಗೆದು, ಭಗವಂತನಾದ ಶ್ರೀನಿವಾಸನು ಒಂದು ದಿವಸ ಮಂಗಳಗಿರಿಯಿಂದ ಬಂದು, ಯಾತ್ರೆಯ ನೆವದಿಂದ ಅನಂತಾರ್ಯರ ಮನೆಯ ಮುಂದಣ ಪಟ್ಟಸಾಲೆಗೆ ಬಿಜಯಮಾಡಿದನು. ಆಗ ಅನಂತಾರ್ಯರೂ, ಶ್ರೀವೈಷ್ಣವದಾಸನೂ ಮನೆಯಿಂದ ಹೊರಗೆ ಬಂದು, ದೇವರಿಗೆ ನಮಸ್ಕರಿಸಿ, ಕಯ್ಮುಗಿದುಕೊಂಡು ನಿಂತಿದ್ದರು. ಅಪಾರಕರುಣಾಸಾಗರನಾದ ಭಗವಂತನು ಶ್ರೀವೈಷ್ಣವದಾಸನನ್ನು ನೋಡಿ, ಎಲೆಯಯ್ಯ, ನಿನಗೆ ಈಗಲೇ ಪರಮಪದವನ್ನು ಕೊಟ್ಟಿದ್ದೇನೆ; ಹೋಗು, ಅದನ್ನು ಪಡೆದುಕೊಳ್ಳು, ಎಂದು ಅನುಗ್ರಹಿಸಿದನು. ಆಗ ಶ್ರೀವೈಷ್ಣವದಾಸನು, ಎಲೈ ಸ್ವಾಮಿಯೇ, ನಾನು ಕೇಳಿಕೊಂಡಿದ್ದುದು ಅದೇ, ಎಂದು ತಲೆವಾಗಿ ನಮಸ್ಕರಿಸಿದನು. ಪರಮಪದಕ್ಕೆ ಕರೆದುಕೊಂಡು ಹೋಗುತ್ತೇನೆ, ಬಾ, ಎಂದು ಹೇಳುತ್ತ, ಭಗವಂತನು ಆಗಲೇ ಅವನಿಗೆ ಪರಮಪದವನ್ನು ಕರುಣಿಸಿದನು. ಆ ರೀತಿಯಾದ ಭಗವಂತನ ಮಹೌದಾರ್ಯವನ್ನು ಕಂಡು, ಅನಂತಾರ್ಯರು ಆಶ್ಚರ್ಯಪಟ್ಟು, ಶ್ರೀವೈಷ್ಣವದಾಸನಿಗೆ ಅಂತ್ಯಕ್ರಿಯೆಗಳನ್ನು ಮಾಡಿ, ಭಗವಂತನಿಗೆ ಸಂತಸವುಂಟುಮಾಡಿದರು.

ಎಂಬಲ್ಲಿಗೆ ಶ್ರೀವೇಂಕಟೇಶಭಕ್ತಾಗ್ರೇಸರ ಶ್ರೀಮದನಂತಾರ್ಯ ಚರಿತ್ರೆಯಲ್ಲಿ ಮೂರನೆಯ ಪ್ರಕರಣಂ.

# ನಾಲ್ಕನೆಯ ಪ್ರಕರಣಂ.

ಒಂದು ದಿನ ಅನಂತಾರ್ಯರು, ರಾಮಾನುಜವೆಂಬ ತಮ್ಮ ನಂದನವನದಲ್ಲಿ, ಹೂಗಳನ್ನೂ ತುಲಸಿಯನ್ನೂ ಕುಯ್ಯುತ್ತಿರುವಾಗ, ಒಂದು ಹಾವು ಅವರ ಕಯ್ಯನ್ನು ಕಚ್ಚಿತು; ವಿಷವೈದ್ಯರನ್ನು ಕರೆದು ತರಬೇಕೆಂದು ಅವರ ಶಿಷ್ಯರು ಸಡಗರ ಪಡುತ್ತಿದ್ದರು. ನೀವು ಯಾರನ್ನೂ ಕರೆದು ತರಬೇಡಿರಿ, ಎಂದು ಅನಂತಾರ್ಯರು ಅವರನ್ನು ತಡೆದುಬಿಟ್ಟು ಎಂದಿನಂತೆ ಸ್ನಾನಮಾಡಿ, ಭಗವತ್ಕೈಂಕರ್ಯಾಸಕ್ತರಾಗಿ ನೆಟ್ಟಗೆ ದೇವಾಲಯಕ್ಕೆ ಹೊರಟುಹೋದರು. ದೇವರ ಸನ್ನಿಧಿಯಲ್ಲಿ ಸೇರಿದ್ದ ಭಾಗವತರು ಈ ಸುದ್ದಿಯನ್ನು ಒಬ್ಬರೊಡನೊಬ್ಬರು ಹೇಳಿಕೊಳ್ಳುತ್ತಿದ್ದುದು ಭಗವಂತನ ಕಿವಿಗೂ ಮುಟ್ಟಿತು. ಅವನು, ಅನಂತಾರ್ಯರನ್ನು ಕುರಿತು, ಅನಂತಾರ್ಯರೇ, ನಿಮ್ಮನ್ನು ಹಾವು ಕಚ್ಚಿತಂತೆ, ನೀವೇಕೆ ಆ ವಿಷವನ್ನು ಪರಿಹಾರಮಾಡುವ ಯತ್ನವನ್ನು ಮಾಡದೆ ಸುಮ್ಮನಿದ್ದೀರಿ? ಎಂದು ಕೇಳಿದನು. ಆ ಮಾತ ಕೇಳಿ, ಅನಂತಾರ್ಯರು, ಎಲೈ ಸ್ವಾಮಿಯೇ, ನನ್ನನ್ನು ಹಾವು ಮುಟ್ಟಿದ ಮೇಲೆ ನಾನು ಸ್ನಾನಮಾಡಿ ಶುದ್ಧನಾಗಿದ್ದೇನೆ. ವಿಷವನ್ನು ಪರಿಹರಿಸಿಕೊಳ್ಳಬೇಕೆಂದು ಅಪ್ಪಣೆಯಾಗುತ್ತದೆ, ಯಾವ ವಿಷವನ್ನು ಪರಿಹರಿಸಿಕೊಳ್ಳಲಿ? ಒಳಗಿನ ಅಹಂಕಾರವೆಂಬ ದೊಡ್ಡ ಹಾವಿನ ವಿಷವನ್ನೋ? ಕಚ್ಚಿದ ಹಾವಿನ ವಿಷವನ್ನೋ? ಆತ್ಮನನ್ನು ಹಾಳುಮಾಡುವ ಮೊದಲನೆಯ ಹಾವಿನ ವಿಷವು, ಸಕಲಭವರೋಗವೈದ್ಯನಾದ ನಿನ್ನಿಂದಲೇ ಪರಿಹಾರವಾಗಬೇಕು. ಸಾಮಾನ್ಯರಾದ ವಿಷವೈದ್ಯರಿಂದ ಆಗತಕ್ಕುದಲ್ಲ. ಎರಡನೆಯ ಹಾವಿನ ವಿಷದಿಂದ ಈ ದೇಹವು ಹೋಗಬಹುದು, ಇದು ಹೋದರೆ ಹೋಗಲಿ, ಆಗ ನಾನು ರಾಹುವಿನ ಬಾಯಿಂದ ಬದುಕಿಬಂದ ಚಂದ್ರಮಂಡಲದಂತೆ ಆಗುತ್ತೇನೆ. ಆದಕಾರಣ, ನನಗೆ ವಿಷವೈದ್ಯರಿಂದ ಯಾವ ಪ್ರಯೋಜನವೂ ಆಗುವುದಿಲ್ಲ, ಎಂದು ಉತ್ತರಕೊಟ್ಟರು. ಆ ಮಾತಿಗೆ ಭಗವಂತನು, ಅನಂತಾರ್ಯರೇ ನೀವು ಹಾವಿನ ವಿಷವನ್ನು ಪರಿಹರಿಸಿಕೊಳ್ಳದೆ ದೇಹವನ್ನು ಹೀಗೆ ಉಪೇಕ್ಷೆಮಾಡಿದರೆ, ನಿಮ್ಮ ಸಂಗದಿಂದ ನನಗಾಗುವ ಮಹಾನಂದವು ತಪ್ಪಿಹೋಗುತ್ತದೆ. ಅದಕ್ಕೋಸ್ಕರ ನೀವು ಅಗತ್ಯವಾಗಿ ವಿಷವನ್ನು ಇಳಿಸುವ ಉಪಾಯವನ್ನು ಮಾಡಬೇಕು, ಎಂದು ಅಪ್ಪಣೆ ಮಾಡಿದನು. ಅನಂತಾರ್ಯರು, ತಾವು ಫಣಿರಾಜಾಂಶವೆಂಬುದನ್ನು ಅರಿತಿದ್ದುದರಿಂದ ಭಗವಂತನೊಡನೆ, ಎಲೈ ಸ್ವಾಮಿಯೇ, ನನ್ನನ್ನು ಕಚ್ಚಿದ ಹಾವು ಬಲವುಳ್ಳದಾದರೆ, ನಾನು ವಿರಜಾನದಿಯಲ್ಲಿ ಮಿಂದು, ಪಾಪಗಳನ್ನೆಲ್ಲಾ ಕೊಡಹಿಬಿಸುಟು, ಶ್ರೀ ಭೂ ನೀಳೆಯರೊಡಗೂಡಿ, ವೈಕುಂಠದಲ್ಲಿ ಒಪ್ಪುತ್ತಿರುವ ನಿನ್ನ ಊಳಿಗವನ್ನು ಮಾಡುತ್ತೇನೆ. ಕಚ್ಚಿಸಿಕೊಂಡ ಈ ಹಾವು, (ತಾನು) ಬಲವುಳ್ಳದಾದರೆ,

ಇಲ್ಲಿಯೇ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿ, ಪದ್ಮಾವತೀಸಹಿತನಾದ ನಿನ್ನ ಕೈಂಕರ್ಯವನ್ನು ಪ್ರತಿದಿನವೂ ಮಾಡುತ್ತೇನೆ. ಹೇಗೆ ನೋಡಿದರೂ, ನಿನ್ನನ್ನು ಬಿಟ್ಟಿರುವ ಚಿಂತೆಯು ನನಗೆ ಕೊಂಚವೂ ಇಲ್ಲ. ನಿನ್ನ ಕರುಣಾಕಟಾಕ್ಷವೆಂಬ ತಣ್ಣೀರಿನಲ್ಲಿ ಸದಾ ಮೀಯುತ್ತಿರುವ, ನನ್ನ ಮೈಯ್ಯನ್ನು ಯಾವ ವಿಷವು ತಾನೇ ಸೋಂಕಲಾದೀತು ? ಸಕಲಭವರೋಗವೈದ್ಯನಾದ ನೀನು ನನ್ನನ್ನು ಎಚ್ಚರಿಕೆಯಿಂದ ಪರಾಂಬರಿಸುತ್ತಿರುವಲ್ಲಿ, ಸಾಮಾನ್ಯರಾದ ವೈದ್ಯರನ್ನು ಹುಡುಕಿಕೊಂಡು ಓಡಲಿಕ್ಕೆ, ನಾನೇನು ಮರುಳನೇ ? ಎಂದು ಅರಿಕೆಮಾಡಿಕೊಂಡು ಸುಮ್ಮನೆ ಇದ್ದುಬಿಟ್ಟರು.

ಒಂದಾನೊಂದು ದಿನ ಅನಂತಾರ್ಯರು, ಯಾಮುನಮಂಟಪದಲ್ಲಿ* ಹೂಗಳಿಂದ ಮಾಲೆಗಟ್ಟುತ್ತ ಕುಳಿತಿದ್ದಾಗ, ಅವರ ಕೈಂಕರ್ಯಶ್ರದ್ಧೆಯನ್ನು ಪರೀಕ್ಷಿಸಬೇಕೆಂದು ಭಗವಂತನ ಚಿತ್ತಕ್ಕೆ ಬಂದಿತು. ಕೂಡಲೇ, ಅವರನ್ನು ತನ್ನೆಡೆಗೆ ಕರೆದು ತರಬೇಕೆಂದು ಭಗವಂತನು ಅರ್ಚಕನ ಮುಖದಿಂದ ಹೇಳಿಕಳುಹಿದನು. ಒಡನೆಯೇ ಅವರ ಬಳಿಗೆ ದೂತನೊಬ್ಬನು ಬಂದು, ತಲೆಬಾಗಿ, ಎಲೈ ಸ್ವಾಮಿಯೇ, ತಮ್ಮನ್ನು ಈಗಲೇ ಕರೆದು ತರಬೇಕೆಂದು ಭಗವಂತನ ಅಪ್ಪಣೆಯಾಗಿದೆ; ತಾವು ಈಗಲೇ ಬರಬೇಕು, ಎಂದು ಬಿನ್ನವಿಸಿಕೊಂಡನು. ಆ ಮಾತ ಕೇಳಿ, ಅನಂತಾರ್ಯರು, ಎಲಾ ದೂತ, ನಿನಗೇನು ಹೋಗಬೇಕು ? ವೇಂಕಟನಾಥನಿಗೆ ತಾನೇ ಏನು ಹೋಗಬೇಕು ? ಈ ಮೊಲ್ಲೆಯ ಮೊಗ್ಗುಗಳೆಲ್ಲ ಅರಳಿಬಿಟ್ಟರೆ, ಮಾಲೆಗಟ್ಟಲಿಕ್ಕೆ ಬರುವುದಿಲ್ಲ;

---

*ಶ್ರೀಯಾಮುನಮುನಿಗಳು ಇಲ್ಲಿ ಮೊದಲು ಕೆಲವು ಕಾಲವಿದ್ದು, ಆಯೆಡೆಯಲ್ಲಿ ಕುಟೀರವನ್ನು ನಿರ್ಮಿಸಿ, ಹೂಮಾಲೆಗಳನ್ನು ಕಟ್ಟಿ, ಶ್ರೀನಿವಾಸದೇವರಿಗೆ ಸಮರ್ಪಿಸುತ್ತಿದ್ದರು, ಎಂದು ಹಳಬರು ಹೇಳುತ್ತಿದ್ದುದನ್ನು ಕೇಳಿ ಭಾಷ್ಯಕಾರರು, ಶ್ರೀಯಾಮುನಮುನಿಗಳ ಹೆಸರಿನಲ್ಲಿ ಪುಷ್ಪಮಾಲಾಕರಮಂಟಪವನ್ನು ಕಟ್ಟಿ, ಅಲ್ಲಿ ಅವರ ಅರ್ಚಾವಿಗ್ರಹವನ್ನು ಪ್ರತಿಷ್ಠೆಮಾಡಿ ಆರಾಧನವನ್ನೂ ನಡೆಸತಕ್ಕುದು, ಎಂದು ಕಟ್ಟಲೆಯಿಟ್ಟ ಮೇರೆಗೆ, ಅನಂತಾರ್ಯರು ಆಚಾರ್ಯರ ಅಪ್ಪಣೆಯೆಲ್ಲವನ್ನೂ ನೆರವೇರಿಸಿದರು. ಮತ್ತು ಶ್ರೀರಾಮಾನುಜನಂದನದಿಂದ ಹೂಗಳನ್ನು ತಂದು, ಆ ಮಂಟಪದಲ್ಲಿ ಕುಳಿತು, ತಾವೇ ಮಾಲೆಗಳನ್ನು ಕಟ್ಟಿ, ಪುಟ್ಟಿಯೊಳಗಿರಿಸಿ, ವಾಸನೆನೋಡುವುದೆಂಬ ಅಪಚಾರವು ತಲೆಗಟ್ಟಬಾರದೆಂದು, ಬಾಯಿಮೂಗುಗಳಿಗೆ ಬಟ್ಟೆಯನ್ನು ಬಿಗಿದು, ಪರಮಾದರದಿಂದ ಪುಟ್ಟಿಯನ್ನು ತಲೆಯ ಮೇಲಿರಿಸಿಕೊಂಡು, ಛತ್ರಚಾಮರಾದಿಪರಿಚ್ಛದದೊಡನೆಯೂ, ಮಂಗಳವಾದ್ಯಗಳೊಡನೆಯೂ, ಕಯ್ದೀವಿಗೆಗಳೊಡನೆಯೂ ಯಾಮುನಮಂಟಪದಿಂದ ಹೊರಟು, ದೇವಾಲಯವನ್ನು ಬಲವಂದು ಭಗವದಾರಾಧನೆಯ ವೇಳೆಗೆ, ಭಗವತ್ಸನ್ನಿಧಿಗೆ ಪ್ರತಿದಿನವೂ ಅರ್ಪಿಸುತ್ತಿದ್ದರು.

(ಶ್ರೀ. ವೇಂ. ಇ. ಮಾ. ಸ್ತಬಕ 6 ಪು. 143)

ವಾಸನೆಯೂ ಹೋಗಿಬಿಡುತ್ತದೆ. ಅದರಿಂದ ನಾನು ಈಗ ಬರುವುದಕ್ಕಾಗುವುದಿಲ್ಲ, ಹೋಗು, ಎಂದು ಹೇಳಿ, ಮಾಲೆಗಟ್ಟುವುದರಲ್ಲಿಯೇ ಇದ್ದುಬಿಟ್ಟರು. ಅನಂತಾರ್ಯರ ಈ ಇರುವಿಕೆಯನ್ನು ಕಂಡು, ದೂತನು ಹಿಂದಿರುಗಿ ಹೋಗಿ, ನಡೆದ ಸುದ್ದಿಯನ್ನು ತಿಳಿಸಿಬಿಟ್ಟನು. ಅವರ ಕೈಂಕರ್ಯನಿಷ್ಠೆಯನ್ನು ಕಂಡು ಭಗವಂತನಿಗೆ ಬಹುಸಂತೋಷವಾಯಿತು.

ಇತ್ತ, ಅನಂತಾರ್ಯರು, ಸರಸರನೆ ಮಾಲೆಗಳನ್ನು ಕಟ್ಟಿ, ಬುಟ್ಟಿಯೊಳಗೆ ಇರಿಸಿಕೊಂಡು, ಯಾಮುನಮಂಟಪದಿಂದ ಹೊರಟು, ತಲೆಯ ಮೇಲೆ ಬುಟ್ಟಿಯನ್ನು ಹೊತ್ತು, ನೆಟ್ಟಗೆ ದೇವಾಲಯವನ್ನು ಹೊಕ್ಕು ಭಗವತ್ಸನ್ನಿಧಿಯನ್ನು ಸೇರಿದರು. ಅವರ ಮೇಲೆ ಮುನಿಸಿಕೊಂಡನೋ, ಎಂಬಂತೆ ಶ್ರೀನಿವಾಸನು, ತೆರೆಯನ್ನು ಮರೆಮಾಡಿಕೊಂಡಿದ್ದನು; ಆ ತೆರೆಯನ್ನು ಓಸರಿಸಿ, ಅವರು ಒಳಹೊಕ್ಕು, ಎಲೈ ಸ್ವಾಮಿಯೇ, ನೀನೇಕೆ ಹೀಗೆ ಮುನಿಸಿಕೊಂಡಿದ್ದೀಯೆ? ಎಂದು ಕೇಳಿದರು. ಅವರನ್ನು ನೋಡಿ ಭಗವಂತನು, ಏನಿರಯ್ಯ ಅನಂತಾರ್ಯರೇ, ನನ್ನ ಅಪ್ಪಣೆಯನ್ನು ಬ್ರಹ್ಮರುದ್ರರು ಕೂಡ ಮೀರುವುದಿಲ್ಲ. ಹೀಗಿರುವಲ್ಲಿ, ನೀವು ನನ್ನ ಮಾತನ್ನು ಮೀರಿ, ಮನಬಂದಂತೆ ನಡೆಯುತ್ತಿದ್ದೀರಿ. ನನ್ನ ಈ ಬೆಟ್ಟದಿಂದ ನಿಮ್ಮನ್ನು ದಾಟಿಸಿ ಬಿಟ್ಟರೆ ಏನ ಮಾಡುತ್ತೀರಿ? ನನಗೆ ನಿಮ್ಮ ಹೂಮಾಲೆಗಳೊಂದೂ ಬೇಡ; ತೆಗೆದುಕೊಂಡು ಹೋಗಿರಿ, ಎಂದು ಗರ್ಜಿಸಿದನು. ಆ ಮಾತ ಕೇಳಿ, ಅನಂತಾರ್ಯರು, ಎಲೈ ಸ್ವಾಮಿಯೇ, ಕೇಳು, ನಾನು ನಿನ್ನನ್ನು ನೋಡಬೇಕೆಂದು, ಇಲ್ಲಿಗೆ ಬರಲಿಲ್ಲ; ನೀನು ಹೇಳಿದಂತೆ ನಡೆಯಲೋಸುಗ, ಇಲ್ಲಿ ವಾಸಮಾಡುತ್ತಲೂ ಇಲ್ಲ. ನಿನಗೆ ಪುಷ್ಪಕೈಂಕರ್ಯವನ್ನು ಮಾಡಿಕೊಂಡಿರಬೇಕೆಂದು, ಶ್ರೀರಾಮಾನುಜಾಚಾರ್ಯರು ನನಗೆ ನೇಮವನ್ನಿತ್ತರು. ಅದನ್ನು ನಡೆಸಲೋಸ್ಕರ, ನಾನು ಇಲ್ಲಿಗೆ ಬಂದಿದ್ದೇನೆ. ನನ್ನ ಆಚಾರ್ಯರಿಗೆ ಒಪ್ಪಿಗೆಯಾದ ಕೆಲಸವನ್ನು ನಾನು ಮಾಡುತ್ತೇನೆಯೇ ಹೊರತು, ಮಿಕ್ಕವರು ಹೇಳಿದ ಕೆಲಸವನ್ನು ಮಾಡುವುದಿಲ್ಲ: "ಮಾಯಾವೀ ಪರಮಾನಂದಂ ತ್ಯಕ್ತ್ವಾವೈಕುಂಠಮುತ್ತಮಂ । ಸ್ವಾಮಿಪುಷ್ಕರಿಣೀತೀರೇ ರಮಯಾ ಸಹ ಮೋದತೇ ॥ (ಆಶ್ಚರ್ಯಗುಣಚೇಷ್ಟಿತನಾದ ಪರಮಾತ್ಮನು, ಆನಂದಮಯವೂ ಉತ್ತಮವೂ ಆದ ವೈಕುಂಠವನ್ನು ಬಿಟ್ಟು, ಸಿರಿಯಾಣ್ಮೆಯರೊಡನೆ, ಸ್ವಾಮಿಪುಷ್ಕರಿಣಿಯ ತೀರದಲ್ಲಿ ಸಂತಸದಿಂದ ವಿಹರಿಸುತ್ತಾನೆ;) ಎಂದು ಹೇಳುವುದರಿಂದ, ನೀನು ಯಾವಾಗಲೋ ವೈಕುಂಠದಿಂದ ಬಂದು ಈ ಬೆಟ್ಟದಲ್ಲಿ ನೆಲಸಿದ್ದೀಯೆ; ನೀನು ಕರುಣಿಸಿದ ಉಭಯವಿಭೂತಿಗಳನ್ನುಳ್ಳ ಶ್ರೀರಾಮಾನುಜಾಚಾರ್ಯರವರ ನಿಯಮನದಂತೆ, ನಿನ್ನ ಹೂವಿನ ಊಳಿಗವನ್ನು ನಡೆಸುವುದಕ್ಕೋಸ್ಕರ, ನಾನೂ ಇಲ್ಲಿಗೆ ಬಂದು ನೆಲಸಿದ್ದೇನೆ; ಎಂದರೆ ನಾವಿಬ್ಬರೂ ಎಲ್ಲಿಂದಲೋ ಇಲ್ಲಿಗೆ ಬಂದವರು. ಆದರೆ ನೀನು ನನಗಿಂತ ಮೊದಲೇ ಇಲ್ಲಿಗೆ ಬಂದಿರ

ಬಹುದು. ಈ ಕಾರಣದಿಂದಲೇ ನೀನು ನನ್ನನ್ನು ಈ ಬೆಟ್ಟದಿಂದ ಅಟ್ಟಿಬಿಡಲಾಗುವುದಿಲ್ಲ. ಶ್ರೀಮುದಾಚಾರ್ಯರ ನಿಯಮನದಂತೆ ನಿನ್ನ ಪುಷ್ಪಕೈಂಕರ್ಯವನ್ನು ನಾನು ಮಾಡುತ್ತಿದ್ದೇನೆ. ನಿನಗೆ ಇಷ್ಟವಿದ್ದರೆ ನನ್ನ ಊಳಿಗವನ್ನು ಒಪ್ಪು, ಇಲ್ಲವಾದರೆ ಬಿಡು ; ಇಗೋ ಈ ತೆರೆಗೂ, ನಿನಗೂ, ಯಾವ ಬಗೆಯ ವ್ಯತ್ಯಾಸವೂ ನನಗೆ ತೋರಲಿಲ್ಲ. ಎಲೈ ಸ್ವಾಮಿಯೇ, ಕೇಳು, ನಾನು ಆಚಾರ್ಯನಿಷ್ಠರಾದ ಶ್ರೀ ಮಧುರಕವಿಗಳ* ಹತ್ತಿರ ಓದ ಕಲಿತವನು, ನನ್ನನ್ನು ಅವರ ದಾಸನೆಂದು ತಿಳಿ, ಎಂದು ಹೇಳಿ, ಕೋಪದಿಂದ, ತಂದಿದ್ದ ಮಾಲೆಗಳನ್ನೆಲ್ಲ ತೆರೆಯ ಮೇಲೆ ಬಿಸುಟು, ಮನೆಗೆ ಹೊರಡುವುದಕ್ಕಾಗಿ ಹಿಂದಿರುಗಿ, ಬೇಗಬೇಗನೆ, ಒಂದೆರಡು ಅಡಿಗಳನ್ನು ಇಟ್ಟರು.

ಕೂಡಲೇ ಭಗವಂತನು, ಹಿಂದೊಡರಿ ಬಂದು, ಅವರ ಕಯ್ಗಳನ್ನು ಹಿಡಿದುಕೊಂಡು, ಅನಂತಾರ್ಯರೇ, ನಿಮಗೆ ಕೋಪವೇಕೆ ? ಎಂದು ಅವರನ್ನು ಸಂತಯಿಸುತ್ತ, ಒಳಗೆ ಕರೆದುಕೊಂಡು ಹೋಗಿ, ತೆರೆಯ ಮೇಲಿದ್ದ ಮಾಲೆಗಳನ್ನು ತೆಗೆದು ತಾನೇ ಧರಿಸಿಕೊಂಡು ಅಯ್ಯ, ನಿಮ್ಮ ಆಚಾರ್ಯನಿಷ್ಠೆಯನ್ನೂ ಕೈಂಕರ್ಯಾಭಿರುಚಿಯನ್ನೂ ಕಂಡು, ನಾನು ತುಂಬ ಹಿಗ್ಗಿಹೋಗಿದ್ದೇನೆ. ನೀವು ಬೇಕಾದ

---

*ಇವರು ಪಾಂಡ್ಯರಾಜ್ಯದ (ತಿರುನೆಲ್ವೇಲಿ ಜಿಲ್ಲಾ) ತಿರುಕ್ಕುರುಂಗುಡಿಯ ಒತ್ತಿನಲ್ಲಿರುವ ಕೋಳೂರು ಎಂಬ ಗ್ರಾಮದಲ್ಲಿ ಹುಟ್ಟಿದರು. ವಿದ್ಯಾಭ್ಯಾಸವಾದ ಬಳಿಕ ದೇಶಾಟನೆಯನ್ನು ಮಾಡುತ್ತ, ಅಯೋಧ್ಯೆಗೆ ಬಂದರು. ಒಂದು ರಾತ್ರಿ ದಕ್ಷಿಣದಿಕ್ಕಿನಲ್ಲಿ ಒಂದು ದಿವ್ಯ ತೇಜಸ್ಸನ್ನು ಕಂಡು, ಇದೇನು ಇರಬಹುದು ಎಂದು ಕುತೂಹಲದಿಂದ, ಆ ತೇಜಸ್ಸು ಇರುವ ಕಡೆಗೆ ರಾತ್ರಿಯಲ್ಲಿಯೇ ಪಯಣಮಾಡುತ್ತ ತಿರುಕ್ಕುರುಹೂರಿ (ಆಳ್ವಾರ್ ತಿರುನಗರಿ) ಗೆ ಬಂದ ಮೇಲೆ, ಮುಂದಕ್ಕೆ ಆ ತೇಜಸ್ಸು ಕಾಣದಿರಲು, ಅದಕ್ಕೆ ಕಾರಣವಾದ ವಸ್ತುವು ಇಲ್ಲಿಯೇ ಇರಬಹುದೆಂದು ಊಹಿಸಿ, ಒಂದು ಹುಣಿಸೆಯ ಮರದ ಬುಡದಲ್ಲಿ ಯೋಗಾರೂಢರಾಗಿ ಕುಳಿತಿದ್ದ ಪರಾಂಕುಶ (ನಮ್ಮಾಳ್ವಾರ್) ರನ್ನು ಕಂಡರು. ಅವರ ಮಾಹಾತ್ಮ್ಯವನ್ನು ಹಲವು ಬಗೆಯಿಂದ ಪರೀಕ್ಷಿಸಿ, ತಮಗೆ ಆಚಾರ್ಯರಾಗಲಿಕ್ಕೆ ತಕ್ಕವರೆಂದು ನಿಶ್ಚಯಿಸಿದ ತರುವಾಯ, ಅವರನ್ನು ಸಮಾಶ್ರಯಿಸಿ ಅವರಿಂದ ಸಕಲತತ್ವಾರ್ಥಗಳನ್ನೂ ತಿಳಿದು, ಭಗವಂತನಿಗಿಂತ ಆಚಾರ್ಯರೇ ಹೆಚ್ಚೆಂದು ಭಾವಿಸಿ, ತಮ್ಮ ಆಚಾರ್ಯನಿಷ್ಠೆಯನ್ನು ಪ್ರಕಟಪಡಿಸುವುದಕ್ಕೋಸುಗ, ಆಚಾರ್ಯಸ್ತುತಿರೂಪವಾದ 'ಕಣ್ಣಿನುಣ್ ಶಿರುತ್ತಾಂಬು' ಎಂಬ ಹತ್ತು ಪಾಶುರಗಳನ್ನು ತಮಿಳಿನಲ್ಲಿ ರಚಿಸಿದ್ದಾರೆ; ಇವರು ದ್ವಾಪರಯುಗದಲ್ಲಿದ್ದವರೆಂದು ಹೇಳಲ್ಪಟ್ಟಿದೆ.

ಮಧುರಕವಿಗಳ ಹತ್ತಿರ ಓದ ಕಲಿತವನು, ಎಂದರೆ ಮಧುರಕವಿಗಳಂತೆ ಆಚಾರ್ಯನಿಷ್ಠೆಯುಳ್ಳವನು, ಎಂದು ಅಭಿಪ್ರಾಯ.

ಪರವನ್ನು ಕೇಳಿರಿ, ಬ್ರಹ್ಮೇಶಾನರಿಗೂ ದೊರೆಯದ ಪುರುಷಾರ್ಥವನ್ನು ನಾನು ನಿಮಗೆ ಕರುಣಿಸುತ್ತೇನೆ, ಎಂದು ಹೇಳಿದನು. ಆ ಭಗವದ್ವಾಕ್ಯವನ್ನು ಕೇಳಿ, ಅನಂತಾರ್ಯರು, ಎಲೈ ಸ್ವಾಮಿಯೇ, ನನಗೆ ನಿನ್ನ ಕೈಂಕರ್ಯವನ್ನು ಮಾಡಬೇಕೆಂಬ ಬಯಕೆಯೊಂದಲ್ಲದೆ ಬೇರೆ ಯಾವ ಬಯಕೆಯೂ ಇಲ್ಲ. ಅದನ್ನೇನೋ ನಾನು ನಿನ್ನ ದಯೆಯಿಂದ ಮಾಡಿಕೊಂಡು ಬರುತ್ತಿದ್ದೇನೆ. ಅದು ತಡೆಯಿಲ್ಲದೆ ನಡೆದುಕೊಂಡು ಬರುವಂತೆ ಅನುಗ್ರಹಿಸಬೇಕು, ಎಂದು ಬೇಡಿಕೊಂಡರು.

ಅವರ ನಿಸ್ಪೃಹತೆಯನ್ನು ಕಂಡು ಭಗವಂತನಿಗೆ ಆಚ್ಚರಿಯಾಯಿತು. ಅವನು ಅವರನ್ನು ನೋಡಿ, ಎಲೈ ಅನಂತಾರ್ಯರೇ, ನೀವು, ಶ್ರೀರಾಮಾನುಜಮುನಿಗಳ ಅಡಿದಾವರೆಗಳನ್ನು ಸಮಾಶ್ರಯಿಸಿರುವುದರಿಂದ ಮುಕ್ತಿಯು ನಿಮಗೆ ದೊರೆತಂತೆಯೇ ಆಗಿದೆ; ನಿಮ್ಮ ಸಂಬಂಧಿಸಂಬಂಧಿಸಂಬಂಧಿಗಳಿಗೂ, ಹೆಚ್ಚೇಕೆ, ನಿಮ್ಮ ಹಿತ್ತಿಲಲ್ಲಿ ಹರಿದಾಡುವ ಕ್ರಿಮಿಕೀಟಗಳಿಗೂ ಮುಕ್ತಿಯನ್ನು ಕೊಟ್ಟಿದ್ದೇನೆ, ಎಂದು ಹೇಳಿ, ಅವರ ಮನಸ್ಸಿಗೆ ಅತಿಶಯವಾಗಿ ಸಂತಸವುಂಟುಮಾಡಿದನು. ಈ ಸಮಾಚಾರವನ್ನು ಕೇಳಿ, ಬಹುಜನಶ್ರೀವೈಷ್ಣವರು ಅವರನ್ನು ಆಶ್ರಯಿಸಿದರು. ಶ್ರೀವೈಷ್ಣವರಾಗಬೇಕೆಂದು ಬಯಸುತ್ತಿದ್ದವರೆಲ್ಲರೂ, ಹೆಚ್ಚಾಗಿ ಅವರೊಡನೆ ಸಂಬಂಧವನ್ನು ಬೆಳೆಸಿದರು. ಶ್ರೀಮಧುರಕವಿಗಳ ನಿಷ್ಠೆಯನ್ನು ಹಿಡಿದಿರುವ ನನ್ನ ಸಂಬಂಧಿಸಂಬಂಧಿಸಂಬಂಧಿಗಳಿಗೂ, ಭಗವಂತನು ಮುಕ್ತಿಯನ್ನು ಕರುಣಿಸಿರುತ್ತಾನೆ; ಆದುದರಿಂದ, ಇನ್ನು ಮುಂದೆ, ನನ್ನನ್ನು ಆಶ್ರಯಿಸುವರೆಲ್ಲರಿಗೂ, ಮಧುರಕವಿದಾಸರೆಂಬ ದಾಸ್ಯನಾಮವು ಇರತಕ್ಕದು, ಎಂದು ಅವರು ಕಟ್ಟಳೆಯನ್ನು ಮಾಡಿದರು.

ಹೀಗಿರುತ್ತಿರಲು, ವಸಂತಕಾಲದ ರಾತ್ರೆಗಳಲ್ಲಿ, ಶ್ರೀವೇಂಕಟನಾಥನು ಪದ್ಮಾವತೀಸಹಿತನಾಗಿ, ಶ್ರೀಮದನಂತಾರ್ಯರ ರಾಮಾನುಜವೆಂಬ ಪುಷ್ಪೋದ್ಯಾನದಲ್ಲಿ ವಿಹರಿಸಬೇಕೆಂದು ಚಿತ್ತಕ್ಕೆ ತಂದು, ಸಿರಿರಾಣಿಯೊಡಗೂಡಿ, ನಂದನವನ್ನು ಹೊಕ್ಕು, ಹೂಗಳನ್ನು ತಿರಿದು, ಹಣ್ಣುಗಳನ್ನು ಸವಿದು, ಇಚ್ಛೆವಂದಂತೆ ವಿಹರಿಸುತ್ತ, ಮುಡಿದಿದ್ದ ಹೂಮಾಲೆಗಳನ್ನು ಕಿತ್ತು ಈಡಾಡಿ, ಮೆಯ್ಗೆ ಬಳಿದುಕೊಂಡಿದ್ದ ಸುಗಂಧದ್ರವ್ಯಗಳನ್ನು ಅಲ್ಲಲ್ಲಿ ಉದುರಿಸಿ, ಮೆದ್ದ ಫಲಗಳ ಬೀಜಗಳನ್ನು ಉಗುಳಿ, ತಾಂಬೂಲವನ್ನು ಸವಿದು ಎಲ್ಲೆಲ್ಲಿಯೂ ಚೆಲ್ಲಿ, ಅಲ್ಲಿಯ ಗಿಡ, ಹೊದರು, ಹಂಬು, ಪಾತಿ ಮುಂತಾದ ಎಲ್ಲೆಡೆಯನ್ನೂ ಹೊಲಸುಮಾಡಿಬಿಟ್ಟನು. ಮರುದಿನ ಅನಂತಾರ್ಯರು ತೋಟಕ್ಕೆ ಬಂದು, ಸತಿಪತಿಗಳ ರಾತ್ರೆಯ ವಿಹಾರದಿಂದ ಹೊಲಸಾಗಿದ್ದ ನಂದನವನ್ನು ಕಂಡು, ಭಗವಂತನ ಪುಷ್ಪೋದ್ಯಾನವನ್ನು ಹೀಗೆ ಹೊಲೆಮಾಡಿದ ನೀಚನಾರು? ಅವನನ್ನು ಹಿಡಿಯಬೇಕೆಂದು, ರಾತ್ರಿಯ ಕಾವಲುಗಾರರನ್ನು ನಿಯಮಿಸಿದರು. ಆ ಜನರು, ಇರುಳೆಲ್ಲ ಎವೆಯಿಕ್ಕದೆ, ತೋಟವನ್ನು ಕಾಯುತ್ತಿದ್ದರು. ಶ್ರೀವೇಂಕಟನಾಥನು, ಅವರಾರ ಕಣ್ಣಿಗೂ ಬೀಳದೆ, ಪದ್ಮಾವತೀಸಹಾಯನಾಗಿ ನಿತ್ಯವೂ ಅಲ್ಲಿ

ವಿಹಾರಕೇಳಿಯನ್ನು ನಡೆಸುತ್ತಲೇ ಬಂದನು. ಆಳುಗಳು ಸರಿಯಾಗಿ ಕೆಲಸಮಾಡುತ್ತ ಇಲ್ಲ, ಎಂದು ಅನಂತಾರ್ಯರು ಶಂಕಿಸಿದರು. ಅವರ ಜತೆಗೆ ತಮ್ಮ ಶಿಷ್ಯರಲ್ಲಿ ಕೆಲವರನ್ನೂ ಕಾವಲ ಕೆಲಸಕ್ಕೆ ನಿಯಮಿಸಿದರು. ಇವರೆಲ್ಲರೂ ಬಲು ಎಚ್ಚರಿಕೆಯಿಂದ ಕಾದಿದ್ದರೂ, ದಿವ್ಯದಂಪತಿಗಳ ವಿಹಾರಕ್ರೀಡೆಯೇನೋ ಪ್ರತಿರಾತ್ರವೂ ನಡೆಯುತ್ತಲೇ ಇದ್ದಿತು. ಆಳುಗಳಾಗಲಿ, ಶಿಷ್ಯರಾಗಲಿ, ಎಚ್ಚರಿಕೆಯಿಂದ ಕೆಲಸಮಾಡುತ್ತ ಇಲ್ಲ, ಎಂದುಕೊಂಡು, ಅನಂತಾರ್ಯರು, ತಾವೇ ಎಚ್ಚರಿಕೆಯಿಂದ ಕಾಯುತ್ತ, ತೋಟದಲ್ಲಿಯೇ ಇದ್ದುಬಿಟ್ಟರೂ ಕೂಡ ಎಂಟು ದಿನಗಳಾದರೂ ಈ ದಂಪತಿಗಳು ಅವರಿಗೂ ಕಾಣಿಸದೆ, ನಿತ್ಯವೂ ಇರುಳು, ನಂದನದಲ್ಲಿ ವಿಹರಿಸುತ್ತಲೇ ಇದ್ದರು. ಒಂಬತ್ತನೆಯ ದಿವಸ ರಾತ್ರಿಯಲ್ಲಿ, ಅನಂತಾರ್ಯರ ಅತಿಶಯವಾದ ಭಕ್ತಿಯನ್ನು ಜನರಿಗೆ ತೋರಿಸಬೇಕೆಂದು ಶ್ರೀನಿವಾಸದೇವರಿಗೆ ಮನವಾಯಿತು. ಅವನೂ ಪದ್ಮಾವತಿಯೂ, ರಾಜದಂಪತಿಗಳಂತೆ ವೇಷಹಾಕಿಕೊಂಡು, ಒಬ್ಬರ ಕಯ್ಯನ್ನು ಒಬ್ಬರು ಹಿಡಿದು, ಅನಂತಾರ್ಯರು ಅಡಗಿಕೊಂಡಿದ್ದ ಪೊದರ ಬಳಿಗೆ ಬಂದು, ಅವರಿಗೆ ಕಾಣಿಸಿಕೊಂಡರು.

ಅವರನ್ನು ಕಂಡೊಡನೆಯೇ ಅನಂತಾರ್ಯರಿಗೆ ಬಹಳ ಕೋಪವೂ, ಭಯವೂ, ಸಂತೋಷವೂ ಉಂಟಾದುವು. ಅವರು, ತಟ್ಟನೆ, ಮರೆಸಿಕೊಂಡಿದ್ದ ಎಡೆಯಿಂದ ಈಚೆಗೆ ಬಂದು, ಅವರಿಬ್ಬರೂ ಕೈಹಿಡಿದುಕೊಂಡಿದ್ದ ಎಡೆಯನ್ನು, ತಮ್ಮ ಎರಡು ಕಯ್ಗಳಿಂದಲೂ ಗಟ್ಟಿಯಾಗಿ ಹಿಡಿದುಕೊಂಡು, ಇಬ್ಬರನ್ನೂ ಒಂದು ಮರಕ್ಕೆ ಕಟ್ಟಿಹಾಕಬೇಕೆಂದು, ಎಳೆದು ತರುತ್ತಿದ್ದರು. ಆಗ, ಶ್ರೀ ವೇಂಕಟನಾಥನು, ಅವರ ಹಿಡಿತದಿಂದ ಹೇಗೆಯೋ ಬಿಡಿಸಿಕೊಂಡು ಓಡಿಹೋದನು*. ಅನಂತಾರ್ಯರ

*ದೇವರು, ಹೇಗೆಯೋ, ತನ್ನ ಕಯ್ಯನ್ನು ಬಿಡಿಸಿಕೊಂಡು, ಅತ್ಯಂತ ಕಾತರನಾಗಿ, ಬೇಗ ಬೇಗನೆ ಓಡಿ, ಅಪ್ರದಕ್ಷಿಣವಾಗಿ ಬೀದಿಯನ್ನು ಬಳಸಿಕೊಂಡು, ತನ್ನ ಮಂದಿರದ ಕಡೆಗೆ ಪಲಾಯನಮಾಡಿದನು, ಎಂಬ ಅದ್ಭುತ ವಿಚಾರವನ್ನು ತಿಳಿದು ಶ್ರೀರಾಮಾನುಜಾಚಾರ್ಯರು, ಇನ್ನು ಮುಂದೆ ಪ್ರತಿವರ್ಷವೂ ಕನ್ಯಾಮಾಸಮಹೋತ್ಸವದಲ್ಲಿ, ಏಳನೆಯ ದಿನ ಸಾಯಂಕಾಲದ ಉದ್ಯಾನವಿಹಾರೋತ್ಸವದಲ್ಲಿ, ಹಿಂದೆ ಭಗವಂತನು ಅಂಜಿ ಅಪ್ರದಕ್ಷಿಣವಾಗಿ ಪಲಾಯನಮಾಡಿದುದರ ನೆನಪಿಗಾಗಿ, ಭಗವದ್ಯಾತ್ರೆಯು ಅಪ್ರದಕ್ಷಿಣವಾಗಿಯೇ ನಡೆಯತಕ್ಕುದು ; ಅನಂತಾರ್ಯರಿಗೆ ಅವರ ನಂದನವನಯಾತ್ರೆಯಲ್ಲಿ ಭಗವಂತನಿಂದ ಮಾಲೆಯು ಅರ್ಪಿಸಲ್ಪಡತಕ್ಕುದು ; ಎಂಟನೆಯ ದಿನ ರಥೋತ್ಸವಯಾತ್ರೆಯಲ್ಲಿ ಜಾಮಾತೃಭಾವದಿಂದ ಭಗವಂತನಿಗೆ ಅನಂತಾರ್ಯರು ನವೀನವಸ್ತ್ರವನ್ನು ಸಮರ್ಪಿಸತಕ್ಕುದು, ಎಂದು ವ್ಯವಸ್ಥಾಪನೆ ಮಾಡಿದರು. ಅಂದಿನಿಂದ ಪ್ರತಿವರ್ಷವೂ ಮೇಲೆ ಹೇಳಿದಂತೆ ಕಾರ್ಯವು ನಡೆದು ಬರುತ್ತಿದೆ. (ಶ್ರೀ. ವೇಂ. ಇ. ಮಾ. ಸ್ತ. 5 ಪು. 123–125.

ಭಕ್ತಿಯೆಂಬ ಕಣ್ಣಿಯಿಂದ ಬಿಗಿವಡೆದಿದ್ದ ಪದ್ಮಾವತಿಯು, ತಪ್ಪಿಸಿಕೊಂಡು ಹೋಗ ಲಾರದೆ, ಅವರ ಕಯ್ಗೆ ಸಿಕ್ಕಿಬಿದ್ದಳು. ಅವರು ಅವಳನ್ನು ಒಂದು ಸಂಪಗೆಯ ಮರದ ಕೊಂಬೆಗೆ ಬಳ್ಳಿಯಿಂದ ಬಿಗಿದು, ಎಲಾ ಕಳ್ಳರ ಮುಂದಾಳೇ, ಎಲಾ ದೊರೆಯ ಹೆಣ್ಣೇ, ನೀವು ಯಾರು ? ಎಲ್ಲಿಯವರು ? ನೀವು ಇಲ್ಲಿ ವಿಹರಿಸಿ, ಈ ಭಗವದ್ವನವನ್ನೆಲ್ಲ ಏಕೆ ಹೊಲೆಮಾಡಿದಿರಿ ? ಎಲೆ ಮಗಳೇ, ನಿನ್ನ ಗಂಡನ ಹೆಸರೇನು ? ದಿಟವನ್ನು ಹೇಳಿಬಿಡು, ಎಂದು ಕೇಳಿದರು. ಅರಮಗಳ ವೇಷದಿಂದ ಬಂದಿದ್ದ ಶ್ರೀ ಪದ್ಮಾ ವತಿಯು, ಅನಂತಾರ್ಯರನ್ನು ನೋಡಿ, ಎಲೆಯಯ್ಯ, ನಿಮ್ಮ ಮಗಳೆಂದು ತಿಳಿದು ನನ್ನನ್ನು ಬಿಟ್ಟುಬಿಡಿರಿ; ನಾನು ಯಾವ ತಪ್ಪನ್ನೂ ಮಾಡಿದವಳಲ್ಲ. ನಾವು ಈ ಬೆಟ್ಟದಲ್ಲಿಯೇ ವಾಸಮಾಡುತ್ತಿದ್ದೇವೆ. ನಾವು ರಾಜರ ಮಕ್ಕಳು. ನನ್ನ ಗಂಡನು ನಿಮ್ಮ ತೋಟಕ್ಕೆ ಬಂದು ವಿಹಾರಮಾಡಿದರೆ, ನಾನೇನ ಮಾಡಲಿ ? ಹೆಂಡಿರು ಹೇಗೆ ಯೂ ಗಂಡನ ಮಾತಿನಂತೆ ನಡೆಯ ಬೇಕಲ್ಲವೇ ? ತಾತ, ನಿಮಗೆ ಸಕಲಶಾಸ್ತ್ರಗಳೂ ಚೆನ್ನಾಗಿ ಗೊತ್ತಿವೆ. ಗಂಡನ ಹೆಸರನ್ನು ಹೆಂಡಿರು ಹೇಳಬಹುದೇ ? ತಪ್ಪ ಮಾಡಿ ದವನು ಓಡಿಹೋದನು. ಏನನ್ನೂ ಅರಿಯದ ಅಬಲೆಯಾದ ನನ್ನನ್ನು ನೀವು ಕಟ್ಟಿಹಾಕುವುದು ಧರ್ಮವೇ ? ಎಂದು ಬಿನ್ನಾಣದಿಂದ ಮಾತನ್ನಾಡಿದಳು.

ಆ ಮಾತ ಕೇಳಿ, ಅನಂತಾರ್ಯರು, ಏನೆಲೆ ಕಳ್ಳರ ಹುಡುಗೀ, ಎಂತಹ ಬಿನ್ನಾಣದ ಮಾತನಾಡುತ್ತಿದ್ದೀಯೆ ? ನೀನು ಗಂಡನ ಹೆಸರನ್ನು ಹೇಳಬಾರದಾಗಿ ದ್ದರೆ, ಹೇಳಬೇಡ, ಬಿಡು. ಆ ಕಳ್ಳರ ಒಡೆಯನನ್ನು ನನಗೆ ತೋರಿಸು, ನಿನ್ನನ್ನು ಬಿಟ್ಟು ಬಿಡುತ್ತೇನೆ, ಎಂದರು. ಅದಕ್ಕೆ ಪದ್ಮಾವತಿಯು, ಎಲೈ ತಂದೆಯೇ, ನಿಮ್ಮ ಕಯ್ಯಿಂದ ತಪ್ಪಿಸಿಕೊಂಡು ಓಡಿಹೋಗಿರುವ ಆ ಕಳ್ಳನನ್ನು, ನಾನು ನಿಮಗೆ ಹೇಗೆ ತೋರಿಸಲಿ ? ನಾನು ಕಯ್ಯಿಲ್ಲಾಗದ ಹೆಣ್ಣು, ನೀವು ನನ್ನನ್ನು ಕಟ್ಟಿಹಾಕಬೇಡಿರಿ ನನ್ನನ್ನು ನಿಮ್ಮ ಬಸುರಲ್ಲಿ ಬಂದವಳೆಂದರಿತು ಬಿಟ್ಟು ಬಿಡಿರಿ, ಎಂದು ಮತ್ತೊಮ್ಮೆ ನುಡಿದಳು. ಆಗ ಅನಂತಾರ್ಯರು, ಅವಳನ್ನು ನೋಡಿ, ಎಲೆ ಹುಡುಗಿ, ನಾನು ಬಹುದಿನಗಳ ವರೆಗೆ ಪಾಡುಪಟ್ಟು ಚೋರಾಗ್ರಣಿಯಾದ ನಿನ್ನ ಗಂಡನನ್ನು ಹಿಡಿದಿ ದ್ದೆನು. ಅವನು ಹೇಗೆಯೋ ತಪ್ಪಿಸಿಕೊಂಡು ಓಡಿಹೋದನು. ಸಿರಿಯಂತೆ ಚೆಲ್ವಿ ಕೆಯಿಂದ ಕಳಕಳಿಸುತ್ತ, ಮಗಳೋಪಾದಿಯಲ್ಲಿ ನನಗೆ ಸಿಕ್ಕಿರುವ ನಿನ್ನಂಥ ಹೆಂಡತಿ ಯನ್ನು ಬಿಟ್ಟು ಆ ಕಳ್ಳನು ಎಲ್ಲಿಗೆ ತಾನೇ ಹೋದಾನು ? ನಿನ್ನನ್ನು ನಾನು ಸರಿ ಯಾಗಿ ನೋಡಿಲ್ಲ; ಅದರಿಂದ ಈಗ ಬಿಡುವುದಿಲ್ಲ; ಬೆಳಗಾಗುವ ವರೆಗೂ, ನೀನು ಹೀಗೆಯೇ ಇರಬೇಕು; ಬೆಳಗಾದ ಮೇಲೆ, ನಾನು ನಿನ್ನ ಕುರುಹುಗಳನ್ನು ಚೆನ್ನಾಗಿ ನೋಡಿ, ತಕ್ಕ ಹೊಣೆಯನ್ನು ತೆಗೆದುಕೊಂಡು ನಿನ್ನನ್ನು ಬಿಟ್ಟುಬಿಡುತ್ತೇನೆ, ಎಂದು ಹೇಳಿದರು. ಬೆಳಗಾಯಿತು. ಭಗವದಾರಾಧನೆಗೋಸ್ಕರ ಪೂಜಾರಿಗಳೂ, ಪರಿಚಾ ರಕರೂ, ಅಧಿಕಾರಿಗಳೂ ದೇವಾಲಯಕ್ಕೆ ಹೋದರು. ದೇವರ ಕಂಠಿಕೆಯಲ್ಲಿ ಒಪ್ಪು

ತ್ತಿದ್ದ ಲಕ್ಷ್ಮಿಯ ಚಿನ್ನದ ವಿಗ್ರಹವು ಅಲ್ಲಿ ಇರಲಿಲ್ಲ. ಅರ್ಚಕರ ಮೇಲೆ ಅಧಿಕಾರಿಗಳಿಗೆ ಸಂದೇಹವುಂಟಾಯಿತು. ಸರಿ, ಅವರು ಅರ್ಚಕರನ್ನು ಹಿಡಿದು ಹೊಡೆಯ ತೊಡಗಿದರು. ಆಗ, ದೇವರು, ಒಬ್ಬನ ಮೇಲೆ ಆವೇಶವಾಗಿ, ಎಲೈ ಅಧಿಕಾರಿಗಳಿರಾ, ಇವರನ್ನು ದಂಡಿಸಬೇಡಿರಿ, ಬಿಟ್ಟುಬಿಡಿರಿ; ಇವರು ನನ್ನ ಲಕ್ಷ್ಮಿಯನ್ನು ಕದಿಯಲಿಲ್ಲ, ಪದ್ಮಾವತಿಯೊಡನೆ, ನಾನು ಅನಂತಾರ್ಯರ ರಾಮಾನುಜವೆಂಬ ಪುಷ್ಪೋದ್ಯಾನದಲ್ಲಿ ವಿಹರಿಸುತ್ತಿದ್ದೆನು; ನಮ್ಮನ್ನು ಹಿಡಿಯಬೇಕೆಂದು ಅವರು ಬಹುಕಾಲದಿಂದ ಹುಡುಕುತ್ತಿದ್ದರೂ, ನಾವು ಅವರ ಕಣ್ಣಿಗೆ ಬೀಳಲಿಲ್ಲ; ನಿನ್ನೆಯ ರಾತ್ರಿ ಅವರು ನಮ್ಮಿಬ್ಬರನ್ನೂ ಹಿಡಿದು ಬಿಟ್ಟರು. ನಾನು ಅವರ ಹಿಡಿತದಿಂದ ಹೇಗೆಯೋ ತಪ್ಪಿಸಿಕೊಂಡು ಬಂದೆನು; ಪದ್ಮಾವತಿಯು ಸಿಕ್ಕಿಕೊಂಡು ಬಿಟ್ಟಳು; ಅವಳನ್ನು, ಅವರು, ಒಂದು ಸಂಪಗೆಯ ಮರದ ರೆಂಬೆಗೆ ಹಂಬಿನಿಂದ ಕಟ್ಟಿಹಾಕಿ, ಪಕ್ಕದಲ್ಲಿಯೇ ಕುಳಿತು, ಎಚ್ಚರಿಕೆಯಿಂದ ಕಾಯುತ್ತಿದ್ದಾರೆ. ನೀವೆಲ್ಲರೂ ಅಲ್ಲಿಗೆ ಹೋಗಿ, ಅವರಿಗೆ ಈ ಸುದ್ದಿಯನ್ನು ತಿಳಿಸಿ, ಈಗಣ ಆರಾಧನೆಗಾಗಿ ಪದ್ಮಾವತಿಯನ್ನು ಕರೆದುಕೊಂಡು ಬನ್ನಿರಿ; ಮತ್ತು ನನ್ನ ಕೈಂಕರ್ಯಧುರಂಧರರಾದ ಅವರನ್ನೂ, ನಾನು ಅಪ್ಪಣೆಮಾಡಿದೆನೆಂದು ಹೇಳಿ, ಸಂಗಡಲೇ ಕರೆದು ಕೊಂಡು ಬನ್ನಿರಿ, ಎಂದು ನಿಯಮಿಸಿದನು.

ಕೂಡಲೇ, ದೇವಾಲಯದ ಅಧಿಕಾರಿಗಳೂ, ಅರ್ಚಕರೂ, ಪರಿಚಾರಕರೂ ಅನಂತಾರ್ಯರ ನಂದನವನಕ್ಕೆ ಹೋದರು. ಅಲ್ಲಿ, ದೊರೆಮಗಳ ವೇಷದ ಪದ್ಮಾವತಿಯು, ಸಂಪಗೆಯ ಮರದ ಕೊಂಬೆಗೆ ಕಟ್ಟುವಡೆದಿದ್ದಳು. ಅವಳ ಪಕ್ಕದಲ್ಲಿಯೇ ಅನಂತಾರ್ಯರು, ಎಚ್ಚರಿಕೆಯಿಂದ ಕಾವಲು ಕಾಯುತ್ತ ಕುಳಿತಿದ್ದರು. ಭಗವಂತನು ಅಪ್ಪಣೆ ಕೊಡಿಸಿದ ಹಾಗೆಯೇ ಇದ್ದ, ಅಲ್ಲಿಯ ಸನ್ನಿವೇಶವನ್ನುನೋಡಿ, ಅವರೆಲ್ಲರಿಗೂ ಅತ್ಯಾಶ್ಚರ್ಯವಾಯಿತು; ಭಗವಂತನು ಹೇಳಿದ್ದುದನ್ನೆಲ್ಲ ಅನಂತಾರ್ಯರಲ್ಲಿ ವಿಜ್ಞಾಪಿಸಿಕೊಂಡರು. ಎಲೈ ಮಹಾಪುಣ್ಯವಂತರಾದ ಅನಂತಾರ್ಯರೇ, ಮನೆಯ ಮಗುವಾಗಿದ್ದ ಪರದೇವತೆಯನ್ನು, ಯಶೋದೆಯು ಒರಲಿಗೆ ಕಟ್ಟಿಹಾಕಿದ್ದಳು. ನಿಮ್ಮ ಭಕ್ತಿಪಾಶದಿಂದ ಮೊದಲೇ ಕಟ್ಟುವಡೆದಿರುವ ಪದ್ಮಾವತೀದೇವಿಯವರು ಈಗ ನಿಮ್ಮಿಂದ ಮರಕ್ಕೆ ಕಟ್ಟಲ್ಪಟ್ಟಿದ್ದಾರೆ. ಈಗ ಪ್ರಾತರಾರಾಧನೆಯ ಹೊತ್ತಾಯಿತು, ನೀವು ದೇವಿಯವರನ್ನು ಬಿಟ್ಟು ಕೊಡಬೇಕು; ನಿಮ್ಮನ್ನು ನೋಡಬೇಕೆಂದು ಶ್ರೀಪದ್ಮಾವತೀಪ್ರಿಯನು ಕಾತುರನಾಗಿರುತ್ತಾನೆ; ನೀವು ಪ್ರಾತರಾಹ್ನಿಕಗಳನ್ನು ತೀರಿಸಿಕೊಂಡು, ಬೇಗನೆ ಸ್ವಾಮಿಯ ದರ್ಶನಕ್ಕೆ ಬಿಜಯಮಾಡಿಸಬೇಕು, ಎಂದು ವಿನಯದಿಂದ ಕೇಳಿಕೊಂಡರು.

ಅವರ ನುಡಿಗಳನ್ನು ಕೇಳಿ ಅನಂತಾರ್ಯರು ಬೆರಗಾಗಿ ಹೋದರು. ಅಯ್ಯೋ! ನಾನು ಭಗವಂತನಲ್ಲಿ ಬಹುವಾಗಿ ಅಪಚಾರಪಟ್ಟೆನಲ್ಲ, ಎಂದು ಅವರು ನೊಂದು

ಕೊಂಡು, ನಗೆಮೊಗದ ಪದ್ಮಾವತಿಯ ಕಟ್ಟುಗಳನ್ನು ಕಳಚಿ ಬಿಸುಟು, ನನ್ನ ತಪ್ಪುಗಳನ್ನು ಮನ್ನಿಸಬೇಕು, ತಾಯೇ, ಎಂದು ಅವಳ ಅಡಿದಾವರೆಗಳಲ್ಲಿ ಅಡಗೆಡೆದು ದೈನ್ಯದಿಂದ ಬೇಡಿಕೊಂಡರು. ನಾನು ನಿಮ್ಮ ಮಗಳು, ಎಂದು ಅನಂತಾರ್ಯರಿಗೆ ಹೇಳಿದ್ದ ಮಾತುಗಳನ್ನು ದಿಟಮಾಡಬೇಕೆಂದು ಬಯಸಿ, ಆಗಳೇ ಪದ್ಮಾವತಿಯು ಮದುವೆಗೆ ನೆರೆದ ಕೊಡಗೂಸಾಗಿ ಹೋದಳು.

ಇತ್ತ, ಅನಂತಾರ್ಯರು, ತಮ್ಮ ಪ್ರಾತರಾಹ್ನಿಕಗಳನ್ನು ಬೇಗ ಬೇಗನೆ ತೀರಿಸಿಕೊಂಡು, ಒಂದು ಕಯ್ಯಲ್ಲಿ ಹೂವಿನ ಬುಟ್ಟಿಯನ್ನೂ, ಇನ್ನೊಂದು ಕಯ್ಯಿಂದ ಆ ಕನ್ನೆಯ ಭುಜವನ್ನೂ ಹಿಡಿದುಕೊಂಡು,* ಅರ್ಚಕಪರಿಚಾರಕಾಧಿಕಾರಿಗಳೊಡನೆ ದೇವಾಲಯಕ್ಕೆ ಬಂದು, ದೇವರ ಪದಮೂಲದಲ್ಲಿ ಸಾಷ್ಟಾಂಗನಮಸ್ಕಾರಮಾಡಿ, ಸ್ವಾಮಿ, ನನ್ನ ಅಪರಾಧಗಳನ್ನು ಕ್ಷಮಿಸು, ಎಂದು ಪ್ರಾರ್ಥಿಸಿಕೊಂಡರು. ಆಗ ಭಗವಂತನು, ಅವರನ್ನು ಕುರಿತು, ಎಲೈ ಅನಂತಾರ್ಯರೇ, ಈ ನಿಮ್ಮ ಮಗಳನ್ನು ನಮಗೆ ಕೊಡಿರಿ; ಇದು ನಿಮಗೆ ಕನ್ಯಾಶುಲ್ಕವಾಗಿರಲಿ, ಎಂದು ಹೇಳಿ, ತನ್ನ ಕೊರಲ್ಲಿ ಇದ್ದ ಚಿನ್ನದ ಸರವನ್ನು ತೆಗೆದು, ಅವರ ಕೊರಲಿಗೆ ಹಾಕಿಬಿಟ್ಟನು. ಅನಂತಾರ್ಯರು ಕನ್ಯೆಯನ್ನು ಶ್ರೀನಿವಾಸನಿಗೆ ಒಪ್ಪಿಸಿ ಬಿಟ್ಟರು. ಎಲ್ಲರೂ ನೋಡುತ್ತಿದ್ದಂತೆಯೇ, ಅವಳು, ಶ್ರೀವೇಂಕಟನಾಥನ ಕಂಠಿಕೆಯಲ್ಲಿ ಸ್ವರ್ಣವಿಗ್ರಹವಾಗಿ ಕಂಗೊಳಿಸಿದಳು. ಅಂದಿನಿಂದ ಅನಂತಾರ್ಯರು,† ಪದ್ಮಾವತಿಯನ್ನು ಮಗಳೆಂದೂ, ಶ್ರೀನಿವಾಸನನ್ನು ಅಳಿಯನೆಂದೂ ತಿಳಿದು, ಕನ್ಯಾಮಾಸ ಮಹೋತ್ಸವದಲ್ಲಿ, ನೂತನವಾದ ಪೀತಾಂಬರವನ್ನು ದೇವರಿಗೆ ಸಮರ್ಪಿಸುತ್ತ, ಶ್ರೀನಿವಾಸದೇವರ ಮಾವನೆಂದು ಎಲ್ಲರಿಂದಲೂ ಕೀರ್ತಿತರಾದರು.

---

*ಭಗವತಿಯಾದ ಪದ್ಮಾವತಿಯನ್ನು ಹೂಬುಟ್ಟಿಯೊಡನೆ ಕಕ್ಷದಲ್ಲಿ ಎತ್ತಿಕೊಂಡು.
ಶ್ರೀ. ವೆಂ. ಇ. ಮಾ. ಸ್ತಬಕ 5 ಪು 124—125.

†ವೇಂಕಟನಾಥನನ್ನು ದರ್ಶನಮಾಡುವ ಕಾಲದಲ್ಲಿ:—

ಎನ್ ತಿರುಮಹಳ್ ಶೇರ್ ಮಾರ್ವನೇ ಎನ್ನುಂ, ಎನ್ನುಡೈಯಾವಿಯೇ ಎನ್ನುಮ್
ನಿನ್ ತಿರುವೆಯತ್ತಾಲಿಡನ್ದು ನೀಕೊಂಡ ನಿಲಮಹಳ್ ಕೇಳ್ವನೇ ಎನ್ನುಮ್ ॥
ಅನ್ರುರುವೇಳುಂ ತಳುವಿ ನೀಕೊಂಡ ಆಯ್‌ಮಹಳನ್ಬನೇ ಎನ್ನುಮ್ ।
ತೆನ್ ತಿರುವರಙ್ಗಂ ಕೋಯಿಲ್ ಕೊಂಡಾನೇ ತೆಳಿಹಿಲ್ಲೇನ್ ಮುಡಿವಿವಳ್‌ತನಕ್ಕೇ ॥

(ಎನ್ನಯ ಸಿರಿಯಣುಗಿಯನೆರ್ದೆಯೊಳು ತಾಳ್ದ ।
ಚೆನ್ನಿಗ, ಮತ್ಪ್ರಾಣಭೂತ ।
ಮುನ್ನ ದಂಷ್ಟ್ರದೆ ಕೊರೆದಂಡಭಿತ್ತಿಯ ನೆಲ ।
ವೆಣ್ಣನೆಗಹಿ ಕಯ್ಪಿಡಿದನೆ ॥

ಒಂದಾನೊಂದು ದಿವಸ, ಅನಂತಾರ್ಯರು, ತಮ್ಮ ನಂದನದಲ್ಲಿ ಬೆಳೆದು, ತುಂಬ ಕಳೆಗಳಿಂದ ಕೂಡಿ ಸಣ್ಣನಾಗಿ, ಉದ್ದನೆಯಿರುವ, ಬಹುಪರಿಮಳಯುತವಾದ ಲಾಮಂಚದ ಬೇರನ್ನು ತಂದು, ಪದ್ಮಾವತೀಪ್ರಿಯನಾದ ಶ್ರೀನಿವಾಸನ ಬಾಹುಗಳಿಗೆ ಅಳವಡಿಸಿದರು. ಲಾಮಂಚದ ಬೇರಿಂದ ಒಪ್ಪುವ ತೋಳುಗಳನ್ನುಳ್ಳ ವೇಂಕಟ ನಾಥನು, ಅವರನ್ನು ನೋಡಿ, ಅನಂತಾರ್ಯರೇ, ಈಗ ನಾನು ಹೇಗೆ ಕಾಣುತ್ತಿದ್ದೇನೆ, ಹೇಳಿರಿ, ಎಂದು ಕೇಳಿದನು. ಆದಕ್ಕೆ ಅವರು, ಎಲೈ ಸ್ವಾಮಿಯೇ, ಸಂಸಾರ ವೆಂಬ ಹಿರಿಯ ಕಡಲಲ್ಲಿ ಬಿದ್ದು ಒದೆದಾಡುವ ಜೀವರನ್ನು ಹಿಡಿಯಬೇಕೆಂದು ತವಕಿ ಸುತ್ತಿರುವ ಬಹುಗುಣಜಾಲಗಳಿಂದ ಮೆರೆಯುವ ಜಾಲಗಾರನೇ, ತೋಳುಗಳಲ್ಲಿ ಉದ್ದವಾದ ಲಾಮಂಚದ ಬೇರನ್ನು ಬಿಗಿದುಕೊಂಡಿರುವ ನೀನು, ಕಡಲೊಳಗಣ ಮೀನುಗಳನ್ನು ಹಿಡಿಯಬೇಕೆಂದು, ತೋಳಿಗೆ ಬಲೆಯನ್ನು ಕಟ್ಟಿಕೊಂಡು, ತಡಿ ಯಲ್ಲಿ ಓಡಾಡುವ ಅಂಬಿಗನಂತೆ ಕಾಣುತ್ತಿದ್ದೀಯೆ, ಎಂದು ಹೇಳಿ, ಅವನಿಗೆ ಸಂತ ಸವುಂಟುಮಾಡಿದರು. ಈ ಪರಿಯಾಗಿ ತನಗೆ ನಿತ್ಯವೂ ಪುಷ್ಪಕೈಂಕರ್ಯವನ್ನು ಮಾಡುತ್ತಿರುವ ಅನಂತಾರ್ಯರ ಸೇವೆಯಿಂದ, ಸರ್ವಗಂಧನೆಂಬ ಉಪನಿಷತ್ತಿನ ನುಡಿಯನ್ನು ಸಾರ್ಥಕಪಡಿಸಿಕೊಂಡು, ಆನಂದನಿಲಯವೆಂಬ ವಿಮಾನದಲ್ಲಿ ಬಿಜ ಯಮಾಡಿರುತ್ತ, ತನ್ನ ಅರ್ಚಾವತಾರದ ಮೇರೆಯನ್ನೂ ಮೀರಿ, ಅನಂತಾರ್ಯ ರೊಡನೆ ಮಾತನಾಡುತ್ತ, ಶ್ರೀನಿವಾಸನು ಅವರಿಗೆ ಸಂತಸವುಂಟುಮಾಡುತ್ತ, ಬಹು ಮರ್ಯಾದೆಯಿಂದ ತನಗೆ ಹಲವು ಬಗೆಯ ಊಳಿಗಗಳನ್ನು ಮಾಡುತ್ತಿರುವ ಅನಂತಾರ್ಯರ ಭಕ್ತ್ಯತಿಶಯದಿಂದ ತಾನೂ ಸಂತುಷ್ಟನಾಗಿ ಇದ್ದನು.

ಎಂಬಲ್ಲಿಗೆ ಶ್ರೀವೇಂಕಟೇಶಭಕ್ತಾಗ್ರೇಸರಶ್ರೀಮದನಂತಾರ್ಯ
ಚರಿತ್ರೆಯ ನಾಲ್ಕನೆಯ ಪ್ರಕರಣಂ.

---

ಸಿಡಿಲವೊಲಬ್ಬರಿಸುವ ವೃಷಭಂಗಳ ।
ಮಡುಹಿ ನೀಳೆಯನು ಮೆಚ್ಚಿಸಿದ ॥
ಕಡುಗಲಿಯೆನುತೆ ರಂಗೇಶಯೆನ್ನಣುಗಿ ಕೂ ।
ಗಿಡುವಳರಿಯೆನವಳಳಲ ॥ )

ಎಂದಿರುವ ತಿರುವಾಯ್ಮೊಳಿ ಶತಕ 7, ದಶಕ 2, ಗಾಥೆ 9ನ್ನು ಧ್ಯಾನಿಸುತ್ತಿದ್ದರು.

ಇಲ್ಲಿ ಕನ್ಯೆಯೆಂದರೆ ಮನಸ್ಸು, ಎನ್ನ ಎಂದರೆ ತಾವು ತಾಯಂತೆ; ರಂಗೇಶ ಎಂಬಲ್ಲಿ ವೇಂಕಟೇಶನೆಂದು ಅನುಸಂಧಿಸಿ, ಎನ್ನಯ ಸಿರಿಯಣುಗಿ, ಎಂಬುದರಿಂದ ತಮಗೆ ಪುತ್ರೀಭಾವದಿಂದಿದ್ದ ಶ್ರೀಪದ್ಮಾವತೀದೇವಿಯನ್ನು ಅನುಸಂಧಿಸುತ್ತಿದ್ದು, ತರು ವಾಯ ತಮಗೆ ಹುಟ್ಟಿದ ಮಗಳಿಗೆ, ಮೇಲೆ ಹೇಳಿರುವ ವೃತ್ತಾಂತದ ನೆನಪಿಗಾಗಿ ಮಳ್ಳಿಪುತ್ರಿ " ಎರ್ ತಿರುಮಹಳ್ " ಎಂದು ಹೆಸರಿಟ್ಟರು.

ಶ್ರೀ. ವೇಂ. ಇ. ಮಾ. ಸ್ತಬಕ 6, ಪು. 145.

# ಅಯ್ದನೆಯ ಪ್ರಕರಣಂ.

ಒಂದಾನೊಂದು ಕಾಲದಲ್ಲಿ, ಶ್ರೀಮದನಂತಾರ್ಯರು, ಶಿಷ್ಯರನ್ನು ಕಾಪಿಡಲೋಸುಗ, ಭಗವಂತನ ಅಪ್ಪಣೆಯನ್ನು ಪಡೆದು, ಕೇರಳದೇಶಕ್ಕೆ ಪಯಣಹೊರಟರು. ಅವರ ಸಂಗಡ, ಭಾಗವತೋತ್ತಮರಾದ, ವರದಾಚಾರ್ಯರೇ ಮೊದಲಾದ ಬಹುಜನ ಶ್ರೀವೈಷ್ಣವರೂ, ಬುತ್ತಿಗಳನ್ನು ಕಟ್ಟಿಕೊಂಡು ಪ್ರಯಾಣವನ್ನು ಮಾಡಿದರು. ಹೊತ್ತು ನೆತ್ತಿಗೆ ಬಂದಿತು. ಎಲ್ಲರೂ ಕರ್ಪೂರಕುಲ್ಯೆಯೆಂಬ ಕಾಲಿವೆಯ ಬಳಿಗೆ ಬಂದರು. ಅದರ ಇರ್ಕಡೆಗಳಲ್ಲಿಯೂ ಮರಗಳು ಸೊಂಪಾಗಿ ಬೆಳೆದು, ನೆಲದ ಮೇಲೆ ತಣ್ಣನೆ ನೆರಳನ್ನು ಬೀರುತ್ತಿದ್ದವು. ಆ ನೆರಳಲ್ಲಿ ಕುಳಿತು ದಣಿವಾರಿಸಿಕೊಂಡು, ಅವರೆಲ್ಲರೂ ಆ ಕಾಲಿವೆಯ ತಣ್ಣನೆಯ ನೀರಲ್ಲಿ ಮಿಂದು, ದೇವಪೂಜಾದಿಗಳನ್ನು ಮಾಡಿ, ಊಟ ಮಾಡಬೇಕೆಂದು, ಬುತ್ತಿಯನ್ನು ಕಟ್ಟಿ ತಂದಿದ್ದ ಅಡಕೆಯ ಪಟ್ಟೆಯನ್ನು ಬಿಚ್ಚಿದರು. ಒಳಗೆಲ್ಲ ಇರುವೆಗಳು ತುಂಬಿದ್ದುವು. ಅದನ್ನು ಕಂಡು, ಈ ಜೀವಿಗಳು, ಬಹು ಕಾಲದಿಂದ ಗಳಿಸಿದ ಪುಣ್ಯದಿಂದ, ವೈಕುಂಠವನ್ನೂ ಬಿಟ್ಟು, ಇಲ್ಲಿ ನೆಲಸಿರುವ ಶ್ರೀ ವೇಂಕಟನಾಥನ ಬೆಟ್ಟದಲ್ಲಿ ಹುಟ್ಟಿರುತ್ತವೆ. ಶ್ರೀಕುಲಶೇಖರನೇ* ಮೊದಲಾದ ದಿವ್ಯ ಸೂರಿಗಳು ಕೂಡ, ಈ ಬೆಟ್ಟದ ಮೇಲೆ, ಯಾವುದಾದರೂ ಒಂದು ರೂಪದಿಂದ ತಮ್ಮನ್ನು ಹುಟ್ಟಿಸಬೇಕೆಂದು, ದೇವರನ್ನು ಬೇಡಿಕೊಂಡಿರುತ್ತಾರೆ. ಹೀಗಿರುವಲ್ಲಿ, ಇವುಗಳನ್ನು ಇಲ್ಲಿ ಬಿಡುವುದು ಸರಿಯಲ್ಲ, ಎಂದು ಹೇಳಿ, ಅನಂತಾರ್ಯರು, ಮರಳಿ ಬೆಟ್ಟಕ್ಕೆ ಹೋಗಿ, ಅವುಗಳನ್ನು ಗುಡಿಯ ಹತ್ತಿರ ಬಿಟ್ಟುಬಿಟ್ಟರು. ಈ ಪರಿಯ ದೃಢಾಧ್ಯವಸಾಯವನ್ನು ಕಂಡು, ಭಗವಂತನು ಸುಪ್ರೀತನಾಗಿ, ಅನಂತಾರ್ಯರನ್ನು ಬಹುವಾಗಿ ಅಭಿನಂದಿಸಿದನು.

ಮರುದಿವಸ, ಅವರು, ಮೇಲೆ ಹೇಳಿರುವವರನ್ನೆಲ್ಲ ಕೂಡಿಕೊಂಡು, ಕೇರಳ ದೇಶಕ್ಕೆ ಹೊರಟು, ಪಡುವನಾಡ ಶ್ರೀಯಾದವಾಚಲಕ್ಕೆ ಬಂದು, ಶ್ರೀನಾರಾಯಣ ಸ್ವಾಮಿಯ ದರ್ಶನವನ್ನುಮಾಡಿ, ಆ ಸ್ವಾಮಿಗೆ ಪ್ರಣಾಮವನ್ನು ಮಾಡಿದರು. ಅನಂತಾರ್ಯರು ಯದುಗಿರಿಯಲ್ಲಿ ಇದ್ದರೂ, ಶ್ರೀವೇಂಕಟನಾಥನ ಮಂಗಳವಿಗ್ರಹವನ್ನೇ ಯಾವಾಗಲೂ ಮನದಲ್ಲಿ ನೆನೆಯುತ್ತಿದ್ದುದರಿಂದ, ಅವರನ್ನು ಅನುಗ್ರಹಿಸಬೇಕೆಂದು

---

*ಇವರು ಕೇರಳದೇಶದ ಅರಸರು, ಪರಮ ವೈಷ್ಣವರು, ಶ್ರೀವೈಷ್ಣವರ ಹನ್ನೆರಡು ಆಳ್ವಾರುಗಳಲ್ಲಿ ಇವರೂ ಒಬ್ಬರು. ಇವರು 'ಮುಕುಂದಮಾಲಾ' ಎಂದು ಪ್ರಸಿದ್ಧವಾದ ಸಂಸ್ಕೃತಸ್ತೋತ್ರಗ್ರಂಥವನ್ನೂ, "ಪೆರುಮಾಳ್‌ತಿರುಮೊಳಿ" ಎಂಬ ದ್ರಾವಿಡದಿವ್ಯಪ್ರಬಂಧವನ್ನೂ ರಚಿಸಿದ್ದಾರೆ.

ಬಗೆದು, ಶ್ರೀಮನ್ನಾರಾಯಣನು ಅವರಿಗೆ ಶ್ರೀನಿವಾಸನ ರೂಪಿನಿಂದ ಕಾಣಿಸಿದನು. ಆಗ, ಅವರು ದೇವರಿಗೆ ವಂದಿಸಿ, ಎಲೈ ಸ್ವಾಮಿಯೇ, ನನ್ನನ್ನು ಅನುಗ್ರಹಿಸುವುದ ಕ್ಕೋಸ್ಕರ, ನೀನು ನನಗಿಂತ ಮುಂಚೆ, ಇಲ್ಲಿಗೆ ಯಾವಾಗ ಬಿಜಯಮಾಡಿಸಿದೆ, ಎಂದು ಕೇಳಿದರು. ಅನಂತಾರ್ಯರ ಈ ಮಾತ ಕೇಳಿ, ಅವರ ಅನುಯಾಯಿಗಳೂ, ಆವೂರವರೂ ಅಚ್ಚರಿಯಿಂದ ದೇವರನ್ನು ದರ್ಶನಮಾಡಿದರು. ಶ್ರೀಮನ್ನಾರಾಯಣನು ಎಲ್ಲರಿಗೂ ಶ್ರೀನಿವಾಸನಾಗಿಯೇ ಕಾಣಿಸಿದನು.* ಅದನ್ನು ಕಂಡು, ಎಲ್ಲರೂ, ಇದೇನು ಆಶ್ಚರ್ಯ! ಯದುಗಿರಿನಿಲಯನಾದ ಶ್ರೀಮನ್ನಾರಾಯಣನೂ ವೇಂಕಟನಾಥನಾಗಿ ಕಾಣಿಸುತ್ತಿದ್ದಾನೆಯಲ್ಲ! ಇದೇನು ಅನಂತಾರ್ಯರ ಪುಣ್ಯವೋ? ಎಂದು ಅತ್ಯಂತವಿಸ್ಮಿತರಾದರು. ಅನಂತಾರ್ಯರಿಗೆ ಶ್ರೀವೇಂಕಟನಾಥನಾಗಿ ದರ್ಶನವನ್ನು ಕೊಟ್ಟ, ಶ್ರೀನಾರಾಯಣಸ್ವಾಮಿಯ ವಿಗ್ರಹದಲ್ಲಿ, ಈಗಲೂ, ಶ್ರೀವೇಂಕಟನಾಥನ ವಿಗ್ರಹದ ಕುರುಹುಗಳು ಕಾಣುತ್ತಲಿವೆ, ಎಂದು, ಹಳೆಯ ಕಾಲದ ಸಂಗತಿಗಳನ್ನು ಬಲ್ಲವರು ಹೇಳುತ್ತಾರೆ.

ಅಲ್ಲಿಯವರಿಂದ ಅಭಿನಂದಿತರಾಗಿ, ಶ್ರೀಮದನಂತಾರ್ಯರು, ಕೇರಳದೇಶಕ್ಕೆ ಬಿಜಯಮಾಡಿ, ಅಲ್ಲಿ ನೆಲಸಿದ್ದ ಶಿಷ್ಯವರ್ಗಕ್ಕೆ ತತ್ವೋಪದೇಶವನ್ನು ಮಾಡುತ್ತ, ಆ ಪ್ರಾಂತ್ಯದಲ್ಲಿಯೇ ಸ್ವಲ್ಪ ದಿವಸಗಳವರೆಗೆ ಇದ್ದರು.

ಶ್ರೀವೇಂಕಟನಾಥನ ಕೈಂಕರ್ಯವನ್ನು ಉಳಿದು, ಎಲ್ಲಿರುವುದಕ್ಕೂ ಅನಂತಾರ್ಯರ ಮನಸ್ಸು ಒಡಂಬಡಲಿಲ್ಲ. ಅವರು ಅಲ್ಲಿಂದ ವೇಂಕಟಾದ್ರಿಗೆ ಪ್ರಯಾಣಮಾಡಿದರು. ಬಹುದೂರದ ಹಾದಿ; ಅದನ್ನು ನಡೆದು, ಬೆಟ್ಟದ ಹತ್ತಿರಕ್ಕೆ ಬರಬೇಕಾದರೆ, ಹಲವು ದಿವಸಗಳಾದುವು. ಆಗ ಬೇಸಗೆಯ ಕಾಲ. ಬಿಸಿಲಿನ ಬೇಗೆಯನ್ನು ಸಹಿಸುವುದಕ್ಕಾಗುತ್ತಿರಲಿಲ್ಲ. ಅನಂತಾರ್ಯರ ಮತ್ತು ಅವರ ಸಂಗಡಿಗರ ಮೆಯ್ಗಳು, ಬಿಸಿಲ ಬೇಗೆಯಿಂದಲೂ, ಹಾದಿಯನ್ನು ನಡೆದಃದಣಿವಿಂದಲೂ, ಸೊರಗಿ ಹೋದುವು. ಎಲ್ಲರೂ, ಹೇಗೆಯೋ, ಕಾಲುಗಳನ್ನು ಎಳೆದು ಹಾಕುತ್ತ, ಎರಡು ಕಡೆಗಳಲ್ಲಿಯೂ ನೆರಳಿಂದ ಕೂಡಿ ತಣ್ಣನೆ ಗಾಳಿಯನ್ನು ಬೀರುತ್ತಿರುವ ಮರಗಳುಳ್ಳ, ಶೀತಲವಾಹಿನಿಯಾದ ಕರ್ಪೂರಕುಲ್ಯೆಯ ಬಳಿಗೆ ಬಂದು ಸೇರಿದರು.

---

*ಉತ್ಸವಗಳಿಲ್ಲದ ಸಾಮಾನ್ಯದಿನಗಳಲ್ಲಿ, ಪ್ರತಿ ಏಕಾದಶಿಯ ರಾತ್ರಿಯೂ, ಹಸ್ತನಕ್ಷತ್ರದ ಹಗಲೂ, ಶ್ರೀನಾರಾಯಣಸ್ವಾಮಿಗೆ ಪುಷ್ಪಾಂಗಿಯನ್ನೂ, ಮುಖಕ್ಕೆ ಪಚ್ಚೆಗಪ್ಪುರದ ಊರ್ಧ್ವಪುಂಡ್ರವನ್ನೂ ಸಮರ್ಪಿಸುವ ಪದ್ಧತಿಯಿದೆ. ಇದೇ, ಶ್ರೀನಾರಾಯಣಸ್ವಾಮಿಯು, ಶ್ರೀಮದನಂತಾರ್ಯರಿಗೆ ಶ್ರೀನಿವಾಸನಾಗಿ ದರ್ಶನಕೊಟ್ಟುದರ ಕುರುಹೆಂದು ಬಲ್ಲವರು ಹೇಳುತ್ತಾರೆ.

ತಣ್ಣಾನೆಯ ನೆರಳಲ್ಲಿ ಕುಳಿತು, ಎಲ್ಲರೂ ಕೊಂಚ ದಣಿವನ್ನು ಆರಿಸಿಕೊಂಡ ಮೇಲೆ, ಆ ಕುಲ್ಯೆಯ ಶೀತಲವಾದ ನೀರಲ್ಲಿ ಮಿಂದು, ಮಡಿಯುಟ್ಟು, ಊರ್ಧ್ವಪುಂಡ್ರಗಳನ್ನು ಧರಿಸಿಕೊಂಡರು. ಎಲ್ಲರಿಗೂ ಬಾಯಾರಿಕೆಯೂ, ಹಸಿವೂ, ತಲೆದೋರಿ, ಎಲ್ಲರೂ ತುಂಬ ಬಳಲಿ ಹೋಗಿದ್ದುದರಿಂದ ಅನಂತಾರ್ಯರು, ಸಂಗಡಿಗರನ್ನು ನೋಡಿ, ಎಲೈ ಆರ್ಯರಿರಾ, ನಾವು ಇಲ್ಲಿಯೇ ಇನ್ನೂ ಕೊಂಚ ಹೊತ್ತಿನ ವರೆಗೆ ಇದ್ದು, ದಣಿವಾರಿಸಿಕೊಂಡು ಮುಂದೆ ಹೋಗೋಣ, ಎಂದು ಹೇಳಿ, ಅಲ್ಲಿಯೇ ನಿಂತರು.

ಇತ್ತ ಶ್ರೀವೇಂಕಟನಾಥನು, ಭಕ್ತಾಗ್ರೇಸರರಾದ ಅನಂತಾರ್ಯರ ಮತ್ತು ಅವರ ಸಂಗಡಿಗರ ಬಳಲಿಕೆಯನ್ನು ಕಂಡು ಸೈರಿಸಲಾರದೆ, ಮೊಸರನ್ನವನ್ನೂ, ಮಜ್ಜಿಗೆಯನ್ನೂ ತೆಗೆದುಕೊಂಡು, ವಟುರೂಪಿಯಾಗಿ, ಅವರಿದ್ದ ತಾವಿಗೆ ಬಂದು, ಸ್ವಾಮಿ ಅನಂತಾರ್ಯರೇ, ನೀವೂ ನಿಮ್ಮ ಅನುಯಾಯಿಗಳೂ ತುಂಬ ಬಳಲಿರುವುದನ್ನು ಕಂಡು, ಭಗವಂತನು ನಿಮಗಾಗಿ ಮೊಸರನ್ನವನ್ನೂ, ಮಜ್ಜಿಗೆಯನ್ನೂ ಕಳುಹಿಸಿದ್ದಾನೆ. ಇವನ್ನು ನೀವೆಲ್ಲರೂ ಇಷ್ಟಬಂದಂತೆ ಭೋಜನಮಾಡಬಹುದು, ಎಂದು ಹೇಳಿದನು. ಆ ಮಾತ ಕೇಳಿ, ಅನಂತಾರ್ಯರಿಗೂ ಅವರ ಜತೆಯವರಿಗೂ ಆಶ್ಚರ್ಯವಾಯಿತು. ಭಕ್ತರ ಆಯಾಸವನ್ನು ಕಂಡು ಕರುಣಾನಿಧಿಯಾದ ಶ್ರೀವೇಂಕಟನಾಥನು ಸುಮ್ಮನಿರುವನೇ ? ಎಂದು ಎಲ್ಲರೂ ಹೇಳಿಕೊಂಡರು ; ಅನಂತಾರ್ಯರು, ಆ ವಟುವನ್ನು ನೋಡಿ, ಎಲೋ, ವಟುವೇ, ನೀನೇ ನಮ್ಮೆಲ್ಲರಗೂ ಕೈತುತ್ತುಗಳನ್ನು ಹಾಕು, ಎಂದು ಎಲ್ಲರೂ ಕಾಲಿವೆಯ ಕರೆಯಲ್ಲಿ ಕುಳಿತುಕೊಂಡರು. ಆ ವಟುವು, ಎಲ್ಲರಿಗೂ ಮೊಸರನ್ನದ ತುತ್ತುಗಳನ್ನು ಕೊಟ್ಟು, ತಾನೂ ಒಂದು ತುತ್ತನ್ನು ತೆಗೆದುಕೊಂಡು, ಅವರು ಭೋಜನಮಾಡುತ್ತಿರುವಂತೆಯೇ, ಕಣ್ಮರೆಯಾಗಿ ಹೋದನು.

ಅದನ್ನು ಕಂಡು, ಎಲ್ಲರಿಗೂ ವಿಸ್ಮಯವಾಯಿತು ; ಭಗವಂತನೇ ವಟುವಾಗಿ ಬಂದಿದ್ದನೆಂದು ಭಾವಿಸುತ್ತ ಊಟವಾಗಿ ಬಳಲಿಕೆಯು ಪರಿಹಾರವಾದ ಕೂಡಲೆ, ಎಲ್ಲರೂ ಬೇಗ ಬೇಗನೆ ಬೆಟ್ಟವನ್ನು ಏರಿ, ದೇವಾಲಯಕ್ಕೆ ಹೋಗಿ ಶ್ರೀನಿವಾಸನನ್ನು ದರ್ಶನಮಾಡಿದರು ; ಅವನು ಆಶ್ರಿತರಿಗೆ ಆನಂದವನ್ನುಂಟುಮಾಡಬೇಕೆಂದು, ಕಯ್ಯಲ್ಲಿ ಮೊಸರನ್ನದ ತುತ್ತನ್ನು ಇಟ್ಟುಕೊಂಡಿದ್ದುದನ್ನು ಕಂಡು ಎಲ್ಲರೂ ಸಂತುಷ್ಟರಾದರು.

ಒಂದಾನೊಂದು ಕಾಲದಲ್ಲಿ ಅನಂತಾರ್ಯರು, ಶ್ರೀನಿವಾಸನ ದೇವಾಲಯಕ್ಕೆ, ತಮ್ಮ ಅಡಿದಾವರೆಗಳನ್ನು ಆಶ್ರಯಿಸಿದ, ಹಣವಂತರಾದ ಕೆಲವು ಜನ ಶಿಷ್ಯರಿಂದ ಗೋಪುರ ಮಂಟಪ ಪ್ರಾಕಾರಗಳನ್ನು ಕಟ್ಟಿಸತೊಡಗಿದರು. ಪ್ರಾಕಾರದ ಗೋಡೆಗೆ, ತಕ್ಕ ಜಾಗವನ್ನು ಏರ್ಪಡಿಸುತ್ತಿದ್ದಾಗ, ಅದಕ್ಕೆ ಅಡ್ಡಲಾಗಿ ಒಂದು ಸಂಪಗೆಯ ಮರವು ಇದ್ದಿತು ; ಅದನ್ನು ಕಡಿದುಹಾಕಬೇಕೆಂದು, ಕೆಲಸಗಾರರು ಹೇಳಿದರು ; ಬೆಟ್ಟದ ಮೇಲೆ ಇರುವ ಚೇತನಾಚೇತನವಸ್ತುಗಳೆಲ್ಲವೂ, ನಿತ್ಯಸೂರಿಗಳ ಅವತಾರ

ವೆಂದು ಅನಂತಾರ್ಯರು ತಿಳಿದುಕೊಂಡಿದ್ದುದರಿಂದ, ಮರವನ್ನು ಕಡಿಯುವುದು ಅವರಿಗೆ ಒಪ್ಪಿಗೆಯಾಗಲಿಲ್ಲ. ಇದಕ್ಕಾಗಿ ಪ್ರಾಕಾರದ ಗೋಡೆಯು ಓರೆಕೋರೆಯಾಗುವುದೂ ಅವರ ಮನಸ್ಸಿಗೆ ಸರಿದೋರಲಿಲ್ಲ ; ಆದುದರಿಂದ, ಅವರು ವೃಕ್ಷರೂಪಿಯಾದ ನಿತ್ಯಸೂರಿಯನ್ನು ಕುರಿತು, ಎಲೈ ಸ್ವಾಮಿಯೇ, ಪ್ರಾಕಾರದ ಗೋಡೆಗೆ ಅಡ್ಡವಾಗಿ ನಿಂದಿರುವ ನೀನು, ದಯೆಯಿಟ್ಟು ಕೊಂಚ ಹಿಂಜರಿದು ನಿಂದು, ಗೋಡೆಯನ್ನು ನೇರವಾಗಿ ಕಟ್ಟುವುದಕ್ಕೆ ಎಡೆಗುಡಬೇಕು, ಎಂದು ಬೇಡಿಕೊಂಡು, ಭಗವಂತನನ್ನು ಧ್ಯಾನಿಸುತ್ತ, ಆ ರಾತ್ರಿ ಮಲಗಿಕೊಂಡರು.

ಬೆಳಗಾಯಿತು. ಅನಂತಾರ್ಯರು ಎದ್ದು, ಪ್ರಾತರಾಹ್ನಿಕಗಳನ್ನು ಮುಗಿಸಿಕೊಂಡು, ಮರವಿದ್ದೆಡೆಗೆ ಬಂದರು. ಅಡ್ಡವಾಗಿದ್ದ ಮರವು, ಕೊಂಚ ಹಿಂಜರಿದು, ಗೋಡೆಗೆ ಹಾದಿಯನ್ನು ಬಿಟ್ಟು ನಿಂತಿದ್ದಿತು. ಆ ಚೋದ್ಯವನ್ನು ಕಂಡು, ಕೆಲಸಗಾರರೆಲ್ಲರೂ ಬೆರಗಾಗಿಹೋದರು. ಓರೆಕೋರೆಯಿಲ್ಲದಂತೆ, ಗೋಡೆಯನ್ನು ಕಟ್ಟಲಾಯಿತು. ಇದರಿಂದ, ಆ ಪ್ರಾಕಾರಕ್ಕೆ, ಈಗಲೂ ಸಂಪಗೆಯ ಮರದ ಪ್ರಾಕಾರವೆಂದು ಹೆಸರಾಗಿದೆ.

ಒಂದು ದಿನ, ಅನಂತಾರ್ಯರು, ಬೆಳಗಿನ ಜಾವದಲ್ಲಿ, ಸ್ನಾನಮಾಡಬೇಕೆಂದು ಶಿಷ್ಯರೊಡಗೂಡಿ ಸ್ವಾಮಿಪುಷ್ಕರಿಣಿಗೆ ಹೊರಟರು. ಆ ಕೊಳದ ದಡದಲ್ಲಿ ದೊಡ್ಡದಾದ ಅರಳಿಯ ಮರವೊಂದು ಇದ್ದಿತು. ಗಾಳಿಯ ಹೊಡೆತದಿಂದ ಆ ಮರದ ಎಲೆಗಳು ಅಲ್ಲಾಡುವಾಗ, ಅವುಗಳ ಸಂದುಗಳಿಂದ ಬೆಳದಿಂಗಳು ಮುಸುಕುಮುಸುಕಾಗಿ ನೆಲದ ಮೇಲೆ ಬೀಳುತ್ತಿದ್ದಿತು. ದೂರದಿಂದ ನೋಡಿದರೆ ಮರದ ಬುಡದಲ್ಲಿ ಏನಿದ್ದರೂ ಕಾಣುತ್ತಿರಲಿಲ್ಲ. ಅಲ್ಲಿ ಹೆಬ್ಬುಲಿಯೊಂದು ಮಲಗಿದ್ದಿತು. ಅನಂತಾರ್ಯರು ಆತುರದಿಂದ ತೋಳುಗಳನ್ನು ಬೀಸಿಕೊಂಡು ನಡೆಯುತ್ತಿರಲು, ಅವರು ಹೊದೆದಿದ್ದ ವಸ್ತ್ರದ ಸೆರಗು, ಆ ಹುಲಿಯ ಎರಡು ಕಿವಿಗಳಿಗೂ ಚೆನ್ನಾಗಿ ತೊಡರಿಕೊಂಡಿತು. ಬಟ್ಟೆಯನ್ನು ಬಿಡಿಸಿಕೊಳ್ಳಬೇಕೆಂದು, ಹತ್ತಿರ ಬಂದು ನೋಡಿದರು. ಹುಲಿಯಿದ್ದುದನ್ನು ಕಂಡು ಹೆದರಿ, ಅವರು ಕೊಂಚ ದೂರ ಹೋಗಿ, ಬಟ್ಟೆಯನ್ನು ಬಲವಾಗಿ ಸೆಳೆದರೂ ಆ ಬಟ್ಟೆಯು ಬರಲಿಲ್ಲ. ಈ ಸೆಳೆದಾಟದಲ್ಲಿ ಹುಲಿಗೆ ಎಚ್ಚರವಾಯಿತು. ಆದರೂ, ಅದು, ಅನಂತಾರ್ಯರ ಮಹಿಮೆಯಿಂದ, ಅಲುಗಾಡದೆ ಸುಮ್ಮನೆ ಬಿದ್ದಿದ್ದಿತು. ಇದನ್ನು ಕಂಡು ಶಿಷ್ಯರಿಗೆಲ್ಲ ಆಶ್ಚರ್ಯವಾಯಿತು. ಅವರು, ಅನಂತಾರ್ಯರನ್ನು ನೋಡಿ, ಎಲೈ ಸ್ವಾಮಿಯೇ, ಮುಮುಕ್ಷುಗಳಿಗೆ ಕಲ್ಪವೃಕ್ಷವಾಗಿರುವ ನಿಮ್ಮ ಬಟ್ಟೆಯ ಅಂಚನ್ನು, ಈ ಹುಲಿಯು ಕಿವಿಗಳಲ್ಲಿ ತೊಡರಿಸಿಕೊಂಡು, ಎಷ್ಟು ಬಲವಾಗಿ ಜಗ್ಗಿದರೂ ಬಿಡದೆ ಇದೆ; ಎಷ್ಟು ಕಷ್ಟಪಟ್ಟರೂ ಬಿಡಿಸಿಕೊಳ್ಳುವುದಕ್ಕಾಗದ ಅನಾದಿಮಾಯಾಪಾಶದ ಕಟ್ಟನ್ನು ಕಳೆಚಿಕೊಳ್ಳಬೇಕೆಂದು, ಈ

ಪ್ರಾಣಿಯು ಸಂಸಾರಸಾಗರವನ್ನು ದಾಟಿಸ ಬಲ್ಲ ನಿಮ್ಮ ಸಿರಿಯಡಿಗಳನ್ನು ಬಿಡದೆ ಹಿಡಿದುಕೊಂಡಿದೆ. ನಿಮ್ಮ ವಸ್ತ್ರಾಂಚಲವನ್ನು ಹಿಡಿದು, ನಿಮ್ಮ ಸಂಬಂಧವನ್ನು ಪಡೆದಿರುವ ಈ ಪ್ರಾಣಿಯೇ ಸುಕೃತಿಯು, ಇದು ಮತ್ತೆ ಭವಬಂಧನದಲ್ಲಿ ಸಿಲುಕುವುದು ತಕ್ಕುದಲ್ಲ. ಆದುದರಿಂದ ತಾವು ದಯೆಯಿಟ್ಟು, ಇದನ್ನು ಅನುಗ್ರಹಿಸಬೇಕು, ಎಂದು ಬಿನ್ನಯಿಸಿಕೊಂಡರು.

ಶಿಷ್ಯರ ಅಭಿಲಾಷೆಯನ್ನು ಪೂರಯಿಸಬೇಕೆಂದು ಬಗೆದು, ಅನಂತಾರ್ಯರು ಅವರನ್ನು ನೋಡಿ, ಎಲೆ ಅಯ್ಯಗಳಿರಾ, ನಿಮ್ಮನಿಬರ ಕೃಪೆಗೆ ಪಾತ್ರವಾಗಿರುವ ಈ ಹುಲಿಯು, ನಿಮ್ಮ ಇಷ್ಟದಂತೆ ಬೇಗನೆ ಮುಕ್ತಿಯನ್ನು ಪಡೆಯುತ್ತದೆ, ಎಂದು ಹೇಳಿ, ಅದರ ಕಿವಿಗಳಿಗೆ ತೊಡರಿಕೊಂಡಿದ್ದ ವಸ್ತ್ರದ ಸೆರಗನ್ನು ಮೆಲ್ಲನೆ ಬಿಡಿಸಿಕೊಂಡು, ಸ್ನಾನಮಾಡುವುದಕ್ಕೆ ಹೋದರು. ಆಮೇಲೆ, ಅವರು ಸ್ನಾನಮಾಡಿ, ಪ್ರಾತರಾಹ್ನಿಕಗಳನ್ನು ಮುಗಿಸಿಕೊಂಡು, ಶಿಷ್ಯರೊಡನೆ ಹಿಂದಿರುಗಿ ಬರುತ್ತಿದ್ದಾಗ, ಬೆಳಗು ಜಾವದಲ್ಲಿ ಜೀವದಿಂದಿದ್ದ ಹುಲಿಯು ಹಾದಿಯಲ್ಲಿ ಸತ್ತು ಬಿದ್ದಿದ್ದುದನ್ನು ಕಂಡು, ಎಲ್ಲರಿಗೂ ಆಶ್ಚರ್ಯವಾಯಿತು. ಅನಂತಾರ್ಯರು ಶಿಷ್ಯಸಮೇತರಾಗಿ ಆ ಹುಲಿಗೆ ಚರಮಕೈಂಕರ್ಯವನ್ನು ಮಾಡಿದರು.

ತರುವಾಯ ಅವರು ದೇವಾಲಯಕ್ಕೆ ಹೋದರು. ಅನಂತಾರ್ಯರ ಕೃಪೆಯಿಂದ ಬಂಧಮುಕ್ತವಾಗಿ, ತನ್ನ ಅಡಿದಾವರೆಗಳಲ್ಲಿ ಕೆಡೆದಿರುವ ಚೇತನನ ಹಿಂದಣ ರೂಪನ್ನು ಎಲ್ಲರಿಗೂ ತಿಳುಹಬೇಕೆಂದು, ಶ್ರೀವೇಂಕಟನಾಥನು ಅವನನ್ನು ಹುಲಿಯಂತೆಯೇ ತೋರಿ, ಅನಂತಾರ್ಯರನ್ನು ಕುರಿತು, ಅನಂತಾರ್ಯರೇ, ನೀವು ನನ್ನ ಬೆಟ್ಟದಲ್ಲಿ ಇದ್ದುಕೊಂಡು, ದೇವಮಾನವರಿಗೂ ದೊರೆಯದಿರುವ ಮುಕ್ತಿಯನ್ನು, ಹುಲಿ ಮುಂತಾದ ಪ್ರಾಣಿಗಳಿಗೆಲ್ಲ ಕೊಡುವಿರಾದರೆ, ನಾನು ಇಲ್ಲಿ ಏತಕ್ಕೆ ಇರಬೇಕು ? ಬೇರೆ ಎಲ್ಲಿಗಾದರೂ ಹೊರಟು ಹೋಗುತ್ತೇನೆ ; ನೀವೇ ಇಲ್ಲಿ ಇರಿ, ಎಂದು ಅಸಮಾಧಾನಪಟ್ಟವನಂತೆ ಒಕ್ಕಣಿಸಿದನು. ಅದಕ್ಕೆ ಅನಂತಾರ್ಯರು, ಎಲೈ ಪದ್ಮಾವತೀಪ್ರಿಯನಾದ ಸ್ವಾಮಿಯೇ, ಈ ಗಿರಿಯು ಮತ್ತೆ ನಿನ್ನದಾದ ಬಗೆ ಹೇಗೆ ? ನೀನೂ, ನಾನೂ, ಎಲ್ಲಿಂದಲೋ ಬಂದು, ಇಲ್ಲಿ ನೆಲಸಿರುತ್ತೇವೆ. ನೀನು ಇಲ್ಲಿಗೆ, ನನಗಿಂತ ಮುಂಚೆ ಬಂದಿದ್ದೀಯೆ, ನಿಜ. ಅದರಿಂದ ಈ ಬೆಟ್ಟವು ನಿನ್ನದಾಗಿ ಹೋಯಿತೇನು ? ಅದಿರಲಿ. ಹುಲಿ ಮುಂತಾದ ಪ್ರಾಣಿಗಳಿಗೆಲ್ಲ ನಾನು ಮುಕ್ತಿಯನ್ನು ಕೊಡುತ್ತಿರುವುದಾಗಿ ಹೇಳಿದೆಯಲ್ಲವೇ ? ಅದು ಯಾರ ತಪ್ಪು? ನನ್ನ ಸಂಬಂಧಿಸಂಬಂಧಿ ಸಂಬಂಧಿಗಳಿಗೂ ಮುಕ್ತಿಯನ್ನು ಕರುಣಿಸಿದ ನಿನ್ನ ತಪ್ಪೇ ತಾನೇ, ಎಂದು ಹೇಳಿ, ಭಗವಂತನ ಮುಖದಲ್ಲಿ ಮಂದಹಾಸವನ್ನುಂಟುಮಾಡಿದರು.

ಅನಂತಾರ್ಯರಿಗೆ ಒಂದು ಸಲ ಜ್ವರವು ಬಂದಿದ್ದಿತು. ಅವರ ದೇಹಸ್ಥಿತಿಯು ಹೇಗಿದೆಯೆಂದು ತಿಳಿದು, ಬೇಕಾದರೆ ಮದ್ದನ್ನು ಕೊಟ್ಟು ಗುಣಪಡಿಸುವಂತೆ ಶ್ರೀನಿ

ವಾಸನು ಅರ್ಚಕಮುಖೇನ ಏಕಾಂಗಿಗಳಿಗೆ ಅಪ್ಪಣೆಮಾಡಿದನು. ಅವರು, ಅನಂತಾರ್ಯರ ಬಳಿಗೆ ಬಂದು ನಮಸ್ಕರಿಸಿ, ಎಲೈ ಸ್ವಾಮಿಯೇ, ಅನಂತಾರ್ಯರೇ, ನಿಮ್ಮ ದೇಹಸ್ಥಿತಿಯು ಹೇಗಿದೆ? ವೈದ್ಯಸಹಾಯವು ಬೇಕಾಗಿದೆಯೇ? ಅಪ್ಪಣೆಯಾದರೆ, ಈಗಳೇ ವೈದ್ಯರನ್ನು ಕರೆತರುತ್ತೇವೆ. ನಿಮ್ಮ ದೇಹಾರೋಗ್ಯವು ಹೇಗಿದೆಯೆಂಬುದನ್ನು ತಿಳಿದು, ಅವಶ್ಯವಾದರೆ ವೈದ್ಯರಿಂದ ನಿಮಗೆ ಔಷಧಿಯನ್ನು ಕೊಡಿಸಬೇಕೆಂದು, ನಮಗೆ ಭಗವಂತನ ಅಪ್ಪಣೆಯಾಯಿತು. ಆದುದರಿಂದ ನಾವು ತಮ್ಮ ಸನ್ನಿಧಿಗೆ ಬಂದಿದ್ದೇವೆ. ನಾವು ಏನ ಮಾಡಬೇಕು, ಎಂಬುದಕ್ಕೆ ನಮಗೆ ಬುದ್ಧಿಗಲಿಸಬೇಕು, ಎಂದು ಬಿನ್ನಯಿಸಿಕೊಂಡರು. ಅವರ ಮಾತ ಕೇಳಿ, ಅನಂತಾರ್ಯರು, ಎಲೈ ಏಕಾಂಗಿಗಳಿರಾ, ಶ್ರೀವೇಂಕಟನಾಥನು ತಾನೇ ಸಂಧ್ಯಾವಂದನೆಯನ್ನು ಮಾಡುತ್ತಾನೆಯೋ? ಮತ್ತೆ ಯಾರ ಕಯ್ಯಿಂದಲಾದರೂ ಮಾಡಿಸುತ್ತಾನೆಯೋ? ಎಷ್ಟು ಹಣಗಾರನಾಗಿದ್ದರೂ, ಮನುಷ್ಯನು, ತಾನೇ ಸಂಧ್ಯಾವಂದನೆಯನ್ನು ಮಾಡುವನೇ ಹೊರತು, ಮತ್ತೊಬ್ಬರಿಂದ ಮಾಡಿಸುವುದನ್ನು ಕಂಡೂ ಇಲ್ಲ, ಹಾಗೆ ಮಾಡಿಸುವುದನ್ನು ಕೇಳಿಯೂ ಇಲ್ಲ. ಪುರುಷೋತ್ತಮನೂ, ಭಗವಂತನೂ ಆಗಿರುವ ಶ್ರೀನಿವಾಸನು ಹೇಗೆ ಬೇಕಾದರೂ ಮಾಡಬಹುದು. ಅವನನ್ನು ಕೇಳುವರುಂಟೇ? ವೈದ್ಯರು ಬಂದು ಗುಣಪಡಿಸಬೇಕಾದ ಯಾವ ರೋಗವೂ ನನಗೆ ಬಂದಿಲ್ಲ. ನೀವು ಬಂದ ದಾರಿಯನ್ನು ಹಿಡಿದುಹೋಗಿರಿ, ಎಂದು ಹೇಳಿ ಅವರನ್ನು ಕಳುಹಿಬಿಟ್ಟರು. ಅವರು ಹೋಗಿ ಭಗವಂತನ ಸನ್ನಿಧಿಯಲ್ಲಿ ಈ ಸುದ್ದಿಯನ್ನು ಅರಿಕೆ ಮಾಡಿಕೊಂಡರು.

ಅವರ ನುಡಿಯನ್ನು ಆಲಿಸಿ, ಆಶ್ರಿತವತ್ಸಲನೂ, ಕರುಣಾಳುವೂ ಆದ ಶ್ರೀವೇಂಕಟನಾಥನು, ತಟ್ಟನೆ ಎದ್ದು, ತಾನೇ ಅನಂತಾರ್ಯರ ಮನೆಗೆ ಹೋಗಿ, ಅನಂತಾರ್ಯರೇ, ನಿಮ್ಮ ಆರೋಗ್ಯವು ಹೇಗಿದೆ? ಎಂದು ಕೇಳಿದನು. ತನ್ನ ಬಳಿಗೆ ಭಗವಂತನು ಮೊದಲೇ ಬರಲಿಲ್ಲವಲ್ಲ ಎಂದು ಅನಂತಾರ್ಯರಿಗೆ ಮುನಿಸು ಬಂದಿದ್ದಿತು. ಅವರು ಆ ಮಾತಿಗೆ ಬದಲನ್ನು ಹೇಳಲಿಲ್ಲ. ಆಗ ಸ್ವಾಮಿಯು, ಅನಂತಾರ್ಯರೇ, ಏಕೆ ಮಾತಾಡದೆ ಇದ್ದೀರಿ? ತುಟಿಯನ್ನು ತೆರೆಯುವುದಕ್ಕೂ ಆಗದಂತಹ ಬೇನೆಯಾವುದು ನಿಮಗೆ ಬಂದಿದೆ? ನಾನು ಮಾಡಿದ ತಪ್ಪಿಗೋಸುಗ ಏನಾದರೂ ಮಾತನಾಡದೆ ಇದ್ದೀರೋ? ನನ್ನನ್ನೇ ಜೀವನವೆಂದಿರುವ ನಿಮ್ಮ ಆರೋಗ್ಯವನ್ನು ವಿಚಾರಿಸುವುದಕ್ಕೆ ನಾನೇ ಬಾರದೆ, ಏಕಾಂಗಿಗಳನ್ನು ಕಳುಹಿದುದು ತಪ್ಪಾಯಿತು. ಅದನ್ನು ಮರೆತುಬಿಡಿರಿ, ಎಂದು ಹೇಳಿ, ಪ್ರೇಮವು ಉಕ್ಕುತ್ತಿರಲು, ಅರೆಬಿರಿದ ಕೆಂದಾವರೆಯಂತಿರುವ ನಿಡಿದಾದ ಕಣ್ಣೊನೆಯಿಂದ ಅವರನ್ನು ನೋಡಿ, ಹರಿಚಂದನದ ತಳಿರನ್ನು ಹಳಿಯುತ್ತ ಅಮೃತವನ್ನು ಸೂಸುತ್ತಿರುವ ಕಯ್ಗಳಿಂದ ಅನಂತಾರ್ಯರ ಮೆಯ್ಯನ್ನೆಲ್ಲ ಚೆನ್ನಾಗಿ ಸವರಿದನು. ಅನಂತಾರ್ಯರ ರೋಗವು ಚೆನ್ನಾಗಿ ತೊಲಗಿ ಹೋಯಿತು, ಅವರ ಮೆಯ್ಯಲ್ಲಿ ಮೊದಲಿಗಿಂತಲೂ ಹೆಚ್ಚಾದ ಬಲವು ಮೂಡಿತು. ಆಗ ಅವರು ವೇಂಕಟ

ನಾಥನನ್ನು ನೋಡಿ, ಎಲೈ ಸ್ವಾಮಿಯೇ, ನೀನು ಇಲ್ಲಿಗೆ ಬಿಜಯಮಾಡಿ ಕೃಪೆಗೆಯ್ದುದರಿಂದಲ್ಲವೇ, ನನ್ನ ರೋಗವು ನಿಶ್ಶೇಷವಾಗಿ ತೊಲಗಿ, ನನಗೆ ಮೊದಲಿಗಿಂತಲೂ ಹೆಚ್ಚಾದ ಬಲವುಂಟಾಯಿತು? ಹೀಗೆ ನನ್ನ ಕುತ್ತವು ಮತ್ತೆ ತಲೆಯೆತ್ತದಂತೆ ಮುಹೂರ್ತದಲ್ಲಿ ಮಾಡಬೇಕಾದರೆ, ನಿನ್ನಿಂದಲೇ ಅಲ್ಲದೆ ಮತ್ತೆಯಾರಿಂದಲಾದರೂ ಆದೀತೇ? ನಿನ್ನನ್ನು ನಾನು ಅಪೇಕ್ಷಿಸುತ್ತಿದ್ದಾಗ, ನೀನು ಬಂದು, ಹುಣ್ಣಿಮೆಯ ಚಂದಿರನನ್ನು ಹಳಿಯುವ, ನಿನ್ನ ಮುಖಮಂಡಲವನ್ನು ತೋರದೆ ಇದ್ದೆಯಲ್ಲ, ಎಂಬ ಕೋಪದಿಂದ ನಾನು ನಿನ್ನ ಮಾತಿಗೆ ಬದಲನ್ನು ಹೇಳಲಿಲ್ಲ; ನನ್ನ ಈ ತಪ್ಪನ್ನು ಎಣಿಕೆಗೆ ತರಬೇಡ; ಎಷ್ಟೋ ಸಾರಿ ಹುಟ್ಟಿ ಹುಟ್ಟಿ, ಪಾಪಗಳನ್ನು ಕೂಡಿಹಾಕಿಕೊಳ್ಳುವ ಗುಣವುಳ್ಳ ನನಗೆ ಈ ಪಾಪವನ್ನು ಮಾಡುವುದೇನೂ ಹೊಸತಲ್ಲ. ಬಹುಕಾಲದಿಂದಲೂ ಸೇರಿಕೊಂಡು ಬಂದಿರುವ ಈ ಪಾಪರಾಶಿಯ ಫಲವನ್ನು ಎಷ್ಟು ಕೋಟಿ ಕಲ್ಪಗಳು ಉಂಡರೂ ಆ ರಾಶಿಯು ಸವೆಯುವಂತಿಲ್ಲ. ಇನ್ನೊಮ್ಮೆ ನಾನು ಪಾಪವನ್ನು ಮಾಡುವುದಕ್ಕೆ ಮೊದಲೇ, ನನ್ನ ಈ ಪಾಪರಾಶಿಯನ್ನೆಲ್ಲ ಕ್ಷಮಿಸಿ ಬಿಡುವ ನೀನು, ನನ್ನ ಈ ಅಪರಾಧವನ್ನು ಕ್ಷಮಿಸುವುದೇನೂ ಹೊಸತಲ್ಲ. ಆದುದರಿಂದ, ಎಲೈ ಸ್ವಾಮಿಯೇ, ಹೇಗೆ ನೋಡಿದರೂ, ನಾನು ನಿನ್ನಿಂದ ಕ್ಷಮಿಸಲ್ಪಡತಕ್ಕವನೇ ಸರಿ, ಎಂದು, ಭಗವಂತನ ಅಡಿದಾವರೆಗಳಲ್ಲಿ ಅಡೆಗೆಡೆದರು. ಹೀಗೆ, ಪಾದಕಮಲಗಳೆಡೆಯಲ್ಲಿ ಕೆಡೆದಿರುವ ಅನಂತಾರ್ಯರನ್ನು, ಭಗವಂತನು, ತನ್ನ ಸಿರಿಗೆಯ್ಗಳಿಂದ ಹಿಡಿದೆತ್ತಿ, ಅಭಿನಂದಿಸಿ, ಕೂಡಲೇ ಕಣ್ಮರೆಯಾಗಿ, ಆನಂದವಿಮಾನಕ್ಕೆ ಬಿಜಯಮಾಡಿಸಿದನು.

ಒಂದಾನೊಂದು ಸಮಯದಲ್ಲಿ, ವರದಾಚಾರ್ಯರೇ ಮುಂತಾದ ಕೆಲವರು ಶ್ರೀಮದಾಚಾರ್ಯರ ಅಪ್ಪಣೆಯ ಮೇರೆ ಅವರಿಂದ ಅನಂತಾರ್ಯರಿಗೆ ಒಂದು ಶ್ರೀಮುಖವನ್ನು ಪಡೆದು, ಶ್ರೀವೇಂಕಟನಾಥನನ್ನು ದರ್ಶನಮಾಡಬೇಕೆಂಬ ಬಯಕೆಯಿಂದ ಶ್ರೀರಂಗವನ್ನು ಬಿಟ್ಟು ಪಯಣಮಾಡಿ, ಬಹುದೂರದ ಹಾದಿಯನ್ನು ನಡೆದು, ಬೆಟ್ಟದ ಬಳಿಗೆ ಬಂದು ಸೇರಿದರು. ಹಾದಿಯನ್ನು ನಡೆದು, ದಣಿದಿದ್ದುದರಿಂದ, ಎಲ್ಲರಿಗೂ, ಹಸಿವೂ, ಬಾಯಾರಿಕೆಯೂ ತಲೆದೋರಿದುವು. ಅವರ ಆ ನಿಲಮೆಯನ್ನು ಕಂಡು, ಮಹಾಕರುಣಾಳುವಾದ ಭಗವಂತನು, ಶ್ರೀವೈಷ್ಣವವಟುವಾಗಿ, ಕೆಯ್ಯಲ್ಲಿ ಚಿತ್ರಾನ್ನದ ಪಾತ್ರವನ್ನು ತೆಗೆದುಕೊಂಡು ಅವರ ಇದಿರಿಗೆ ಬಂದು ನಿಂತು, ಎಲೈ ಸ್ವಾಮಿಗಳಿರಾ, ನೀವೆಲ್ಲರೂ ತುಂಬ ಹಸಿದಿದ್ದೀರಿ; ಈ ಪಾತ್ರದಲ್ಲಿರುವ ಚಿತ್ರಾನ್ನವನ್ನು ನೀವೆಲ್ಲರೂ ತೆಗೆದುಕೊಂಡು, ಸುಖವಾಗಿ ಭೋಜನಮಾಡಿರಿ, ಎಂದು ಹೇಳಿದನು. ಆ ವಟುವಿನಲ್ಲಿ ಶ್ರೀವೈಷ್ಣವಲಕ್ಷಣವಾವುದೂ ಕಾಣದಿರಲು, ಅವನು ತಂದ ಅನ್ನವನ್ನು ಊಟಮಾಡಬಹುದೇ, ಎಂದು ಶಂಕಿಸಿ, ನೋಡಿ, ಎಲೋ ವಟುವೇ ನೀನು ಯಾರು? ಯಾರ ಶಿಷ್ಯನು? ಈ ಚಿತ್ರಾನ್ನವು ಎಲ್ಲಿಯದು? ಎಂದು ಅವರು

ಆ ವಟುವನ್ನು ಕೇಳಿದರು. ಅದಕ್ಕೆ ಅವನು ಎಲೈ ಸ್ವಾಮಿಗಳಿರಾ, ನಾನು ಶ್ರೀವೈಷ್ಣವನು, ಶ್ರೀಮದನಂತಾರ್ಯರ ಶಿಷ್ಯನು, ಮಧುರಕವಿದಾಸನೆಂದು ನನ್ನ ಹೆಸರು; ನೀವೆಲ್ಲರೂ ದಾರಿನಡೆದು ತುಂಬ ಬಳಲಿದ್ದೀರಿ, ಎಂದು ದಾರಿಹೋಕನೊಬ್ಬನಿಂದ ತಿಳಿದು, ನಮ್ಮ ಆಚಾರ್ಯರು, ಭಗವನ್ನಿವೇದಿತವಾದ ಈ ಚಿತ್ರಾನ್ನವನ್ನು ನಿಮಗೋಸ್ಕರವಾಗಿಯೇ ಕಳುಹಿದ್ದಾರೆ; ನೀವು ಅನುಮಾನವನ್ನು ಪಡದೆ ಇದನ್ನು ತೆಗೆದುಕೊಂಡು ಸುಖವಾಗಿ ಭೋಜನಮಾಡಿರಿ, ಎಂದು ಹೇಳಿದನು. ಅವರು ಮತ್ತೆ ಆ ವಟುವನ್ನು ನೋಡಿ, ಎಲೋ ನಿನ್ನ ಆಚಾರ್ಯರ ಮಂತ್ರವನ್ನು ಹೇಳು, ಕೇಳೋಣ, ಎಂದರು. ಆಗ ಆ ವಟುವು ಕೂಡಲೇ,

ಅಖಿಲಾತ್ಮಗುಣಾವಾಸಮಜ್ಞಾನತಿಮಿರಾಪಹಂ ।
ಆಶ್ರಿತಾನಾಂ ಸುಶರಣಂ ವಂದೇ ಅನಂತಾರ್ಯದೇಶಿಕಂ ॥

(ಎಲ್ಲ ಆತ್ಮಗುಣಗಳಿಗೂ ನೆಲೆವನೆಯಾಗಿಯೂ, ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸುವರಾಗಿಯೂ, ಆಶ್ರಿತರನ್ನು ಚೆನ್ನಾಗಿ ಕಾಪಿಡುವರಾಗಿಯೂ ಇರುವ ಅನಂತಾರ್ಯರೆಂಬ ಆಚಾರ್ಯರಿಗೆ ನಮಸ್ಕಾರಮಾಡುತ್ತೇನೆ,) ಎಂಬ ಮಂತ್ರವನ್ನು ಕಲ್ಪಿಸಿ ಹೇಳಿಬಿಟ್ಟನು.

ಆ ಶ್ರೀವೈಷ್ಣವರು ಅಷ್ಟಕ್ಕೇ ಸುಮ್ಮನಾಗದೆ, ಮತ್ತೆ ವಟುವನ್ನು ಕುರಿತು, ಅಯ್ಯಾ, ಈಗ ನೀನು ಹೇಳಿದ ಮಂತ್ರದಲ್ಲಿ ಪರಮಾಚಾರ್ಯಸಂಬಂಧವೇ ಕಾಣುವುದಿಲ್ಲ, ಅದೇಕೆ? ಇದನ್ನು ನೀನೇ ಕಲ್ಪನೆಮಾಡಿ ಹೇಳಿಬಿಟ್ಟೆಯೋ, ಎಂದು ಕೇಳಿದರು. ಆಗಳಾ ವಟುವು, ಅವರನ್ನು ಕುರಿತು, ಎಲೈ ಸ್ವಾಮಿಗಳಿರಾ, ಲಾಲಿಸಬೇಕು, ನನ್ನ ಆಚಾರ್ಯರ ವಿಷಯವಾಗಿ ಎರಡು ಮಂತ್ರಗಳಿವೆ. ಮೊದಲನೆಯ ಮಂತ್ರವು, ಸದಾಚಾರ್ಯಲಕ್ಷಣಗಳನ್ನೂ, ಗುಣಗಳನ್ನೂ ನಿರೂಪಿಸುತ್ತದೆ; ಎರಡನೆಯದು ಆಚಾರ್ಯಸಂಬಂಧದ ಅತಿಶಯವನ್ನು ಹೇಳುತ್ತದೆ; ಈಗ ನೀವು ಮೊದಲನೆಯ ಮಂತ್ರವನ್ನು ಕೇಳಿಯಾಯಿತು; ಇನ್ನು ಎರಡನೆಯ ಮಂತ್ರವನ್ನು ಆಲಿಸಿರಿ, ಎಂದು,

ಶ್ರೀಮದ್ರಾಮಾನುಜಾಚಾರ್ಯಶ್ರೀಪಾದಾಂಭೋರುಹದ್ವಯಂ ।
ಸದುತ್ತಮಾಂಗಸಂಧಾರ್ಯಮನಂತಾರ್ಯಮಹಂ ಭಜೇ ॥

(ಶ್ರೀರಾಮಾನುಜಾಚಾರ್ಯರ ಸಿರಿಯಡಿದಾವರೆಗಳೆನಿಸಿ, ಸತ್ಪುರುಷರು ತಮ್ಮ ತಲೆಗಳಲ್ಲಿ ಚೆನ್ನಾಗಿ ಧರಿಸತಕ್ಕ ಅನಂತಾರ್ಯರನ್ನು ಭಜಿಸುತ್ತೇನೆ,) ಎಂದು ಹೇಳಿದನು.

ಅದನ್ನು ಕೇಳಿ ಅವರೆಲ್ಲಾ ಮುಕ್ತಸಂಶಯರಾಗಿ, ಅವನಿಂದ ಚಿತ್ರಾನ್ನವನ್ನು ತೆಗೆದುಕೊಂಡು ಭೋಜನಮಾಡತೊಡಗಿದ ಮೇಲೆ ಆ ವಟುವು ಅವರನ್ನು ಬೀಳುಕೊಂಡು ಹೊರಟು ಹೋದನು. ತರುವಾಯ, ಅವರೆಲ್ಲರೂ, ಭಗವತ್ಪ್ರಸಾದವನ್ನು

ತಮತಮಗೆ ಬೇಕಾದಷ್ಟನ್ನು ಭೋಜನಮಾಡಿ, ದಣಿವಾರಿಸಿಕೊಂಡು, ಮೆಲ್ಲಮೆಲ್ಲನೆ ಬೆಟ್ಟವನ್ನು ಏರಿ, ಶ್ರೀಮದನಂತಾರ್ಯರ ಬಳಿಗೆ ಹೋಗಿ ಅವರಿಗೆ ನಮಸ್ಕಾರಮಾಡಿದರು. ಅವರನ್ನು ಕುರಿತು, ಅನಂತಾರ್ಯರು, ಎಲೈ ಆರ್ಯರಿರಾ, ನೀವೆಲ್ಲರೂ ಕ್ಷೇಮವೇ? ನಿಮಗೆಲ್ಲ ಸುಖಪ್ರಯಾಣವಾಯಿತೇ? ಎಂದು ಬೆಸಗೊಂಡರು. ಆ ಮಾತಿಗೆ, ಅವರು, ಎಲೈ ಸ್ವಾಮಿಯೇ ಲಾಲಿಸಬೇಕು. ತಾವು ಶಿಷ್ಯನಾದ ಮಧುರಕವಿದಾಸನ ಮೂಲಕ ಕಳುಹಿದ ಭಗವತ್ಪ್ರಸಾದವನ್ನು ನಾವು ಉಂಡು ತೃಪ್ತರಾದೆವು, ಬಹುದೂರದ ದಾರಿಯನ್ನು ನಡೆದ ನಮ್ಮ ಬಳಲಿಕೆಯು ಅಡಗಿತು. ನಾವು ತಮ್ಮ ದಯೆಯಿಂದ ಇಲ್ಲಿಗೆ ಸುಖವಾಗಿ ಬಂದು ಸೇರಿದೆವು, ಎಂದು ಹೇಳಿದರು. ಆ ಮಾತ ಕೇಳಿ ಅನಂತಾರ್ಯರು ವಿಸ್ಮಿತರಾದರು. ಅವರನ್ನು ಕುರಿತು, ಏನೆಂದಿರಿ? ನನ್ನ ಶಿಷ್ಯನಾದ ಆ ಬ್ರಹ್ಮಚಾರಿಯಾರು ? ನಿಮಗೆ ಭಗವತ್ಪ್ರಸಾದವನ್ನು ಯಾರು ತಂದು ಕೊಟ್ಟರು ? ನನಗೆ ಇದೊಂದೂ ತಿಳಿಯದಲ್ಲಾ ; ದಾರಿ ನಡೆದು ಬಳಲಿ, ಹಸಿವಿಂದ ಬೆಂಡಾದ ನಿಮ್ಮ ದುರವಸ್ಥೆಯನ್ನು ಕಂಡು, ಕರುಣಾಶಾಲಿಯಾದ ಭಗವಂತನೇ ವಟುರೂಪಿಯಾಗಿ ಬಂದು, ಹೀಗೆ ಮಾಡಿರಬೇಕು. ಅವನು ಇನ್ನೇನೇನ ಮಾಡಿದನು? ಅದನ್ನೆಲ್ಲ ವಿಶದವಾಗಿ ತಿಳಿಸಿರಿ, ಎಂದು ಕೇಳಿದರು.

ಆಗಳಾ ಶ್ರೀವೈಷ್ಣವರು, ಅನಂತಾರ್ಯರನ್ನು ನೋಡಿ, ಎಲೈ ಸ್ವಾಮಿಯೇ ಚಿತ್ತಯಿಸಬೇಕು, ಶ್ರೀವೈಷ್ಣವನಲ್ಲದ ಯಾವನೋ ತಂದ ಭಗವನ್ನಿವೇದಿತವಾದ ಅನ್ನವನ್ನು ಸ್ವೀಕರಿಸುವುದಕ್ಕೆ ಮನವು ಒಡಂಬಡದೆ, ನಾವು ಆ ವಟುವನ್ನು ಕುರಿತು ನೀನು ಯಾರ ಶಿಷ್ಯನು? ನಿನ್ನ ಆಚಾರ್ಯರ ಮಂತ್ರವಾವುದು ? ಹೇಳು, ಎಂದೆವು. ಅದಕ್ಕೆ ಆ ವಟುವು, ಎಲೈ ಸ್ವಾಮಿಗಳಿರಾ, ನಾನು ಶ್ರೀಮದನಂತಾರ್ಯರ ಶಿಷ್ಯನು; ನನ್ನನ್ನು ಮಧುರಕವಿದಾಸನೆಂದು ಕರೆಯುತ್ತಾರೆ, ಎಂದು ನುಡಿದು, ತಮ್ಮ ವಿಷಯಕವಾದ ಎರಡು ಮಂತ್ರಗಳನ್ನು ಪಠಿಸಿದನು. ತರುವಾಯ, ಅವನು ತಂದಿದ್ದ ಚಿತ್ರಾನ್ನವನ್ನು ನಾವೆಲ್ಲರೂ ಭುಜಿಸಿದೆವು, ಎಂದು ಒಕ್ಕಣಿಸಿ, ಅವನು ಹೇಳಿದ್ದ ಎರಡು ಮಂತ್ರಗಳನ್ನೂ ಉಚ್ಚರಿಸಿದರು. ಅದನ್ನು ಅಲ್ಲಿದ್ದ ಆರ್ಯರೆಲ್ಲರೂ ಕೇಳಿ, ಶ್ರೀಮದನಂತಾರ್ಯರಲ್ಲಿ ಭಗವಂತನಿಗೆ ಇಷ್ಟೊಂದು ಅಭಿಮಾನವೇ! "ನಾನು ಅನಂತಾರ್ಯರ ಶಿಷ್ಯನು, ಮಧುರಕವಿದಾಸನು" ಎಂದು ಹೇಳಿಕೊಂಡು, ಎಪ್ಪತ್ತು ನಾಲ್ಕು ಸಿಂಹಾಸನಾಧಿಪತಿಗಳಿದ್ದರೂ, ಅನಂತಾರ್ಯರೇ ಸಕಲಾತ್ಮಗುಣಾವಾಸರು ; ಆಚಾರ್ಯಪದಕ್ಕೆ ಅವರೇ ತಕ್ಕವರು, ಎಂದು ಅವನೇ ಅವರನ್ನು ಹೊಗಳಿದನಲ್ಲವೇ ? ಎರಡನೆಯ ಮಂತ್ರದಿಂದ ಸಕಲಸಂತರೂ ತಲೆಯಲ್ಲಿ ಧರಿಸತಕ್ಕ ಶ್ರೀರಾಮಾನುಜಾಚಾರ್ಯರ ಸಿರಿಯಡಿದಾವರೆಗಳಲ್ಲಿ, ಇತರ ಸಿಂಹಾಸನಾಧಿಪತಿಗಳಿದ್ದರೂ, ಇವರಿಗೇ ಅಭಿಷೇಕವನ್ನು ಮಾಡಿದನಲ್ಲವೇ ? ಆದುದರಿಂದ ಇನ್ನುಮುಂದೆ ಶ್ರೀರಾಮಾನುಜಾಚಾರ್ಯರ ಸಿರಿಯಡಿದಾವರೆಗಳನ್ನು ಅನಂತಾರ್ಯರೆಂದು ಕರೆಯತಕ್ಕುದು. ಅನಂತಾ

ರ್ಯರ ಶಿಷ್ಯರು ಈ ಎರಡು ಮಂತ್ರಗಳನ್ನೂ ತಮ್ಮ ಆಚಾರ್ಯರ ಮಂತ್ರಗಳೆಂದು ಆದರದಿಂದ ಅನುಸಂಧಿಸಬೇಕು, ಎಂದು ಕಟ್ಟಳೆಮಾಡಿಕೊಂಡರು. ಶ್ರೀರಾಮಾನು ಜಾಚಾರ್ಯರ ನಿಯಮವನ್ನು ನಡೆಯಿಸುವುದೇ ತಮ್ಮ ಕರ್ತವ್ಯವೆಂದು ತಿಳಿದಿದ್ದ ಅನಂತಾರ್ಯರು, ತಮಗೆ ಶ್ರೀಮದಾಚಾರ್ಯರು ಕಳುಹಿಸಿದ್ದ ಶ್ರೀಮುಖದ ಪ್ರಕಾರ, ಅಧ್ಯಯನೋತ್ಸವಕಾಲದಲ್ಲಿ, ಭಗವಂತನ ಅಪ್ಪಣೆಯ ಮೇರೆಗೆ ದಿವ್ಯಸೂರಿಗಳ ಪ್ರಬಂಧಗಳನ್ನು ಪಾರಾಯಣಮಾಡುವಂತೆ ಏರ್ಪಾಡನ್ನು ಮಾಡಿ ಸಂತುಷ್ಟರಾಗಿ, ಶ್ರೀವೇಂಕಟನಾಥನ ಸಕಲ ಕೈಂಕರ್ಯಗಳನ್ನೂ ತಾವೇ ಮುಂದುವರಿದು ನಡೆಯಿ ಸುತ್ತ, ಅವನ ಕರುಣೆಯೆಂಬ ಕಡಲಲ್ಲಿ ಮೂಡಿ ಮುಳುಗಾಡುತ್ತಿದ್ದರು.

ಹೀಗೆ ಇರುತ್ತಿರುವಾಗ, ಶ್ರೀಮದಾಚಾರ್ಯರು ಪರಮಪದವನ್ನು ಸೇರಿದ ಸು ದ್ದಿಯು ಅನಂತಾರ್ಯರ ಕಿವಿಗೆ ಬಿದ್ದಿತು. ಲೋಕವನ್ನು ಮುಳುಗಿಸಿ ಬಿಡುವ ಕಡೆ ಗಾಲದ ಕಡಲಂತೆ ಉಕ್ಕಿ ಬರುವ ದುಃಖವೆಂಬ ಹೆಗ್ಗಡಲಲ್ಲಿ ಮುಳುಗಿದವರಾಗಿ, ಒಂದು ವರ್ಷದ ವರೆಗೆ ಶ್ರೀವೇಂಕಟನಾಥನಿಗೆ ನಮಸ್ಕಾರವನ್ನಾಗಲಿ, ಕೈಂಕರ್ಯವ ನ್ನಾಗಲೀ ಮಾಡದೆ ಇದ್ದು ಬಿಟ್ಟರು. ಅವರ ಅಗಲುವಿಕೆಯನ್ನು ತಡೆಯಲಾರದೆ, ಸ್ವಾಮಿಯು, ಅರ್ಚಕಮುಖೇನ, ಅವರನ್ನು ತನ್ನ ಬಳಿಗೆ ಬರಮಾಡಿಕೊಂಡು, ಅನಂ ತಾರ್ಯರೇ, ನೀವು ರಾಮಾನುಜರ ಪರಮಪದಪ್ರಾಪ್ತಿಗಾಗಿ ಏಕೆ ಅಳಲುತ್ತಿದ್ದೀರಿ? ನಮಗೆ ಕೂಡ ಶ್ರೀರಾಮಾನುಜನೆಂಬ ದೊಡ್ಡದಾದ ನಿಧಿಯು ಕಳೆದು ಹೋಗಿದೆ, ಅವರಿಗೆ ಬದಲಾಗಿ ನಾನು ನಿಮ್ಮ ಬಯಕೆಗಳೆಲ್ಲವನ್ನೂ ನಡೆಯಿಸಿಕೊಡುತ್ತೇನೆ, ಎಂದು ಹೇಳಿ ಅವರನ್ನು ಸಂತಯಿಸಿದನು. ಅನಂತಾರ್ಯರು ತಮ್ಮ ದುಃಖವನ್ನು ಅಡಗಿಸಿ ಕೊಂಡು, ಮೊಗವೆತ್ತಿ, ಸ್ವಾಮಿಯ ಮುಖಮಂಡಲವನ್ನು ನೋಡುತ್ತ, ಸ್ವಾಮೀ ಪದ್ಮಾವತೀವಲ್ಲಭ! ವೇಂಕಟನಾಥ! ಶ್ರೀರಾಮಾನುಜಾಚಾರ್ಯರ ವಿಷಯವಾಗಿ ನಿನ್ನ ಸನ್ನಿಧಿಯಲ್ಲಿ ನಾನು ಎರಡು ಅರಿಕೆಮಾಡಿಕೊಳ್ಳುತ್ತೇನೆ, ಅವುಗಳನ್ನು ನೀನು ನಡೆಯಿ ಸಿಕೊಡಬೇಕು. ಎಲೈ ಸ್ವಾಮಿಯೇ, ಚಿತ್ತಯಿಸು, "ತಮಸಃ ಪರಮೋಧಾತಾ ಶಂಕ ಚಕ್ರಗದಾಧರಃ", ಎಂಬಂತೆ ನಿನಗೆ ಅಸಾಧಾರಣಲಕ್ಷಣಗಳಾದ ಶಂಖಚಕ್ರಗಳನ್ನು ಆಶ್ರಿತನೊಬ್ಬನಿಗೆ ನೀನು ಅನುಗ್ರಹಮಾಡಿ ಕೊಟ್ಟುದರಿಂದ, ಜನರು ನಿನ್ನನ್ನು ಬೇರೆ ಪರಿಯಾಗಿ ತಿಳಿದು ವಿಪರೀತಬುದ್ಧಿಯುಳ್ಳವರಾಗಿರಲು, ಅವರನ್ನು ಉದ್ಧರಿಸಬೇಕೆಂಬ ತವಕದಿಂದ, ನಿನ್ನನ್ನು ಬಲುವಾಗಿ ಬೇಡಿಕೊಂಡು, ಶ್ರೀರಾಮಾನುಜಾಚಾರ್ಯರು ನಿನ್ನಿಂದ ಮತ್ತೆ ಶಂಖಚಕ್ರಗಳನ್ನು ಹಿಡಿಯಿಸಿದರು. ನಿನ್ನನ್ನು ಇಲ್ಲವೆಂದೂ, ಗುಣ ಹೀನನೆಂದೂ ನಿಂದಿಸುವ ವೇದಬಾಹ್ಯರ ಸೊಕ್ಕನ್ನು ಇಳಿಸಲೋಸುಗ, ಶ್ರೀಮದಾಚಾ ರ್ಯರು ಶ್ರೀಭಾಷ್ಯಮುಂತಾದ ಹಲವು ಪ್ರಬಂಧಗಳನ್ನು ರಚಿಸಿದರು. ಈ ರೀತಿ ಯಲ್ಲಿ ಸಜ್ಜನರಿಗೆ ಮಹೋಪಕಾರಮಾಡಿ ಆಚಾರ್ಯರೆಂದು ವಿಖ್ಯಾತರಾದ ಆ ಮಹಾನುಭಾವರ ಸ್ತೋತ್ರರೂಪವಾಗಿ, ನೂರೆಂಟು ಗಾಥೆಗಳುಳ್ಳ ಪ್ರಪನ್ನಗಾಯಿತ್ರಿ

ಪ್ರಬಂಧವನ್ನು, ಶ್ರೀಶಠಾರಿ ಪರಕಾಲಾದಿ ದಿವ್ಯಸೂರಿಗಳ ಪ್ರಬಂಧಗಳಂತೆಯೇ, ಅಧ್ಯಯನೋತ್ಸವಕಾಲದಲ್ಲಿ ಒಂದು ದಿವಸ ಪ್ರತ್ಯೇಕವಾಗಿ ಪಾರಾಯಣಮಾಡಿಸಿ ಕೇಳಬೇಕು. ಈ ಗಿರಿಯನ್ನು ಏರಿ ನಿನ್ನ ಮಂಗಳಾಶಾಸನವನ್ನು ದಿವ್ಯಸೂರಿಗಳು ಮಾಡದಿದ್ದ ಕೊರತೆಯನ್ನು ನೀಗಿಸಿದ. ಅವರು ನಿನಗೆ ಮಾಡಿರುವ ಮಂಗಳಾಶಾಸನವು ಸಿದ್ಧಿಸುವುದಕ್ಕೂ, ಕಲಿದೋಷದಿಂದ ಪ್ರಬಲವಾಗಿ, ವೇದವನ್ನು ನಂಬದ ಬಾಹ್ಯರು ಮಾಡಿಕೊಂಡಿರುವ ಸಿದ್ಧಾಂತಗಳು ವಿಧ್ವಂಸವಾಗುವದಕ್ಕೂ, ಈ ಬೆಟ್ಟದಲ್ಲಿ ಶ್ರೀಮದಾಚಾರ್ಯರ ವಿಗ್ರಹವನ್ನು ಪ್ರತಿಷ್ಠಿಸಲು ಅನುಮತಿಯನ್ನು ಕೊಡಬೇಕು, ಎಂದು ಬಿನ್ನವಿಸಿಕೊಂಡರು. ಅದಕ್ಕೆ ವೇಂಕಟನಾಥನು ಬಹುವಾಗಿ ಅವರನ್ನು ಅಭಿನಂದಿಸಿ, ಅನಂತಾರ್ಯರೇ, ಅಧ್ಯಯನಮಹೋತ್ಸವದಲ್ಲಿ ಮದ್ವಿಷಯಕವಾಗಿ ರಚಿಸಿರುವ ದಿವ್ಯಸೂರಿಪ್ರಬಂಧಗಳು ಶ್ರವಣವಾಗುವಂತೆಯೇ, ಶ್ರೀರಾಮಾನುಜಾಚಾರ್ಯರ ವಿಷಯಕವಾದ ಪ್ರಬಂಧವೂ ಪ್ರತ್ಯೇಕವಾಗಿ ಒಂದು ದಿವಸ ಶ್ರವಣವಾಗಲಿ; ನನ್ನ ಆಲಯದೊಳಗಿರುವ ಯಾವುದಾದರೂ ಒಂದು ಮಂಟಪದೊಳಗೆ ಆಚಾರ್ಯರ ದಿವ್ಯವಿಗ್ರಹವನ್ನು ಪ್ರತಿಷ್ಠೆಮಾಡಿಸಿರಿ, ಎಂದು ಅಪ್ಪಣೆಕೊಡಿಸಿದನು.

ಭಗವಂತನ ಅಪ್ಪಣೆಯ ಮೇರೆಗೆ, ಅನಂತಾರ್ಯರು ಅಧ್ಯಯನೋತ್ಸವ ಕಾಲದಲ್ಲಿ, ಶ್ರೀಮಧುರಕವಿಸೂರಿಗಳ ಪ್ರಬಂಧಶ್ರವಣವಾದ ಮರುದಿವಸ ಶ್ರೀರಾಮಾನುಜಾರ್ಯವಿಷಯಕವಾದ ಪ್ರಬಂಧವನ್ನು ಶ್ರವಣಮಾಡಿಸತಕ್ಕದ್ದು, ಎಂದು ಕಟ್ಟಳೆಮಾಡಿದರು. ಆಚಾರ್ಯರು ಹಿಂದೆ ತಮಗೆ ಅನುಗ್ರಹಿಸಿದ್ದ ಅವರ ಮಂಗಳ ವಿಗ್ರಹವನ್ನು, ಭಗವತ್ಸನ್ನಿಧಿಯ ಎಡಗಡೆಯಿರುವ ಒಂದು ಮಂಟಪದೊಳಗೆ ವೈಖಾನಸಕ್ರಮದಂತೆ ಪ್ರತಿಷ್ಠೆಮಾಡಿಸಿದರು. ಶ್ರೀಮದಾಚಾರ್ಯರ ಪಾದಗಳ ಕುರುಹುಳ್ಳ ಒಂದು ಮುಡಿಯನ್ನು ಮಾಡಿಸಿ ಅದನ್ನೂ ಅಲ್ಲಿ ಪ್ರತಿಷ್ಠಿಸಿದರು. ತಾವು ಶ್ರೀಮದಾಚಾರ್ಯರ ಪಾದರೂಪವೆಂದೂ (1), ಶ್ರೀಗೋವಿಂದಾರ್ಯರು ತತ್ಪಾದಚ್ಛಾಯೆಯೆಂದೂ (2), ಶ್ರೀದಾಶರಥಿಸೂರಿಗಳು ತತ್ಪಾದುಕೆಯೆಂದೂ (3), ಪ್ರಸಿದ್ಧಿಯಾಗಿದ್ದರೂ*, ಈ ದಿವ್ಯದೇಶದಲ್ಲಿ ಪ್ರೀತ್ಯಾಧಿಕ್ಯದಿಂದ ಅನಂತಾರ್ಯರೇ ಆಚಾ

---

*ಇವಕ್ಕೆ ಸಮ್ಮತಿಶ್ಲೋಕಗಳು

(1) ಶ್ರೀಮದ್ರಾಮಾನುಜಾಚಾರ್ಯ ಶ್ರೀಪಾದಾಂಭೋರುಹದ್ವಯಂ ।
ಸದುತ್ತಮಾಂಗಸಂಧಾರ್ಯಮನಂತಾರ್ಯಮಹಂ ಭಜೇ ॥

(2) ರಾಮಾನುಜಪದಚ್ಛಾಯಾ ಗೋವಿಂದಾಹ್ವಾನಪಾಯಿನೀ ।
ತದಾಯತ್ತ ಸ್ವರೂಪಾ ಸಾ ಜೀಯಾನ್ಮದ್ವಿಶ್ರಮಸ್ಥಲೀ ॥

(3) ಪಾದುಕೇ ಯತಿರಾಜಸ್ಯ ಕಥಯಂತಿಯದಾಖ್ಯಯಾ ।
ತಸ್ಯ ದಾಶರಥೇಃ ಪಾದೌ ಶಿರಸಾ ಧಾರಯಾಮ್ಯಹಂ ॥

ರ್ಯರ ಪಾದಚ್ಛಾಯೆ ಪಾದುಕೆಗಳೆಂಬ ನಾಮದ್ವಯವನ್ನೂ ತಾವೇ ಪಡೆದು, ಆಪಾದುಕೆಗೆ ಅನಂತಾರ್ಯರೆಂಬ ತಮ್ಮ ಹೆಸರೇ ಇರಬೇಕೆಂದು ನಿಯಮಿಸಿದರು. ಈ ಮೇರೆಗೆ ಅನಂತಾರ್ಯರು ದಿವ್ಯಪ್ರಬಂಧತತ್ವಾರ್ಥಗಳನ್ನು ಪರಿಶೀಲಿಸುತ್ತ, ಶ್ರೀವೈಷ್ಣವ ಧರ್ಮಗಳನ್ನು ಏಳಿಗೆಗೆ ತರುತ್ತ ವೇಂಕಟಗಿರಿಯಲ್ಲಿ ಕಾಲಯಾಪನೆ ಮಾಡಿಕೊಂಡಿದ್ದರು.

ಎಂಬಲ್ಲಿಗೆ ಶ್ರೀವೇಂಕಟೇಶ ಭಕ್ತಾಗ್ರೇಸರ ಶ್ರೀಮದನಂತಾರ್ಯ
ಚರಿತ್ರೆಯ ಪಂಚಮಪ್ರಕರಣಂ.

## ಆರನೆಯ ಪ್ರಕರಣಂ

ಒಮ್ಮೆ ಶ್ರೀರಂಗದಲ್ಲಿ ಶ್ರೀಪರಾಶರಭಟ್ಟರವರ * ಅಡಿದಾವರೆಗಳನ್ನು ಆಶ್ರಯಿಸಿ ವಸ್ತುತೆಯನ್ನು ಪಡೆದವನಾಗಿಯೂ, ಭಗವದ್ಭಾಗವತಾಚಾರ್ಯರಲ್ಲಿ ಪ್ರೇಮವುಳ್ಳವನಾಗಿಯೂ. ಒಳ್ಳೆಯ ನಡೆನುಡಿಗಳುಳ್ಳವನಾಗಿಯೂ ಇದ್ದ ಶ್ರೀವೈಷ್ಣವನೊಬ್ಬನು ಆಚಾರ್ಯರಿಗೆ ನಮಸ್ಕಾರಮಾಡಿ, ಎಲೈ ಸ್ವಾಮಿಯೇ, ನನಗೆ ಶ್ರೀವೈಷ್ಣವ ಲಕ್ಷಣವನ್ನು ದಯೆಯಿಟ್ಟು ಅರುಹಬೇಕು, ಎಂದು ಬಿನ್ನಯಿಸಿಕೊಂಡನು. ಆಗ ಭಟ್ಟಾರ್ಯರು ಅವನನ್ನು ನೋಡಿ, ಎಲೈ ಶ್ರೀವೈಷ್ಣವನೇ, ನೀನು ವೇಂಕಟಾದ್ರಿಯಲ್ಲಿ ಬಿಜಯಮಾಡಿರುವ ಶ್ರೀಮದನಂತಾರ್ಯರಲ್ಲಿಗೆ ಹೋಗಿ, ಅವರಿಂದ ಶ್ರೀವೈಷ್ಣವ ಲಕ್ಷಣವನ್ನು ತಿಳಿದುಕೊಂಡು ಬಾ, ಎಂದು ಆಜ್ಞಾಪಿಸಿದರು. ಆಚಾರ್ಯರ ಅನುಜ್ಞೆಯಂತೆ, ಆ ಶ್ರೀವೈಷ್ಣವನು ವೇಂಕಟಾಚಲಕ್ಕೆ ಹೋಗಿ, ಅನಂತಾರ್ಯರನ್ನು ಕಂಡು ನಮಸ್ಕರಿಸಿ, ಎಲೈ ಸ್ವಾಮಿಯೇ, ನಾನು ಶ್ರೀಪರಾಶರಭಟ್ಟರವರ ಶಿಷ್ಯನು. ಅವರ ಅಪ್ಪಣೆಯಂತೆ, ತಮ್ಮಿಂದ ಶ್ರೀವೈಷ್ಣವ ಲಕ್ಷಣವನ್ನು ತಿಳಿಯಬೇಕೆಂದು, ಇಲ್ಲಿಗೆ

---

*ಇವರು ಶ್ರೀವತ್ಸಾಂಕಮಿಶ್ರರೆಂದು ಪ್ರಸಿದ್ಧರಾದ ಕೂರನಾಥರ ಮಕ್ಕಳು. ಇವರಿಗೆ ಶ್ರೀರಂಗರಾಜರೆಂದು ಹೆಸರು. ವಿಷ್ಣುಪುರಾಣವನ್ನು ಬರೆದ ಪರಾಶರಮುನಿಗಳ ನೆನಪಿಗಾಗಿ, ಶ್ರೀರಾಮಾನುಜಾಚಾರ್ಯರು, ಇವರಿಗೆ ಪರಾಶರಭಟ್ಟರೆಂದು ಹೆಸರಿಟ್ಟರು. ಇವರು ಎಂಬಾರ್ ಎಂದು ವಿಖ್ಯಾತರಾದ ಶ್ರೀಗೋವಿಂದರ ಶಿಷ್ಯರು. ಇವರು ಶ್ರೀರಂಗರಾಜಸ್ತವ, ಶ್ರೀಗುಣರತ್ನಕೋಶ, ಶ್ರೀವಿಷ್ಣುಸಹಸ್ರನಾಮಭಾಷ್ಯ, ಕ್ರಿಯಾದೀಪ, ಅಷ್ಟಶ್ಲೋಕೀ, ಚತುಶ್ಲೋಕೀ, ತನಿಶ್ಲೋಕೀ, ದ್ವಯಶ್ಲೋಕೀ, ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀರಾಮಾನುಜಾಚಾರ್ಯರ ತರುವಾಯ, ಇವರು ಅವರ ಪೀಠವನ್ನು ಅಲಂಕರಿಸಿದರು.

ಬಂದಿದ್ದೇನೆ ; ದಯೆಯಿಟ್ಟು ನನಗೆ ಅದನ್ನು ತಿಳುಹಿ ಅನುಗ್ರಹಿಸಬೇಕು, ಎಂದು ಬೇಡಿಕೊಂಡನು. ಆಗ ಅನಂತಾರ್ಯರು ಅವನನ್ನು ನೋಡಿ, ಅಯ್ಯ, ನೀನು ಕೆಲವು ಕಾಲ ನಮ್ಮಲ್ಲಿ ಇರುವನಾಗು ; ಬಳಿಕ ನಿನಗೆ ಶ್ರೀವೈಷ್ಣವಲಕ್ಷಣಗಳನ್ನು ತಿಳುಹುತ್ತೇನೆ, ಎಂದು ಹೇಳಿದರು. ಅವರ ಅಪ್ಪಣೆಯಂತೆ, ಆತನು ಆರು ತಿಂಗಳ ವರೆಗ ಬೆಟ್ಟದ ಮೇಲೆ ಇದ್ದನು.

ಅನಂತಾರ್ಯರ ಮನೆಯಲ್ಲಿ ನಿತ್ಯವೂ ಶ್ರೀವೈಷ್ಣವ ತದೀಯಾರಾಧನೆಯು ಅತಿಶಯವಾಗಿ ನಡೆಯುತ್ತಿದ್ದಿತು; ಅಲ್ಲಿಗೆ ಬರುವ ಶ್ರೀವೈಷ್ಣವರು, ತಮ್ಮ ತಮ್ಮ ಯೋಗ್ಯತೆಯ ಮೇರೆಗೆ, ಮೊದಲನೆಯ, ಎರಡನೆಯ, ಮೂರನೆಯ, ಹಂತಿಗಳಲ್ಲಿ ಕುಳಿತು ಭೋಜನವನ್ನು ಮಾಡುತ್ತಿದ್ದರು. ಹೀಗಿರುವಲ್ಲಿ ಶ್ರೀಪರಾಶರಭಟ್ಟರವರ ಶಿಷ್ಯನು, ಒಂದು ದಿನ, ಮೊದಲನೆಯ ಹಂತಿಯಲ್ಲಿ ಭೋಜನಕ್ಕೆ ಕುಳಿತಿದ್ದನು. ಅವನ ಮನದ ನಿಲವೆಯನ್ನು ಅರಿಯಬೇಕೆಂದೂ, ಅವನಿಗೆ ಶೇಷತ್ವ ಪಾರತಂತ್ರ್ಯಗಳ ಸ್ವರೂಪಗಳನ್ನು ತಿಳಿಸಬೇಕೆಂದೂ ಬಯಸಿ, ಶ್ರೀಮದನಂತಾರ್ಯರು, ಅವನನ್ನು ನೋಡಿ, ಅಯ್ಯ, ನೀನು ಈ ಹಂತಿಯಲ್ಲಿ ಕುಳ್ಳಿರಬಾರದು, ಏಳು, ಎಂದು ಅಲ್ಲಿಂದ ಎಬ್ಬಿಸಿದರು ; ಅವನು ಎರಡನೆಯ ಹಂತಿಯಲ್ಲಿ ಕುಳಿತನು, ಅಲ್ಲಿಯೂ, ಅನಂತಾರ್ಯರು ಅವನನ್ನು ಇರಗೊಡಲಿಲ್ಲ ; ಅವನು ಮೂರನೆಯ ಹಂತಿಯಲ್ಲಿ ಕುಳಿತನು, ಅಲ್ಲಿಂದಲೂ ಅವನನ್ನು ಅನಂತಾರ್ಯರು ಎಬ್ಬಿಸಿಬಿಟ್ಟರು ; ಆಮೇಲೆ ಅವನು ಕೊನೆಯ ಸಾಲಿನಲ್ಲಿ ಕುಳಿತನು. ಇಲ್ಲಿ ಜನಸಂದಣಿಯು ಹೆಚ್ಚಾಗಿದೆ, ನಿನಗೆ ಸ್ಥಳವಿಲ್ಲ ; ಎಲ್ಲರಿಗೂ ಊಟವಾದ ಬಳಿಕ, ನೀನು ಭೋಜನಮಾಡು, ಎಂದು ಅನಂತಾರ್ಯರು ಅವನಿಗೆ ಹೇಳಿದರು. ಆಚಾರ್ಯರ ನಿಯಮವನ್ನು ಪರಿಪಾಲಿಸುವುದೇ ಕರ್ತವ್ಯವೆಂದು ಅರಿತಿದ್ದ ಆ ಶ್ರೀವೈಷ್ಣವನು, ಅನಂತಾರ್ಯರು ತನಗೆ ಈ ರೀತಿಯಾಗಿ ಮಾಡಿದರಲ್ಲ, ಎಂದು ಕೊಂಚವೂ ಖಿನ್ನನಾಗದೆ ಸಂತೋಷಚಿತ್ತನಾಗಿಯೇ ಇದ್ದನು. ಆತನ ಈ ತೆರದ ಮನದ ನಿಲವೆಯನ್ನು ಕಂಡು, ಅನಂತಾರ್ಯರು ಸಂತುಷ್ಟಾಂತರಂಗರಾಗಿ, ಇವನೀಗ ಶ್ರೀವೈಷ್ಣವಲಕ್ಷಣವನ್ನು ತಿಳಿಯಲಿಕ್ಕೆ ತಕ್ಕವನು, ಎಂದುಕೊಂಡು, ಶ್ರೀವೈಷ್ಣವರೆಲ್ಲರೂ ಭೋಜನವನ್ನು ಮುಗಿಸಿಕೊಂಡು ಎದ್ದ ತರುವಾಯ, ಅವನನ್ನು ತಮ್ಮ ಹಂತಿಯಲ್ಲಿ ಕುಳ್ಳಿರಿಸಿಕೊಂಡು ಭೋಜನಮಾಡಿ, ಊಟವಾದ ಬಳಿಕ, ಆ ವೈಷ್ಣವನನ್ನು ನೋಡಿ, ಅಯ್ಯಾ, ನೀನು ಶ್ರೀರಂಗದಿಂದ ಇಲ್ಲಿಗೆ ಬಂದು ಆರು ತಿಂಗಳಾಯಿತು ; ಇನ್ನು ನೀನು ನಿನ್ನ ಆಚಾರ್ಯರ ಬಳಿಗೆ ಹೊರಡು ; ಕೊಕ್ಕರೆಯ, ಕೋಳಿಯ, ಉಪ್ಪಿನ ಮತ್ತು ನಿನ್ನ ಗುಣಗಳು ಯಾರಲ್ಲಿ ಇರುವುವೋ, ಅವರೇ 'ಶ್ರೀವೈಷ್ಣವರೆಂದು' ಬಲ್ಲವರು ಹೇಳುತ್ತಾರೆ, ಎಂದು ನಾನು ನಿನಗೆ ಹೇಳಿದೆನೆಂದು ನಿನ್ನ ಆಚಾರ್ಯರಿಗೆ ತಿಳುಹು. ಅವರೇ ಇದನ್ನೆಲ್ಲ ನಿನಗೆ ಚೆನ್ನಾಗಿ ಮನದಟ್ಟುವಂತೆ ಹೇಳುತ್ತಾರೆ. ಇನ್ನು ಹೋಗಿ ಬಾ, ಎಂದು ಅವನನ್ನು ಬೀಳುಕೊಟ್ಟರು.

ಬಳಿಕಲಾ ಶ್ರೀವೈಷ್ಣವನು, ಶ್ರೀರಂಗಕ್ಕೆ ಬಂದು, ಸ್ವಾಚಾರ್ಯರಾದ ಶ್ರೀಪರಾಶರಭಟ್ಟರನ್ನು ಕಂಡು, ಅವರಡಿಗಳಿಗೆ ಎರಗಿದನು ; ಮತ್ತು, ವೇಂಕಟಶೈಲದಲ್ಲಿ ಶ್ರೀಮದನಂತಾರ್ಯರ ಬಳಿ ತಾನು ಇದ್ದಾಗ ನಡೆದ ಸುದ್ದಿಗಳನ್ನೂ, ಅವರು ತನಗೆ ಶ್ರೀವೈಷ್ಣವ ಲಕ್ಷಣಗಳನ್ನು ತಿಳುಹಿದ ಪರಿಯನ್ನೂ ಆಚಾರ್ಯರಲ್ಲಿ ವಿಜ್ಞಾಪಿಸಿಕೊಂಡು, ಗುರುವೇ, ಅನಂತಾರ್ಯರು ಅಪ್ಪಣೆಕೊಡಿಸಿದ ಶ್ರೀವೈಷ್ಣವ ಲಕ್ಷಣಗಳ ಹುರುಳನ್ನು ನನಗೆ ತಿಳಿಸಬೇಕೆಂದು ಪ್ರಾರ್ಥಿಸಿಕೊಂಡನು. ಆಗ ಪರಾಶರಭಟ್ಟರು, ಶಿಷ್ಯನನ್ನು ನೋಡಿ, ಅಯ್ಯಾ ಶ್ರೀವೈಷ್ಣವನೇ, ಶ್ರೀಮದನಂತಾರ್ಯರು ನಿನಗೆ ಹೇಳಿದ ಶ್ರೀವೈಷ್ಣವ ಲಕ್ಷಣಗಳನ್ನು ಮನದಟ್ಟುವಂತೆ ವಿವರಿಸುತ್ತೇನೆ, ಎಚ್ಚರಿಕೆಯಿಂದ ಕೇಳು, ಎಂದು ಹೇಳತೊಡಗಿದರು. ಅಯ್ಯ, ಕೇಳು, ಕೊಕ್ಕರೆಯ (ಬಕದ) ಗುಣವಿರಬೇಕೆಂದು ಅನಂತಾರ್ಯರು ಹೇಳಿದರಲ್ಲವೇ ? ಅದಕ್ಕೆ ನಾಲ್ಕು ಬಗೆಯ ಅಭಿಪ್ರಾಯವುಂಟು; ಜಲಸಮೃದ್ಧವಾದ ತೊರೆ, ಕೆರೆಗಳ ತೀರದಲ್ಲಿ ಬಕವು ವಾಸಮಾಡುವಂತೆಯೇ, ಶ್ರೀವೈಷ್ಣವನೂ, ಬಹುತೀರ್ಥಸಮೃದ್ಧವಾದ (ಬಹುಜನ ಸಂತರಿರುವ) ಸ್ಥಲದಲ್ಲಿ ವಾಸಮಾಡಬೇಕು. ಬಕದ ಮೈಯ್ಯೆಲ್ಲ ಪರಿಶುದ್ಧವಾಗಿ ಇರುವಂತೆಯೇ, ಶ್ರೀವೈಷ್ಣವನು ಹೊರಗೂ ಒಳಗೂ ಪರಿಶುದ್ಧನಾಗಿ ಇರಬೇಕು. ಕೊಕ್ಕರೆಯು, ಜಲಾಶಯದಲ್ಲಿ ಇರುತ್ತ, ತನ್ನ ಬಳಿಗೆ ಹಲವು ಸಣ್ಣ ಮೀನುಗಳು ಬಂದರೂ ಕಣ್ಣೆತ್ತಿ ನೋಡದೆ, ತನ್ನ ಹಸಿವನ್ನು ಅಡಗಿಸತಕ್ಕ ದೊಡ್ಡ ಮೀನು ಬರುವವರೆಗೂ ಕಾದಿದ್ದು, ಅದು ಬಂದಕೂಡಲೇ, ಅದನ್ನು ಬಿಡದೆ ಹಿಡಿದು, ನುಂಗಿ, ಹಸಿವನ್ನು ಅಡಗಿಸಿಕೊಳ್ಳುತ್ತದೆಯಲ್ಲವೆ? ಹಾಗೆಯೇ, ಶ್ರೀವೈಷ್ಣವನು, ತನ್ನ ಬಳಿಗೆ ಸಾಮಾನ್ಯ ಗುರುಗಳು ಬಹುವಾಗಿ ಬಂದರೂ ಅವರನ್ನು ಲಕ್ಷಿಸದೆ ಇದ್ದುಕೊಂಡು, ತನ್ನ ಜನ್ಮಕ್ಕೆ ಅಂಟಿಕೊಂಡು ಬಂದಿರುವ ತಾಪತ್ರಯಗಳ ಬೇಗೆಯನ್ನು ನೀಗಿಸಬಲ್ಲ ಮಹಾತ್ಮನೊಬ್ಬನ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದು, ಅಂಥವನು ಬಂದೊಡನೆಯೇ, ಅವನನ್ನು ಬಿಡದೆ, ಶ್ರದ್ಧೆಯಿಂದಲೂ, ಭಕ್ತಿಯಿಂದಲೂ ಒಲಿಸಿಕೊಂಡು, ಅವನಿಂದ ಸಕಲತತ್ವಾರ್ಥಗಳನ್ನೂ ತಿಳಿದು, ಮನದ ಮಲಿನವನ್ನು ತೊಳೆದುಕೊಂಡು ಅಜ್ಞಾನವೆಂಬ ದೊಡ್ಡದಾದ ಆಪತ್ತನ್ನು ಹೋಗಲಾಡಿಸಿಕೊಳ್ಳಬೇಕು. ಮತ್ತು, ಕಡಲ ದಡದಲ್ಲಿ ವಾಸವಾಗಿರುವ ಕೊಕ್ಕರೆಯು ಮಳೆಗಾಲದಲ್ಲಿ ಒದಗುವ ಸಿಡಿಲು ಮಿಂಚುಗಳಿಗೆ ಅಂಜಿ, ಅಲ್ಲಿಂದ ಹೊರಟು, ಮತ್ತೊಂದು ಜಲಾಶಯವನ್ನು ಸೇರಿ ನಿರ್ಭಯವಾಗಿ ಇರುವಂತೆ, ಶ್ರೀವೈಷ್ಣವನೂ, ಪ್ರಕೃತಿಸಂಬಂಧಿಗಳ ದೆಸೆಯಿಂದ ತನಗೆ ಆತ್ಮನಾಶವುಂಟಾಗುತ್ತಿರಲು, ತಾನು ವಾಸಿಸುತ್ತಿರುವ ಊರನ್ನೇ ಬಿಟ್ಟು, ತನಗೆ ಇರುವುದಕ್ಕೆ ನಿರುಪಾಧಿಕವಾಗಿರುವ ಯಾವುದಾದರೊಂದು ದಿವ್ಯದೇಶದಲ್ಲಿ ಮನೆಮಾಡಿಕೊಂಡಿರಬೇಕು.

ಇನ್ನು ಕೋಳಿಯಂತೆ ಇರಬೇಕು, ಎಂದು ಹೇಳಿದ ಅನಂತಾರ್ಯರ ಅಭಿಪ್ರಾಯವನ್ನು ಹೇಳುವೆನು, ಕೇಳು. ಕೋಳಿಯು ಕಸದ ರಾಶಿಯನ್ನು ಬೆದಕಿ ಬೆದಕಿ,

ರಸವನ್ನು ಮಟ್ಟಿಗೆ ತೆಗೆದು, ತಾನೂ ತಿಂದು, ಮರಿಗಳಿಗೂ ಕೊಡುತ್ತದೆ. ಹಾಗೆಯೇ, ಪರಾಂಕುಶಮುನಿರೂಪವಾದ ದಿವ್ಯ ಕುಕ್ಕುಟವು, ಬಹುಶಾಖಾವೃತವಾದ ವೇದಗಳೆಂಬ ಕಸದ ರಾಶಿಯನ್ನು ಚೆನ್ನಾಗಿ ಬೆದಕಿ, ಸಾರವಾದುವನ್ನು ಅದರಿಂದ ಎತ್ತಿ ತಾನೂ ಬಳಸಿಕೊಂಡು; ಹೆಂಗಸರು, ಶೂದ್ರರು, ಜಡರು, ಬಾಲಕರು ಎಂಬ ತನ್ನ ಮರಿಗಳಿಗೂ ಧಾರಕವಾಗಿರುವ, ಸಂಸ್ಕೃತವೇದಪ್ರತಿನಿಧಿಯಾದ ದ್ರಾವಿಡವೇದರೂಪವಾದ ನಾಲ್ಕು ಪ್ರಬಂಧಗಳನ್ನು ರಚಿಸಿ, ಅವುಗಳನ್ನು ಶ್ರೀಮನ್ನಾಥಮುನಿಗಳಲ್ಲಿ ನಿಕ್ಷೇಪಿಸಿತು. ಆ ಪ್ರಬಂಧಗಳನ್ನು ಮುಂದಣವರು ಉಪಯೋಗಿಸುವುದಕ್ಕೆ ತಕ್ಕಂತೆ ಶ್ರೀಮನ್ನಾಥಮುನಿಗಳು ಪರಿಷ್ಕರಿಸಿದರು. ಪರಾಂಕುಶಪರಕಾಲಮುಖ್ಯರಾದ ದಿವ್ಯಸೂರಿಗಳು ಅಪ್ಪಣೆಕೊಡಿಸಿರುವ ದ್ರಮಿಡವೇದಗಳನ್ನೂ, ತದಂಗಗಳಾದ ದಿವ್ಯ ಪ್ರಬಂಧಗಳನ್ನೂ, ನಾಥ ಯಾಮುನ ಯತಿವರಾದಿಗಳು ರಚಿಸಿರುವ ವೇದಾಂತಸಾರಾರ್ಥಗಳನ್ನೂ ಒಳಕೊಂಡ ಪ್ರಬಂಧಗಳನ್ನೂ ಶ್ರೀವೈಷ್ಣವನು ಆಲೋಚನೆಮಾಡುತ್ತ, ಸಾರತಮವಾದ ಅರ್ಥವನ್ನು ತಾನೂ ತಿಳಿದು, ತನ್ನ ಅನುಬಂಧಿಗಳಿಗೂ ತಿಳಿಸುತ್ತ, ಜೀವಿಸಿರುವ ವರೆಗೂ ಕಾಲಯಾಪನೆಯನ್ನು ಮಾಡಬೇಕು.

ಅಪೌರುಷೇಯವೂ, ಸತ್ಯವೂ, ನಿರ್ದೋಷವೂ, ಪರಮಪ್ರಮಾಣವೂ ಆಗಿರುವ ವೇದವನ್ನು ಕಸವೆಂದು ಹೇಳಬಹುದೇ? ವೇದವನ್ನು ದೂಷಿಸಬೇಕೆಂದಾಗಲಿ, ಅದು ವಿಪರೀತಾರ್ಥವನ್ನು ಬೋಧಿಸುವುದೆಂದು ಹೇಳಬೇಕೆಂದಾಗಲಿ, ಹಾಗೆ ಹೇಳಿರುವುದಿಲ್ಲ. ಮೋಕ್ಷಾಪೇಕ್ಷಿಗಳಿಗೆ ಬೇಡವಾಗಿರುವ ಹಲವು ದೇವತೆಗಳ ಪೂಜಾವಿಧಾನಗಳನ್ನು ತಿಳುಹುವ ನಾನಾಶಾಖೆಗಳು ಅದರಲ್ಲಿ ತುಂಬಿಹೋಗಿವೆ, ಎಂದು ತಿಳುಹುವುದಕ್ಕಾಗಿ ಹಾಗೆ ಹೇಳಲಾಯಿತು. ನಾನಾದೇವತೆಗಳ ಪೂಜಾವಿಧಾನವನ್ನು ತಿಳುಹುವುದೂ ದೋಷವೆಂದು ಹೇಳುವುದಕ್ಕಿಲ್ಲ. ಇದರಿಂದ, ವೇದಗಳು, ಯೋಗ್ಯರಲ್ಲದವರನ್ನು ಯೋಗ್ಯರನ್ನಾಗಮಾಡಿ ಜನರಿಗೆ ಅತ್ಯಂತಹಿತಕಾರಿಗಳಾಗಿರುತ್ತವೆ. ಭಗವಂತನಿಗೆ ಶೇಷಭೂತವಾಗಿರುವ ಆತ್ಮನನ್ನು, ಸ್ವಶೇಷವೆಂದು ತಿಳಿಯುವ ಆತ್ಮಾಪಹಾರಿಯು ಯಾವ ಪಾಪವನ್ನು ತಾನೇ ಮಾಡದಿದ್ದಾನೆ? ಎಂಬಂತೆ, ಬಹುಕಾಲದಿಂದಲೂ ಆತ್ಮಾಪಹಾರಿಗಳಾಗಿ ಪುಣ್ಯ ಪಾಪಗಳೆಂಬ ಚಕ್ರದಲ್ಲಿ ಸುತ್ತುತ್ತ, ಹುಟ್ಟಿ ಸಾಯುವ ಚೇತನರಿಗೆ, ತಾವು ಸ್ವತಂತ್ರರಲ್ಲವೆಂಬ ಅರಿವನ್ನುಂಟುಮಾಡಿ, ಬಳಿಕ ಶೇಷತ್ವಜ್ಞಾನವನ್ನು ವೇದಗಳು ಹುಟ್ಟಿಸುತ್ತವೆ. ಹೇಗೆಂದರೆ, ಮದ್ದನ್ನು ಕುಡಿಯಲಾರದೆ ಕೋಟಲೆ ಪಡುತ್ತಿರುವ ಮಕ್ಕಳಿಗೆ, ಪ್ರಿಯಹಿತಪರರಾದ ತಾಯಿತಂದೆಗಳು, ಹೇಗೆ ರುಚಿಕಾರಿಯಾದ ಪದಾರ್ಥದಲ್ಲಿ ಔಷಧವನ್ನು ಹುದುಗಿಸಿ ಸೇವನೆಮಾಡಿಸುವರೋ, ಹಾಗೆಯೇ, ಜೀವಿಯ ವಾಸನಾನುಗುಣವಾಗಿ ಉಂಟಾಗುವ ಆಸೆಯನ್ನು ಈಡೇರಿಸಿಕೊಳ್ಳಲಿಕ್ಕೆ ಅನುಕೂಲವಾದ ಉಪಾಯವನ್ನು ಸೂಚಿಸಿ, ತನ್ಮೂಲಕ ಶಾಸ್ತ್ರದಲ್ಲಿ ನಂಬುಗೆಯನ್ನು ಉಂಟುಮಾಡುತ್ತವೆ; ಬಳಿಕ, ಪರೋಕ್ಷಫಲವನ್ನು ಕೊಡುವ ಯಜ್ಞಾದಿಕರ್ಮಗಳಲ್ಲಿ

ಚೇತನರಿಗೆ ಶ್ರದ್ಧೆಯನ್ನು ಹುಟ್ಟಿಸಿ, ಈ ಯಜ್ಞಾದಿಕರ್ಮಗಳಿಗೆ ಇಂದ್ರನು ಫಲಪ್ರದನು, ಎಂದು ತಿಳಿಸಿ, ಇಂದ್ರನಿಗಿಂತಲೂ ಬ್ರಹ್ಮರುದ್ರರು ಅಧಿಕರು; ಅವರು ಅಧಿಕ ಫಲದಾಯಕರು, ಎಂದು ನಿರೂಪಿಸಿ, ಬಳಿಕ, ಈ ಬ್ರಹ್ಮರುದ್ರರೂ ಪರಾಧೀನರು; ಇವರ ಅಧಿಕಾರಗಳೂ ಶಾಶ್ವತವಾದುವಲ್ಲ, ಇವರೆಲ್ಲರಿಗಿಂತ ಶಕ್ತನಾದ ಶ್ರೀಮನ್ನಾರಾಯಣನೇ ಸರ್ವಸ್ವತಂತ್ರನು, ಅವನನ್ನೇ ಉಪಾಸಿಸತಕ್ಕುದು, ಅನಂತವೂ ನಿತ್ಯವೂ ಆದ ಫಲವನ್ನು ಅವನೀಗ ಕೊಡತಕ್ಕವನು, ಎಂದು ನಿಷ್ಕೃಷ್ಟವಾಗಿ ಬೋಧಿಸಿ, ಶೇಷತ್ವಬುದ್ಧಿಯನ್ನು ಉಂಟುಮಾಡಿ, ವೇದಗಳು ಚೇತನರನ್ನು ಪರಮಪುರುಷಾರ್ಥವೆನಿಸಿದ ಮೋಕ್ಷಕ್ಕೇ ಕೊಂಡೊಯ್ಯುತ್ತವೆ. ಅನ್ಯದೇವೋಪಾಸಕರು ಕೂಡ, ಆಯಾ ಶರೀರಾಂತರ್ಗತನಾದ ಪರಮಾತ್ಮನನ್ನೇ ಪೂಜಿಸುತ್ತಿರುವುದರಿಂದ, ವೇದಗಳು ವಿಪರೀತಾರ್ಥಗಳನ್ನು ಬೋಧಿಸುತ್ತವೆಯೆಂಬ ಅಭಿಪ್ರಾಯವು ಯಾರಿಗೂ ಇಲ್ಲ. ಮುಮುಕ್ಷುಗಳಿಗೆ ಅನವಶ್ಯಕಗಳಾದ ಅನ್ಯವಿಷಯಗಳನ್ನು ವೇದಗಳು ಹೆಚ್ಚಾಗಿ ಬೋಧಿಸುತ್ತವೆ, ಮತ್ತು ದುರವಗಾಹವಾದ ವಸ್ತುತತ್ತ್ವಗಳು ವೇದಗಳಲ್ಲಿ ತುಂಬಿಹೋಗಿವೆ, ಈ ಕಾರಣಗಳಿಂದ ಅವುಗಳನ್ನು ಕಸವೆಂದು ಹೇಳಲಾಯಿತು. ಇಷ್ಟೇ ಹೊರತು, ಪ್ರಪಂಚಕ್ಕೇ ಹಿತಕಾರಿಗಳಾದ ವೇದಗಳನ್ನು ಯಾವ ರೀತಿಯಿಂದಲೂ ನಿಂದಿಸಬೇಕೆಂಬ ಅಭಿಪ್ರಾಯವು ಸರ್ವಥಾ ಇಲ್ಲ.

ಇನ್ನು, ಅನಂತಾರ್ಯರು ಹೇಳಿದ, ಉಪ್ಪಿನ ಸಾಮ್ಯವನ್ನು ನಿನಗೆ ತಿಳಿಸುತ್ತೇನೆ, ಕೇಳು. ಉಪ್ಪು, ವ್ಯಂಜನದೊಡನೆ ಸೇರಿದರೂ, ಸೇರದಿದ್ದರೂ, ವ್ಯಂಜನಕ್ಕೆ ರುಚಿಯೂ ಅರುಚಿಯೂ ಉಂಟಾಗುತ್ತಿದ್ದರೂ ಅದು ಮೆಚ್ಚಿಗೆ ಹೊಗಳಿಕೆಗೆ ಪಾತ್ರವಾಗುವುದಿಲ್ಲ; ಹಾಗೆಯೇ, ಶ್ರೀವೈಷ್ಣವನು, ತನ್ನ ಕಿಂಚಿತ್ಕಾರದಿಂದ ಭಗವದ್ಭಾಗವತಾಚಾರ್ಯರ ಮುಖೋಲ್ಲಾಸಕಾರಣನಾಗಿದ್ದರೂ, ಅವರ ಹೊಗಳಿಕೆಗೆ ಒಳಗಾಗಬಾರದು; ನಾನು ಏನನ್ನೂ ಮಾಡಲಿಲ್ಲ, ಎಂದು ತನ್ನ ಕುಂದುಕೊರತೆಗಳನ್ನು ಅನುಸಂಧಾನಮಾಡುತ್ತ ನೊಂದುಕೊಂಡಿರಬೇಕು.

ಉಪ್ಪು, ಹೆಚ್ಚಾಗಿಯೋ ಕಮ್ಮಿಯಾಗಿಯೋ ವ್ಯಂಜನದೊಡನೆ ಸೇರುವುದರಿಂದ, ವ್ಯಂಜನದ ರುಚಿಯು ಕೆಟ್ಟು ಹೋಗುತ್ತದೆ; ಭೋಜನಮಾಡುವವರು, ಉಪ್ಪು ಹೆಚ್ಚು, ಅಥವಾ ಉಪ್ಪು ಇಲ್ಲ, ಎಂದು ಉಪ್ಪನ್ನು ಬಯ್ಯುತ್ತಾರೆ; ಹೀಗೆ ಬಯ್ದರೂ ಅದು ಬಯ್ದವರೊಡನೆ ಬದಲನ್ನು ಹೇಳುವುದಿಲ್ಲ. ಹಾಗೆಯೇ, ಶ್ರೀವೈಷ್ಣವನು ಯಾವುದಾದರೊಂದು ಕಾರಣದಿಂದ, ತನ್ನನ್ನು ಶ್ರೀವೈಷ್ಣವರು ಬಯ್ದರೂ, ಅವರಿಗೆ ಬದಲು ಹೇಳದೆ, ತನ್ನ ಕುಂದುಕೊರತೆಗಳನ್ನು ನೆನಪಿಗೆ ತಂದು ಮಹೋಪಕಾರ ಮಾಡಿದರು, ಎಂದು ತಿಳಿಯಬೇಕು. ಉಪ್ಪು, ತನ್ನ ಸ್ವರೂಪವನ್ನು ಕಳೆದುಕೊಂಡರೂ, ವ್ಯಂಜನಾದಿಗಳಿಗೆ ರುಚಿಯುಂಟುಮಾಡಿ, ಪರೋಪಕಾರಿಯಾಗಿರುತ್ತದೆ; ಅಂತೆಯೇ

ಶ್ರೀವೈಷ್ಣವನೂ, ಎಲ್ಲ ಬಗೆಯಿಂದಲೂ ತನ್ನ ಸ್ವರೂಪವನ್ನು ನೀಗಿಕೊಂಡು, ಭಗವದ್ಭಾಗವತಕೈಂಕರ್ಯಪರಾಯಣನಾಗಿರಬೇಕು.

ಈ ಪರಿಯಾಗಿ, ಶ್ರೀಪರಾಶರಭಟ್ಟರು, ತಮ್ಮ ಶಿಷ್ಯನಿಗೆ, ಅನಂತಾರ್ಯರು ಹೇಳಿದ, ಕೊಕ್ಕರೆ, ಕೋಳಿ, ಉಪ್ಪುಗಳ ಸಾಮ್ಯವನ್ನು ಮನದಟ್ಟುವಂತೆ ತಿಳಿಸಿ, ಬಳಿಕ, ಆತನನ್ನು ನೋಡಿ, ಅಯ್ಯ, ಶ್ರೀವೈಷ್ಣವಲಕ್ಷಣಗಳನ್ನು ತಿಳಿಸುವ ಕಾಲದಲ್ಲಿ, ಅನಂತಾರ್ಯರು ನಿನ್ನ ಸಾಮ್ಯವನ್ನೂ ಹೇಳಿದರೆಂದೆಯಲ್ಲವೇ; ಅವರ ಬಳಿಯಿರುವಾಗ, ನೀನು ಹೇಗೆ ನಡೆದುಕೊಂಡೆಯೋ ಹೇಳು. ಅದನ್ನು ತಿಳಿಯದೆ, ಅನಂತಾರ್ಯರ ಅಭಿಪ್ರಾಯವನ್ನು ಹೇಳಲಾಗುವುದಿಲ್ಲ, ಎಂದರು. ಅದಕ್ಕೆ ಆ ಶ್ರೀವೈಷ್ಣವನು, ಸ್ವಾಮಿನ್, ಚಿತ್ತಯಿಸಬೇಕು. ಅನಂತಾರ್ಯರ ಸಿರಿವಾಳಿಗೆಯಲ್ಲಿ ನಡೆಯುವ ಶ್ರೀವೈಷ್ಣವತದೀಯಾರಾಧನಗೋಷ್ಠಿಯಲ್ಲಿ ಕುಳಿತಿದ್ದ ನನ್ನನ್ನು, ಅವರು, ಬೇರೆ ಬೇರೆ ಕಡೆಗಳಲ್ಲಿ ಕುಳ್ಳಿರಿಸಿದರು. ಅವರು ಹೇಳಿದ ಕಡೆಯಲ್ಲಿ ಕುಳಿತು, ನಾನು ಪ್ರಸಾದಸ್ವೀಕಾರವನ್ನು ಮಾಡಿದೆನು, ಎಂದು ಹೇಳಿದನು. ಆ ಮಾತ ಕೇಳಿ, ಭಟ್ಟರು ಹೃಷ್ಟರಾಗಿ, ಅಯ್ಯ, ಶ್ರೀವೈಷ್ಣವನು ಯಾವ ಮಹಾಭಾಗವತರ ಮನೆಗಾದರೂ ತೀರ್ಥಪ್ರಸಾದಸ್ವೀಕಾರಮಾಡಲಿಕ್ಕೆ ಹೋದರೆ, ಆ ಭಾಗವತರು ಹೇಳಿದೆಡೆಯಲ್ಲಿ ಕುಳಿತು, ಸಂತೋಷದಿಂದ ಪ್ರಸಾದವನ್ನು ಸ್ವೀಕರಿಸಬೇಕು, ಎಂದು ತಿಳಿಸಿದರು.

ಈ ರೀತಿಯಾಗಿ, ಅನಂತಾರ್ಯರು ಹೇಳಿದ ಶ್ರೀವೈಷ್ಣವಲಕ್ಷಣದ ತಾತ್ಪರ್ಯವನ್ನು, ಶ್ರೀವೈಷ್ಣವರೆಲ್ಲರಿಗೂ ತಿಳಿಯುವ ಹಾಗೆ, ಶ್ರೀಪರಾಶರಭಟ್ಟರು ವಿವರಣೆ ಮಾಡಿದರು.

ಒಂದಾನೊಂದು ಕಾಲದಲ್ಲಿ, ಶ್ರೀಮದನಂತಾರ್ಯರು, ಪಶ್ಚಿಮದೇಶದ ತಮ್ಮ ಶಿಷ್ಯರನ್ನು ಅನುಗ್ರಹಿಸಲೋಸುಗ, ಪಯಣಹೊರಟು, ತಾವು ಹುಟ್ಟಿದೆಡೆಯಾದ ಶಿರುಪುತ್ತೂರಿಗೆ ಬಂದು, ಶಿಷ್ಯಮಂಡಲಿಗೆ ತತ್ತ್ವಾರ್ಥೋಪದೇಶಗಳನ್ನು ಮಾಡುತ್ತ, ಕೆಲವು ದಿವಸಗಳ ವರೆಗೆ ಅಲ್ಲಿಯೇ ನಿಂತುಬಿಟ್ಟರು. ಆ ಕಾಲದಲ್ಲಿ, ಪಡುವನಾಡಿನೊಳಗೆ, ವೇದಾಂತಿ* ಯೆಂಬವರೊಬ್ಬರು ಪ್ರಸಿದ್ಧ ವಿದ್ವಾಂಸರೆನಿಸಿಕೊಂಡಿದ್ದರು. ಶ್ರೀ

*ಇವರು ಕ್ರಿಸ್ತವರ್ಷ 1054ರಲ್ಲಿ ಶೃಂಗೇರಿಯಲ್ಲಿ ಹುಟ್ಟಿ ಮಹಾವಿದ್ವಾಂಸರೂ ಶ್ರೀಮಂತರೂ ಆಗಿ ಕಂಗೋರೆಯಲ್ಲಿ ವಾಸಮಾಡುತ್ತ ಬಹುಮಂದ ಶಿಷ್ಯರೊಡಗೂಡಿ ಇದ್ದರು. ಈ ಕಂಗೋರೆಯು ಮೇಲುಗೋಟೆಯ ಉತ್ತರಕ್ಕೆ ಮೂರು ಮೈಲಿಗಳ ದೂರದಲ್ಲಿ ಇರುವ "ಕಂಗೋಡನಹಳ್ಳಿ" ಎಂದು ಹೇಳುತ್ತಾರೆ. ಇವರು ಅದ್ವೈತಿಗಳು; ಇವರ ಪ್ರಖ್ಯಾತಿಯನ್ನು ಕೇಳಿ, ಶ್ರೀಪರಾಶರಭಟ್ಟರು ಶ್ರೀರಂಗದಿಂದ ಕಂಗೋರೆಗೆ ಬಂದು, ಇವರ ಸಂಗಡ ಏಳು ದಿನಗಳ ವರೆಗೆ ವಾದಮಾಡಿ, ಗೆದ್ದು, ಇವರಿಗೆ ಶ್ರೀವೈಷ್ಣವದೀಕ್ಷೆಯನ್ನು ಕೊಟ್ಟು, ಮಾಧವದಾಸನೆಂಬ ದಾಸ್ಯನಾಮವನ್ನು ಅನುಗ್ರಹಿಸಿ ಶ್ರೀರಂಗಕ್ಕೆ ಮತ್ತೆ ಹೊರಟುಹೋದರು.

ರಾಮಾನುಜಾಚಾರ್ಯರ ಅಪ್ಪಣೆಯ ಮೇರೆಗೆ, ಅವರನ್ನು ವಾದದಲ್ಲಿ ಗೆಲ್ಲಲೋಸುಗ, ಶ್ರೀಪರಾಶರಭಟ್ಟರವರು, ಶ್ರೀರಂಗನಾಥನ ಅಜ್ಞೆಯನ್ನು ಪಡೆದು, ಪಶ್ಚಿಮದೇಶಕ್ಕೆ ಪ್ರಯಾಣಮಾಡಿ ಹಾದಿಯಲ್ಲಿ ಶ್ರೀಮದನಂತಾರ್ಯರು ವಾಸಿಸುತ್ತಿದ್ದ ಶಿರುಪುತ್ತೂರಿಗೆ ಬಿಜಯಮಾಡಿಸಿ, ಶ್ರೀಮದನಂತಾರ್ಯರನ್ನು ಕಂಡು, ಅವರ ಸಿರಿಯಡಿಗಳಿಗೆ ಸಾಷ್ಟಾಂಗವಾಗಿ ನಮಸ್ಕರಿಸಿದರು. ಅನಂತಾರ್ಯರು, ದಿಗ್ಗನೆ ಎದ್ದು ನಿಂದು, ತಮ್ಮ ಪಾದಗಳಿಗೆ ನಮಸ್ಕಾರಮಾಡಿದ ಪರಾಶರಭಟ್ಟರನ್ನು ಹಿಡಿದೆತ್ತಿ, ಬಿಗಿಯಪ್ಪಿ, ಶ್ರೀಕೂರನಾಥಕುಮಾರರು ಬಿಜಯಮಾಡಿದರು, ಶ್ರೀವೈಷ್ಣವಮಹಾರಾಜರು ಬಿಜಯಂಗೆಯ್ದರು, ಎಂದು ಕೊಂಡಾಡುತ್ತ, ಅವರನ್ನೂ ಪರಿಜನರನ್ನೂ ಆದರಾತಿಶಯದಿಂದ ಸತ್ಕರಿಸಿದರು. ಶ್ರೀಪರಾಶರಭಟ್ಟರು, ತಾವು ಈ ನಾಡಿಗೆ ಬಿಜಯಮಾಡಿದುದರ ಕಾರಣವನ್ನು ಅನಂತಾರ್ಯರಿಗೆ ತಿಳುಹಿ, ತರುವಾಯ ಅವರನ್ನೂ ಸಂಗಡ ಕರೆದುಕೊಂಡುಹೋಗಿ, ವೇದಾಂತಿಯ ಸಂಗಡ ವಾದಮಾಡಿ ಅವರನ್ನು ಜಯಿಸಿ, ಅವರಿಗೆ ಶ್ರೀವೈಷ್ಣವದೀಕ್ಷೆಯನ್ನಿತ್ತು, ಹಿಂದಿರುಗಿ, ಅನಂತಾರ್ಯರನ್ನು ಶಿರುಪುತ್ತೂರಲ್ಲಿ ಬಿಟ್ಟು, ಶ್ರೀರಂಗಕ್ಕೆ ಬಿಜಯಮಾಡಿಸಿದರು.

ಕೆಲವು ದಿನಗಳು ಕಳೆದ ಬಳಿಕ, ಇತ್ತ, ವೇದಾಂತಿಗಳು ಪರಮವಿರಕ್ತರಾಗಿ, ತಮ್ಮ ಹಣವನ್ನೆಲ್ಲ ಮೂರು ಪಾಲುಗಳಾಗಿ ವಿಂಗಡಿಸಿ, ಇಬ್ಬರು ಹೆಂಡಿರಿಗೂ ಎರಡು ಪಾಲುಗಳನ್ನಿತ್ತು, ಸನ್ಯಾಸಿಯಾಗಿ, ತಮ್ಮಪಾಲಿನ ಹಣವನ್ನು ಆಚಾರ್ಯರಿಗೆ ಒಪ್ಪಿಸಲೋಸುಗ ಸಂಗಡ ತೆಗೆದುಕೊಂಡು, ಆಚಾರ್ಯಶುಶ್ರೂಷೆಯಲ್ಲಿ ಆಸಕ್ತರಾಗಿ ಶ್ರೀರಂಗಕ್ಕೆ ಪ್ರಯಾಣಮಾಡಿ, ಮಾರ್ಗವಶಾತ್ ಶಿರುಪುತ್ತೂರಿಗೆ ಬಂದು, ಶ್ರೀಮದನಂತಾರ್ಯರಿಗೆ ವಂದಿಸಿದರು. ಅವರನ್ನು ನೋಡಿ, ಅನಂತಾರ್ಯರು, ಎಲೈ ವೇದಾಂತಿಗಳೇ, ಸುಕುಮಾರಶರೀರಿಗಳಾದ ನೀವು, ಏಕೆ ಸನ್ಯಾಸಿಯಾದಿರಿ ? ಇದರಿಂದ ನಿಮಗೆ ಮುಕ್ತಿಯು ದೊರಕುವುದೋ ? ಮೆಯ್ಯು ಬೆವರಿದಾಗ ಮಿಂದು, ಹಸಿದಾಗ ಊಟಮಾಡಿ, ಭಟ್ಟರ ಸಿರಿಯಡಿಗಳನ್ನು ಶರಣೆಂದುಕೊಂಡಿದ್ದರೆ, ನಿಮ್ಮನ್ನು ಪರಮಪದದತ್ತಣಿಂದ ತಳ್ಳಿಬಿಡುತ್ತಿದ್ದರೇನೋ! ತಳ್ಳಿಬಿಡುವರೋ ಎಂಬ ಶಂಕೆಯಿಂದ, ನೀವು ಸನ್ಯಾಸಿಯಾದಿರೋ, ಹೇಗೆ ? ಉಃ ! ಆದುದು ಆಗಿಹೋಯಿತು, ಮಿಂಚಿಹೋದುದಕ್ಕೆ ಚಿಂತಿಸಿ ಫಲವೇನು ? ಮೂಲಮಂತ್ರದಲ್ಲಿ ಹುಟ್ಟಿ, ದ್ವಯದಲ್ಲಿ ಬಳೆದು, ದ್ವಯೈಕನಿಷ್ಠರಾಗಿ ಇರಿ, ಎಂದು ಹರಸಿ ಅವರನ್ನು ಶ್ರೀರಂಗಕ್ಕೆ ಬೀಳುಕೊಟ್ಟರು.

ಆಮೇಲೆ ಅವರು ಶ್ರೀರಂಗಕ್ಕೆ ಹೋಗಿ, ಆಚಾರ್ಯರಿಗೆ ವಂದಿಸಿ, ತಂದ ಹಣವನ್ನು ಗುರುದಕ್ಷಿಣೆಯಾಗಿ ಒಪ್ಪಿಸಿಬಿಟ್ಟರು. ಶ್ರೀಪರಾಶರಭಟ್ಟರು ಇವರನ್ನು ಕಂಡು, ಸಂತುಷ್ಟರಾಗಿ, "ನಂ ಜೀಯರ್ ವಂದಾರ್'', ನಮ್ಮ ಜೀಯರು ಬಂದರು, ಎಂದು ಆದರಿಸಿದರು. ಅಂದಿನಿಂದ, ಇವರಿಗೆ ನಂಜೀಯರ್ ಎಂದೇ ವ್ಯವಹಾರನಾಮವಾ

ಯಿತು. ಇವರು ಆಚಾರ್ಯರ ಅಪ್ಪಣೆಯನ್ನು ಪಡೆದು, ನಮ್ಮಾಳ್ವಾರವರ "ತಿರುವಾಯ್ಮೊಳಿ" ಎಂಬ ದ್ರಾಮಿಡಸಹಸ್ರಗಾಥೆಗಳಿಗೆ, "ಒಂಬದಿನಾಯಿರಪ್ಪಡಿ" ಎಂಬ, ಒಂಬತ್ತು ಸಾವಿರ ಗ್ರಂಥಗಳುಳ್ಳ ವ್ಯಾಖ್ಯಾನವನ್ನು ರಚಿಸಿದ್ದಾರೆ.

ಆಮೇಲೆ ಅನಂತಾರ್ಯರು ಶ್ರೀವೇಂಕಟನಾಥನ ಸನ್ನಿಧಿಯನ್ನು ಬಿಟ್ಟು ಬಹು ದಿನಗಳು ಆಗಿದ್ದುದರಿಂದ, ತತ್ಕೈಂಕರ್ಯವನ್ನು ಮಾಡಬೇಕೆಂಬ ಆತುರವುಳ್ಳವರಾಗಿ, ಸಕಲಶಿಷ್ಯಪರಿವೃತರಾಗಿ ವೇಂಕಟಾಚಲಕ್ಕೆ ಬಿಜಯಮಾಡಿದರು. ಅಲ್ಲಿ, ಅವರು ಸ್ವಾಮಿಗೆ ಸಕಲವಿಧವಾದ ಕೈಂಕರ್ಯಗಳನ್ನೂ ಎಂದಿನಂತೆ ಮಾಡಿಕೊಂಡು ಸುಖವಾಗಿರುತ್ತಿದ್ದರು. ಅವರ ಶಿಷ್ಯಮಂಡಲಿಯಲ್ಲಿ ಕೆಲವರು, ಅಲ್ಲಿಂದ ಬೇರೆಯೆಡೆಗೆ ಪಯಣಮಾಡಬೇಕಾಗಿ ಬಂದುದರಿಂದ, ಶ್ರೀಮದನಂತಾರ್ಯರ ಶ್ರೀಪಾದಂಗಳಲ್ಲಿ ಕುಂಬಿಟ್ಟು, ಎಲೈ ಸ್ವಾಮಿಯೇ, ನಿಮ್ಮ ಚರಣಸಮಾಶ್ರಯಣದಿಂದ ನಾವು ಸತ್ತ್ವಯುಳ್ಳವರಾದೆವು. ನಮಗೆ ಯಾವ ಬಗೆಯಿಂದಲೂ ಕೇಡು ತಟ್ಟದು, ಎಂಬ ನಂಬುಗೆಯುಂಟು; ಆದರೂ ಬದುಕಿರುವ ವರೆಗೂ ನಾವು ಹೇಗೆ ನಡೆದುಕೊಳ್ಳತಕ್ಕುದೋ, ಬುದ್ಧಿಗಲಿಸಿ ರಕ್ಷಿಸಬೇಕು, ಎಂದು ಬೇಡಿಕೊಂಡರು. ಆಗ, ಅನಂತಾರ್ಯರು ಅವರನ್ನೆಲ್ಲ ನೋಡಿ, ಎಲೈ ಶ್ರೀವೈಷ್ಣವರಿರಾ, ಕೇಳಿರಿ, ನೀವು ಬದುಕಿರುವ ವರೆಗೂ, ಕೆಟ್ಟವರ ಸಂಗವನ್ನು ಮಾಡಬೇಡಿರಿ; ಶಿಷ್ಟರ ಸಂಗವನ್ನೇ ಮಾಡಿರಿ; ಸತ್ಸಂಗದಿಂದ, "ಸದಾಪಶ್ಯಂತಿ," ಎಂದು ಶ್ರುತಿಯಲ್ಲಿ ಹೇಳಿರುವಂತೆ, ನಿಮಗೆ ಸುಖವುಂಟಾಗುತ್ತದೆ; ದುಸ್ಸಹವಾಸದಿಂದ, ಕೇಡೇ ತಲೆಗಟ್ಟುತ್ತದೆ. ಸದಸತ್ಸಂಗಗಳಿಂದಾಗುವ ಫಲವನ್ನು ಕುರಿತು, ನಿಮಗೆ ಪುರಾಣದ ಕಥೆಯೊಂದನ್ನು ಹೇಳುತ್ತೇನೆ, ಕೇಳಿರಿ, ಎಂದು ಹೇಳತೊಡಗಿದರು.

ಒಂದಾನೊಂದು ಕಾಲದಲ್ಲಿ, ಶೌನಕರೇ ಮೊದಲಾದ ಮಹರ್ಷಿಗಳು ಯಾವುದೋ ದಿವ್ಯದೇಶಕ್ಕೆ ಯಾತ್ರೆ ಹೊರಟರು. ಬಹುದೂರ ಪ್ರಯಾಣವಾದ ಮೇಲೆ, ಅವರು ದೊಡ್ಡ ಕಾಡನ್ನು ಹಾದು ಹೋಗಬೇಕಾಯಿತು. ಸಾಲದುದಕ್ಕೆ, ಹಗಲಿರುಳೆನ್ನದೆ ಏಳು ದಿನಗಳ ವರೆಗೆ ಬಿರುಮಳೆಯು ಸುರಿಯತೊಡಗಿತು. ಅಲ್ಲಿ ಅವರಿಗೆ ನಿಲ್ಲುವುದಕ್ಕೆ ಸರಿಯಾದ ಸ್ಥಲವಾವುದೂ ದೊರೆಯಲಿಲ್ಲ. ನಡುಗಾಡಿನೊಳಗೆ ಬೇಡರ ಹಳ್ಳಿಯೊಂದು ಕಾಣಿಸಿತು. ಅಲ್ಲಿ ಹೋಗಿ ನಿಲ್ಲುವುದು ಸರಿಯಲ್ಲವೆಂದು ಮೊದಲು ಅವರಿಗೆ ತೋರಿತು. ಆದರೆ ಮಳೆಯ ಹೊಡೆತವು ಬಲವಾಯಿತು. ತರುವಾಯ, ಅವರು, "ಆಪತ್ಕಾಲೇ ನಾಸ್ತಿ ಮರ್ಯಾದಾ," ಎಂದುಕೊಂಡು, ಆ ಹಳ್ಳಿಯನ್ನೇ ಹೊಕ್ಕರು. ಬೇಡರೆಲ್ಲರೂ ಬೇಟೆಗೆ ಹೋಗಿದ್ದರು. ಹಳ್ಳಿಯು ಬರಿದಾಗಿದ್ದಿತು. ಒಂದು ಗಿಣಿಯು ಮಟ್ಟಿಗೆ ಅಲ್ಲಿ ಇದ್ದಿತು. ಹಳ್ಳಿಯೊಳಗೆ ಬಂದ ಋಷಿಗಳನ್ನು ನೋಡಿ, ಆ ಗಿಣಿಯು, ಎಲಾ, ನೀವು ಯಾರು? ಏಕೆ ಇಲ್ಲಿಗೆ ಬಂದಿರಿ? ಬ್ರಾಹ್ಮಣರೇ ಬರಬಾರದ

ಇಲ್ಲಿಗೆ ಋಷಿಗಳಾದ ನೀವು ಬರಬಹುದೇ ? ನಿಮಗೆ ನಾಚಿಕೆಯಿಲ್ಲವೇ ? ನಡೆಯಿರಿ, ನಡೆಯಿರಿ, ಎಂದು ಬಿರುಸಾಗಿ ನುಡಿಯಿತು. ಆ ಮಹರ್ಷಿಗಳು, ಕೊಂಚ ಹಿಂಜರಿದು, ಮಳೆಯು ನಿಲ್ಲುವ ತನಕ ಎಲ್ಲಿಯಾದರೂ ಇರೋಣವೆಂದುಕೊಂಡು, ಒಂದು ಮರದ ಬುಡದಲ್ಲಿ ನಿಂತುಕೊಂಡರು. ಆ ಗಿಳಿಯು ಅಲ್ಲಿಗೂ ಬಂದು, ಅವರನ್ನು ನೋಡಿ, ಎಲೆಲ ಮುಕ್ಕಗಳಿರಾ, ನಿಮಗೆ ಬುದ್ಧಿಗಿದ್ಧಿಯಿದೆಯೋ, ಇಲ್ಲವೋ ? ಇಲ್ಲಿಂದ ಹೊರ ಟುಹೋಗಿರಿ ಎಂದು ಹೇಳಿದರೂ, ಏಕೆ ಕಳ್ಳರ ಹಾಗೆ ಇಲ್ಲಿಯಲ್ಲಿ ಅಲೆಯುತ್ತಿದ್ದೀರಿ ? ನಡೆಯಿರಿ, ಎಂದು ಗದ್ದರಿಸಿತು. ಗಿಳಿಯ ಬಿರುನುಡಿಗಳಿಂದ ನೊಂದು, ಮುನಿಗಳು, ಆ ತಾವನ್ನು ಬಿಟ್ಟು, ಕೊಂಚದೂರ ಮುಂದಕ್ಕೆ ಹೋದರು. ಅಲ್ಲಿ ಒಂದು ಋಷ್ಯಾಶ್ರಮವು ಅವರಿಗೆ ಕಾಣಿಸಿತು. ಎಲ್ಲರೂ ಸಂತೋಷದಿಂದ ಅಲ್ಲಿಗೆ ಹೋದರು. ಋಷಿಗಳೆಲ್ಲರೂ ಸ್ನಾನಾರ್ಥವಾಗಿ ಹೋಗಿದ್ದುದರಿಂದ, ಆಶ್ರಮದಲ್ಲಿ ಯಾರೂ ಇರಲಿಲ್ಲ. ಒಂದು ಗಿಣಿಯು ಮಾತ್ರವಿದ್ದಿತು. ಈ ಋಷಿಗಳನ್ನು ಕಂಡೊಡನೆಯೇ, ಅದು ಸಂತೋಷದಿಂದ ಇದಿರು ಬಂದು ವಂದಿಸಿ, ಎಲೈ ಮಹಾತ್ಮರಿರಾ, ತಾವು ಎತ್ತಣಿಂದ ಇಲ್ಲಿಗೆ ಬಿಜಯಮಾಡುತ್ತಿದ್ದೀರಿ ? ನಿಮಗೆ ಸ್ವಾಗತವೇ ? ಈ ಅರ್ಘ್ಯಪಾದ್ಯಗಳನ್ನು ಸ್ವೀಕರಿಸಬೇಕು ; ಈ ಕಂದಮೂಲಗಳನ್ನೂ ಫಲಗಳನ್ನೂ ಯಥಾಸಾವಕಾಶವಾಗಿ ಭೋಜನಮಾಡಿರಿ ; ಎಲ್ಲರೂ ಈ ಆಸನಗಳಲ್ಲಿ ಕುಳಿತು ಕೊಳ್ಳಿರಿ, ಎಂದು, ಎಲ್ಲರನ್ನೂ ಸವಿಮಾತುಗಳಿಂದ ಸತ್ಕರಿಸಿತು. ಮುನಿಗಳೆಲ್ಲರೂ ಹೃಷ್ಟರಾಗಿ, ಒಳಹೊಕ್ಕು, ಆಸನಗಳಲ್ಲಿ ಕುಳಿತುಕೊಂಡರು. ಬಳಿಕ, ಆ ಶುಕವು, ಶ್ರೌತಪ್ರಕ್ರಿಯೆಯಿಂದ, ಅವರನ್ನು ಸ್ತುತಿಸಿತು. ಶೌನಕಾದಿಮಹರ್ಷಿಗಳು ಪರಮಾನಂದಭರಿತರಾದರು. ತರುವಾಯ, ಶೌನಕರು, ಆ ಗಿಣಿಯನ್ನು ನೋಡಿ, ಅಯ್ಯ, ಕೊಂಚ ಮುಂಚೆ ಬೇಡರ ಹಳ್ಳಿಯಲ್ಲಿ ಒಂದು ಗಿಣಿಯನ್ನು ಕಂಡೆವು ; ಅದು ನಾನಾದುರ್ಭಾಷೆಗಳನ್ನಾಡಿ ನಮಗೆ ನೋವನ್ನು ಉಂಟುಮಾಡಿತು. ನೀನು, ಸಕಲೋಪಚಾರಗಳನ್ನೂ ಮಾಡಿ, ನಮ್ಮನ್ನು ಸಂತಸಗೊಳಿಸಿದ್ದೀಯೆ. ಒಂದೇ ಜಾತಿಯ ಹಕ್ಕಿಗಳಾಗಿದ್ದರೂ, ನಿಮ್ಮಿಬ್ಬರ ಗುಣಗಳಲ್ಲಿ, ಇಷ್ಟೊಂದು ಹೆಚ್ಚುಕಡಿಮೆಯಿರಲಿಕ್ಕೆ ಕಾರಣವೇನು, ಎಂದು ಕೇಳಿದರು. ಅದಕ್ಕೆ, ಆ ಗಿಣಿಯು, ಎಲೈ ಮಹಾಭಾಗವತರೇ, ಲಾಲಿಸಬೇಕು. ನಾವಿಬ್ಬರೂ ಒಂದೇ ಜಾತಿಯ ಹಕ್ಕಿಗಳುಮಾತ್ರವೇ ಅಲ್ಲ, ಒಂದೇ ತಾಯ ಮಕ್ಕಳು. ನಾನು ಮುನಿಗಳ ಬಳಿಯಲ್ಲಿ ಬಳೆದು, ಅವರ ಮಾತುಗಳನ್ನು ಕೇಳುತ್ತಿದ್ದೇನೆ. ಅದು, ಕಟುಕರ ಹತ್ತಿರ ಬಳೆದು, ಅವರ ಮಾತುಗಳನ್ನು ಕೇಳುತ್ತಿದೆ. ಒಳ್ಳೆಯ ಚಾಳಿಯಾಗಲಿ, ಕೆಟ್ಟ ಚಾಳಿಯಾಗಲಿ, ಸಹವಾಸದಿಂದ ಉಂಟಾಗುವುದೆಂಬುದು ತಮಗೆ ವೇದ್ಯವಾಗಿಯೇ ಇದೆ, ಎಂದು ಹೇಳಿತು. ಅದರ ಮಾತ ಕೇಳಿ, ಶೌನಕರು ತಲೆದೂಗಿ, ಎಲೇ ಗಿಳಿಯೇ, ನೀನು ನಮಗೆ ಮಾಡಿದ ಸತ್ಕಾರಕ್ಕಾಗಿ, ನಿನಗೆ ಉತ್ತಮ ಲೋಕಗಳು ದೊರೆಯಲಿ, ಎಂದು ಹರಸಿ ಶಿಷ್ಯರೊಡನೆ ಮುಂದೆ ಪಯಣಮಾಡಿದರು.

ಅನಂತಾರ್ಯರು, ಶಿಷ್ಯರಿಗೆ, ಈ ಕಥೆಯನ್ನು ಹೇಳಿ, ಅಯ್ಯ ಕೇಳಿರಿ, ಸತ್ಸಹವಾಸದಿಂದ, "ಸದಾಪಶ್ಯಂತಿ" ಎಂದು, ಶ್ರುತಿಯಲ್ಲಿ ಹೇಳಿರುವ ಫಲವುಂಟಾಗುವುದು; ದುಸ್ಸಂಗದಿಂದ ಹಾನಿಯೇ ತಲೆಗಟ್ಟುತ್ತದೆ, ಎಂದು ಚೆನ್ನಾಗಿ ನಂಬಿ, ದೇಹವಿರುವವರೆಗೂ ಸತ್ಸಂಗವನ್ನೇ ಮಾಡತಕ್ಕದು, ಎಂದು ಅವರಿಂದ ಪ್ರತಿಜ್ಞೆ ಮಾಡಿಸಿಕೊಂಡು ಅವರನ್ನು ಬೀಳುಕೊಟ್ಟರು. ಅನಂತಾರ್ಯರು ಹೀಗೆಯೇ ಶ್ರೀವೇಂಕಟನಾಥನ ಕೈಂಕರ್ಯದಲ್ಲಿ ಕೆಲವು ದಿನಗಳಿದ್ದು, ಸ್ವಾಮಿಯ ಅಪ್ಪಣೆಯಂತೆ, ಲೀಲಾವಿಭೂತಿಯಿಂದ ನಿತ್ಯವಿಭೂತಿಗೆ ಬಿಜಯಮಾಡಿದರು.

ವಿಲಸದನಂತಸೂರಿಚರಿತಾಮೃತಸಿಂಧುವೊಳೊಂದೆರಳ್ಕಣಂ ।
ಗಳನೊಸೆದಿತ್ತನೊಲ್ವುದು ಬುಧರ್ ಪ್ರಬಲರ್ಕಳೆನಿಪ್ಪ ಕೋವಿದರ್ ॥
ಸಲೆ ಬಗೆಯೊಪ್ಪವಂತದರೊಳೇಸುವುದೀಂಟದೊಡೊಂದೆರಳ್ಕಣಂ ।
ಗಳ ಜಲಮಂ ಮುಗಿಲ್, ಕಡಲ ವಾರಿಯದೇಂ ಗಳ ಬತ್ತಿಪೋಪುದೇ ॥

ಶ್ರೀಮಚ್ಛೇಷಕುಲಾಂಬುಧಿ ।
ಸೋಮಂ ಶ್ರೀವೇಂಕಟಾದ್ರಿಧಾಮುಂ ವಿಬುಧ ॥
ಪ್ರೇಮಿ ಶ್ರೀರಂಗಾರ್ಯಸು ।
ಧೀಮುಕುರಂ ಫಣಿಪಸೂರಿಚರಿತಮನೊರೆದಂ ॥

ಎಂಬಲ್ಲಿಗೆ ಶ್ರೀವೇಂಕಟೇಶಭಕ್ತಾಗ್ರೇಸರ ಶ್ರೀಮದನಂತಾರ್ಯ
ಚರಿತ್ರೆಯ ಆರನೆಯ ಪ್ರಕರಣಂ.

## ಪರಿಶಿಷ್ಟ ೧.

ಒಂದು ಸಮಯದಲ್ಲಿ, ಶ್ರೀರಂಗನಗರದಲ್ಲಿ ಶ್ರೀರಾಮಾನುಜ ಮುನಿಗಳನ್ನು ಆಶ್ರಯಿಸಿದ ಕುಮಾರಾನಿದ್ರಾಳುಧನುರ್ದಾಸ, ಕು ಮಾ ರ ಮ ಹಾ ಬ ಲಿ ಬಾ ಣಾ ಧಿ ರಾ ಜ, ಅರ್ಜುನಗ್ರಾಮಪೂರ್ಣ, ಲಘ್ವಾಚಾರ್ಯರೆಂಬ ನಾಲ್ವರೊಳಗೆ, ನಾಲ್ಕನೆಯ ಲಘ್ವಾಚಾರ್ಯ (ಶಿರಿಯಾಂಡಾ್) ಎಂಬವರು ಆಗಲೇ ಪರಮಪದವನ್ನು ಆಶಿಸಿ, ನೀರು ಸಿಕ್ಕದೆ, ನಾಲಗೆಯೊಣಗಿ, ಬಾಯಾರಿಕೆಯಿಂದ ಸಾಯಬುವವನಂತೆ, ಸಂಸಾರವೆಂಬ ಮರಳುಗಾಡಿನಲ್ಲಿ, ತಾಪತ್ರಯಗಳಿಂದ ಪೀಡಿತನಾಗಿರುವ ನಾನು, ಹೀಗೆ ತೃಪ್ತಿಯಿಲ್ಲದ ಅಮೃತವನ್ನು ಪಡೆಯದೆ ಪ್ರಾಣಗಳನ್ನು ಇರಿಸೆನು ಎಂದು ಶ್ರೀರಾಮಾನುಜರಲ್ಲಿ

[illegible]ಕೊಂಡರು. ಆಗ ಅವರು, ಲಘ್ವಾರ್ಯರೇ, ನಿಮ್ಮ ಅಭಿಮತವಾದ ಪ್ರಾಪ್ಯ[illegible]ಕೊಡತಕ್ಕವನು ಶ್ರೀನಿವಾಸನಲ್ಲವೇ, ನೀವು ವೇಂಕಟಾಚಲಕ್ಕೆ ಹೋಗಿ, ಅನಂತಾರ್ಯರ ಪುರುಷಕಾರದಿಂದ ಭಗವಂತನ ಬಳಿಗೆ ಹೋಗಿ, ಪುರುಷಾರ್ಥವನ್ನು ಪಡೆಯಿರಿ, ಎಂದು ಹೇಳಿದರು. ಶ್ರೀವೇಂಕಟನಾಥನಲ್ಲಿರುವ ಪ್ರಾವಣ್ಯಾತಿಶಯದಿಂದ, ಲಘ್ವಾಚಾರ್ಯರು ಆಗಲೇ ಹೊರಟು, ಶ್ರೀವೇಂಕಟಾದ್ರಿಗೆ ಬಂದು, ಅನಂತಾರ್ಯರಿಗೆ ನಮಸ್ಕರಿಸಿ, ತಮ್ಮ ಆಶಯವನ್ನೂ, ಶ್ರೀರಾಮಾನುಜಮುನಿಗಳ ದಿವ್ಯಾಜ್ಞೆಯನ್ನೂ, ಅವರಲ್ಲಿ ಬಿನ್ನಹಮಾಡಿಕೊಂಡರು. ಆಗ ಅನಂತಾರ್ಯರು, ಆಹಾ! ಈ ಲಘ್ವಾರ್ಯರು ಪರಮಾರ್ತಿಸಂಪನ್ನರು ; ಸಕಲಕಲ್ಯಾಣಗುಣಶಾಲಿಗಳೂ, ಸದಾಚಾರ್ಯಪದಮುಖ್ಯರೂ ಎನಿಸಿದ ಶ್ರೀರಾಮಾನುಜ ಮುನಿಗಳು ಇವರಿಗೆ ಆಚಾರ್ಯರು; ಪುರುಷಾರ್ಥವನ್ನು ಕರುಣಿಸುವವನು, ಸರ್ವಜ್ಞನೂ ಸರ್ವಶಕ್ತನೂ ಸಮಸ್ತಕಲ್ಯಾಣಗುಣಗಣಮಹೋದಧಿಯೂ ಎನಿಸಿದ ಶ್ರೀವೇಂಕಟನಾಥನು ; ಆದುದರಿಂದ ಇವರ ಪುರುಷಾರ್ಥವು ಈಗಲೇ ಕೈಸೇರದಿರದು, ಎಂದು ಆಲೋಚನೆಮಾಡಿ, "ಇವರು ನೆಪಮಾತ್ರಕ್ಕೆ ನನ್ನ ದೆಸೆಯಿಂದ ಪುರುಷಕಾರಕೃತ್ಯವನ್ನು ಬಯಸುತ್ತಿದ್ದಾರೆ. ಪುರುಷಕಾರವನ್ನು ಮಾಡು, ಎಂದು ಶ್ರೀರಾಮಾನುಜಮುನಿಗಳು ಆಜ್ಞಾಪಿಸಿರುತ್ತಾರೆ" ಎಂದು ಅನುಸಂಧಾನವನ್ನು ಮಾಡಿ, ಸಮಾಹಿತಚಿತ್ತದಿಂದ, ಎಲೈ ಲಘ್ವಾರ್ಯರೇ, ಬನ್ನಿರಿ, ಭಗವದ್ರಾಮಾನುಜಮುನಿಗಳ ದಿವ್ಯಾಜ್ಞಾನುಸಾರವಾಗಿ, ಭಗವಂತನ ಸನ್ನಿಧಿಗೆ ಹೋಗೋಣ, ಎಂದು ಹೇಳಿ, ಅವರೊಡನೆ ಶ್ರೀವೇಂಕಟನಾಥನನ್ನು ಹೊದ್ದಿದರು.

ಬಳಿಕ ಅವರಿಬ್ಬರೂ ಭಗವಂತನಿಗೆ ನಮಸ್ಕರಿಸಿ, ಭಗವತ್ಸನ್ನಿಧಿಯಲ್ಲಿ ಅವನನ್ನೇ ಧ್ಯಾನಿಸುತ್ತ ನಿಂದಿರಲು, ಶ್ರೀವೇಂಕಟನಾಥನು ಕರುಣಾಶೀತಲವಾದ ಕಡೆಗಣ್ಣಿನಿಂದ ಅವರಿಬ್ಬರನ್ನೂ ನೋಡಿ, ತೀರ್ಥ, ಶ್ರೀಶಠಕೋಪ, ಮಾಲ್ಯ, ಶೇಷವಸ್ತ್ರ, ದಿವ್ಯಾಂಗರಾಗಗಳನ್ನು ಇಬ್ಬರಿಗೂ ಕೊಡಿಸಲು, ಇಬ್ಬರೂ ಅವುಗಳಿಂದಲಂಕೃತರಾಗಿ, ಪ್ರಸಾದವನ್ನು ಸ್ವೀಕರಿಸಿದರು. ಅವರು ಇನ್ನೂ ಅಲ್ಲಿಯೇ ನಿಂತಿರಲು, ಅದನ್ನು ಕಂಡು, ಭಗವಂತನು ಶಂಕಿಸಿ, ಎಲೈ ಅನಂತಾರ್ಯರೇ, ನೀವು ನನ್ನಲ್ಲಿ ಆವುದನ್ನೋ ವಿಜ್ಞಾಪಿಸಬೇಕೆಂದಿರುವಂತೆ ಕಾಣುತ್ತದೆ; ಬಿನ್ನವಿಸತಕ್ಕುದಾವುದಾದರೂ ಇದ್ದರೆ, ಅದನ್ನು ನಿಸ್ಸಂಕೋಚವಾಗಿ ಅರಿಕೆಮಾಡಿರಿ, ಎಂದು ಅಪ್ಪಣೆಮಾಡಿದನು. ಆಗ ಅನಂತಾರ್ಯರು, ಎಲೈ ಸ್ವಾಮಿಯೇ, ಕೇಳು, ಆರ್ತಪ್ರಪನ್ನರಾದ ಈ ಲಘ್ವಾರ್ಯರು, ಶ್ರೀರಾಮಾನುಜಮುನಿಗಳಿಂದ ನಿಯಮಿತರಾಗಿ, ಪರಮಪುರುಷಾರ್ಥವನ್ನು ಈಗಲೇ ನಿನ್ನ ದೆಸೆಯಿಂದ ಪಡೆಯಲೆಳಸಿ ಬಂದಿದ್ದಾರೆ; ಆದುದರಿಂದ ಇವರಿಗೆ ಈಗಲೇ ಪುರುಷಾರ್ಥವನ್ನು ಅನುಗ್ರಹಿಸು ; ನೀನೋ ಪರಮ ಕಾರುಣಿಕನು, ಆಶ್ರಿತವಾತ್ಸಲ್ಯಜಲಧಿಯು, ಸರ್ವಶಕ್ತನು, ಸಮಸ್ತಕಲ್ಯಾಣಗುಣಗಣಮಹೋದಧಿಯು, ಇನ್ನು ಹೆಚ್ಚಾಗಿ ಅರಿಕೆಮಾಡುವುದೇನಿದೆ, ಎಂದು ಬಿನ್ನವಿಸಿಕೊಂಡರು. ಆಗ ಭಗವಂತನು, ಎಲೈ ಲಘ್ವಾರ್ಯ, ದಿವ್ಯ

ಸೂರಿಗಳ ರಾಜ್ಯಪದವನ್ನೂ, ಪರಮಪದವನ್ನೂ ನಾನು [illegible]
ಕೊಳ್ಳಿರಿ, ಎಂದು ಹೇಳಿದನು.

ಆಗ ಲಕ್ಷ್ಮಾರ್ಯರು ಶ್ರೀವೇಂಕಟನಾಥನ ಮಹೋದಾರತೆಯ[illegible] ಕಂಡು, ಸಂತುಷ್ಟರಾಗಿ, ಸ್ವಾಮಿನ್ ಅನಂತಾರ್ಯರೇ, ಶ್ರೀವೇಂಕಟನಾಥನು ತನ್ನ ಸ್ವರೂಪವನ್ನು ಮರೆತು, ನನ್ನ ಸ್ವರೂಪವನ್ನು ನೋಡುವನಾದರೆ, ತನಗೆ ಕೊಡಲಿಕ್ಕೆ ಈಗಿರುವ ಹಳೆಯ ನರಕಗಳು ಸಾಲವು; ಅಪೂರ್ವವಾದ ಬಹಳ ನರಕಗಳನ್ನು ಹೊಸದಾಗಿ ಸೃಷ್ಟಿಸಬೇಕು. ನನ್ನ ಅನಾದಿಜನ್ಮಪರಂಪರೆಗಳಲ್ಲಿ ಮಾಡಿದ ಪಾಪಪರಂಪರೆಗಳು ಎಣಿಸಲಸದಳವಾಗಿರುವಾಗ, ಸ್ವತಂತ್ರನಾದ ಸ್ವಾಮಿಯು, ಅಪರಾಧವನ್ನು ಲೆಕ್ಕ ಮಾಡಿ ದಂಡಿಸದಿರುವುದಕ್ಕಾಗದ ಕಾರಣದಿಂದ, ನನ್ನ ಸ್ವರೂಪವನ್ನು ಪರಾಮರ್ಶಿಸದೆ, ತನ್ನ ಸ್ವರೂಪವನ್ನು ಪರಾಮರ್ಶಿಸುವನಾದರೆ, ತನಗೆ ಕೊಡುವುದಕ್ಕೆ ಈಗಿರುವ ಹಳೆಯ ಪರಮಪದಗಳು ಸಾಕಾಗುವುದಿಲ್ಲ. ಅಪೂರ್ವವಾದ ಅನೇಕ ಪರಮಪದಗಳನ್ನು ಉಂಟುಮಾಡಬೇಕು. ಇವನ ದೀರ್ಘಮಹಾಹಸ್ತತೆಯು ದಿವ್ಯಸೂರಿಸೂಕ್ತಿಯಿಂದ ಸಿದ್ಧವಾಗಿರುತ್ತದೆ, ಅಲ್ಲದಿದ್ದರೆ, ಪ್ರಾರ್ಥನೆಯು ಪೂರ್ತಿಯಾಗುವುದಕ್ಕೆ ಮೊದಲೇ, "ಸೋಧ್ವನಃ ಪರಮಾಪ್ನೋತಿ ತದ್ವಿಷ್ಣೋಃ ಪರಮಂಪದಂ," ಎಂದು, ಸಕಲಸಂಸಾರಮಾರ್ಗಪರಮಸಾರಭೂತನಾದ, ಪರಮದುರ್ಲಭವಾದ, ಪರಮಪದವನ್ನು ಈಗಲೇ ಕೊಡುವುದು ಹೇಗೆ ಸಂಭವಿಸೀತು, ಎಂದು ಹೇಳಿ ಆಗಲೇ ಪರಮವ್ಯೋಮವನ್ನು ಕುರಿತು ಪಯಣಮಾಡಿದರು.

ಅನಂತಾರ್ಯರು ಪರಮ ವಿಸ್ಮಿತರಾಗಿ, ವಿಲಂಬಮಾಡದೆ ಲಕ್ಷ್ಮಾರ್ಯರಿಗೆ ಶ್ರೀಚೂರ್ಣಪರಿಪಾಲನ ರಥಯಾನಪೂರ್ವಕ ಬ್ರಹ್ಮಮೇಧಸಂಸ್ಕಾರಲಕ್ಷಣ ಚರಮ ಕೈಂಕರ್ಯವನ್ನು ಪರಪೂದರದೊಡನೆ ತಾವೇ ಮಾಡಿದರು.

ಶ್ರೀ. ವೇಂ. ಇ. ಮಾ. ಪುಟಗಳು, 149—151.

---

## ಪರಿಶಿಷ್ಟ ೨.

---

ಅನಂತಾರ್ಯ ಗುಣವೈಭವಪರಗಳಾದ ಈ ಶ್ಲೋಕಗಳು ನಿತ್ಯವೂ ಅನುಸಂಧೇಯಗಳೆಂದು ಆರ್ಯರು ಹೇಳುತ್ತಾರೆ :—

ಆಮ್ನಾಯವಾಚಾಮಪಿ ಮೃಗ್ಯಭೂಮಾ ಶ್ರೀವೇಂಕಟಕ್ಷ್ಮಾಧರದಿವ್ಯಧಾಮಾ ।
ದೇವೋಽನುಧಾವನ್ ಪ್ರದದಾತಿ ಯಸ್ಮೈ ಸ್ರಜಂ ಭಜೇಽನಂತಗುರುಂ ತಮಾದ್ಯಂ ॥
ಯತೀಂದ್ರಪಾದಾಂಬುಜಚಂಚರೀಕಂ ಶ್ರೀಮದ್ದಯಾಪಾಲದಯೈಕಪಾತ್ರಂ ।
ಶ್ರೀವೇಂಕಟೇಶಾಂಘ್ರಿಯುಗಾಂತರಂಗಂ ನಮಾಮ್ಯನಂತಾರ್ಯಮನಂತಕೃತ್ವಃ ॥